ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್–8/135/2020–21 ದಿನಾಂಕ: 14.10.2020.

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ,

**ವಿಷಯ: ದಿನಾಂಕ: 29.08.2020 ಹಾಗೂ 11.09.2020 ರಂದು ಜರುಗಿದ ಸಿಂಡಿಕೇಟ್ 8 ನೇ ಸಾಮಾನ್ಯ ಸಭೆಗಳ ತಿದ್ದುಪಡಿ ಮಾಡಿದ ಅಂತಿಮ ನಡಾವಳಿಗಳನ್ನು ಕಳುಹಿಸುವ ಕುರಿತು.**

ಉಲ್ಲೇಖ: 1) ಈ ಕಛೇರಿ ಪತ್ರ ಸಂಖ್ಯೆ: ಬಿಸಿಯು/ ಎಸ್‌ವೈಎನ್–8/113/2020–21 ದಿನಾಂಕ: 22.09.2020.
2) ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ:ಆರ್. ಪಾರ್ವತಿ ರವರು ಸಲ್ಲಿಸಿದ ಇಮೇಲ್ ದಿನಾಂಕ: 23, ಸೆಪ್ಟೆಂಬರ್ 2020
3) ಈ ಕಛೇರಿ ಪತ್ರ ಸಂಖ್ಯೆ: ಬಿಸಿಯು/ ವಿಶೇಷ ಸಭೆ/131/2020–21 ದಿನಾಂಕ 12.10.2020.
4) ಕುಲಪತಿಗಳ ಅನುಮೋದನೆ ದಿನಾಂಕ: 14.10.2020.

***

ಉಲ್ಲೇಖ (1) ರ ಈ ಕಛೇರಿ ಪತ್ರದೊಂದಿಗೆ ಕಳುಹಿಸಲಾದ ಸಿಂಡಿಕೇಟ್ 8ನೇ ಸಾಮಾನ್ಯ ಸಭೆಗಳ ನಡಾವಳಿಗಳಿಗೆ ಗೌರವಾನ್ವಿತ ಸಿಂಡಿಕೇಟ್ ಸದಸ್ಯರು ಉಲ್ಲೇಖ (2) ರಲ್ಲಿ ನಮೂದಿಸಿದ ಇಮೇಲ್ ಹಾಗೂ ದಿನಾಂಕ 30.09.2020 ರಂದು ಜರುಗಿದ ಸಿಂಡಿಕೇಟ್ ವಿಶೇಷ ಸಭೆಯ ನಡಾವಳಿಗಳ 2–ಸಾಮಾನ್ಯ ವಿಷಯಗಳ ಚರ್ಚೆ: ಸಂಖ್ಯೆ 5 ರ ತೀರ್ಮಾನದಂತೆ ನಡಾವಳಿಗಳಿಗೆ ಸೂಕ್ತ ತಿದ್ದುಪಡಿ ಮಾಡಿ ಅಂತಿಮ ನಡಾವಳಿಗಳನ್ನು ಈ ಪತ್ರದೊಂದಿಗೆ ಕಳುಹಿಸುತ್ತಿದ್ದೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು
14/10/2020

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು–1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

**ಸಂಖ್ಯೆ: ಬಿಸಿಯು/ಎಸ್‌ವೈಎನ್-8/135/2020-21** **ದಿನಾಂಕ: 14.10.2020.**

ದಿನಾಂಕ 29.08.2020 ರಂದು ಪೂರ್ವಾಹ್ನ 11.30 ಗಂಟೆಗೆ ಹಾಗೂ ದಿನಾಂಕ 11.09.2020 ರಂದು ಪೂರ್ವಾಹ್ನ 10.30 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ 8 ನೇ ಸಾಮಾನ್ಯ ಸಭೆಗಳ ಅಂತಿಮ ನಡಾವಳಿಗಳು.

**ದಿನಾಂಕ 29.08.2020 ರಂದು ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಎಸ್. ಜಾಫೆಟ್ | ಸಭಾಧ್ಯಕ್ಷರು |
| 2. | ಡಾ: ಎಂ. ಪಾಂಡುರಂಗಪ್ಪ | ಸದಸ್ಯರು |
| 3. | ಡಾ: ಹೆಚ್. ಟಿ. ಅರವಿಂದ್ | ಸದಸ್ಯರು |
| 4. | ಶ್ರೀ ಹೆಚ್. ಆರ್. ಸತೀಶ್ | ಸದಸ್ಯರು |
| 5. | ಡಾ: ಬಿ.ಎ. ಅನುರಾಧಾ | ಸದಸ್ಯರು |
| 6. | ಡಾ: ಆರ್. ಪಾರ್ವತಿ | ಸದಸ್ಯರು |
| 7. | ಡಾ: ಇ. ಬಿ. ರಾಜೇಶ್ | ಸದಸ್ಯರು |
| 8. | ಶ್ರೀ ಡಿ. ಜಿ. ಶ್ರೀನಿವಾಸಮೂರ್ತಿ | ಸದಸ್ಯರು |
| 9. | ಶ್ರೀ ಕರಣ್‌ಕುಮಾರ್ | ಸದಸ್ಯರು |
| 10. | ಶ್ರೀ ಹೆಚ್. ಎನ್. ಹರಿಪ್ರಸಾದ್ | ಸದಸ್ಯರು |
| 11. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 12. | ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 13. | ಡಾ: ಆರ್.ಕೆ. ಚಂದ್ರನಾಥ್ | ಸದಸ್ಯರು |
| 14. | ಡಾ: ವಿ. ಆರ್. ದೇವರಾಜು | ಸದಸ್ಯರು |
| 15. | ಪ್ರೊ: ಬಿ. ರಮೇಶ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 16. | ಶ್ರೀ ಪಿ. ಕುಮಾರ್,<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 17. | ಶ್ರೀ ಪಿ.ಎಲ್. ವೆಂಕಟೇಶ್‌ಮೂರ್ತಿ<br>ವಿತ್ತಾಧಿಕಾರಿಗಳು | ವಿಶೇಷ ಅಹ್ವಾನಿತರು |

ಮೊದಲಿಗೆ, ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿದರು. ಸಭಾಧ್ಯಕ್ಷರಾದ ಪ್ರೊ: ಎಸ್. ಜಾಫೆಟ್, ಕುಲಪತಿಗಳು ಅವರನ್ನು ಸ್ವಾಗತಿಸಿ ಸಭೆಯನ್ನು ನಡೆಸಿಕೊಡಲು ಕೋರಿದರು.

ಕಾರ್ಯಸೂಚಿಯನ್ನು ಪರಿಗಣನೆಗೆ ತೆಗೆದುಕೊಳ್ಳುವ ಮುನ್ನ ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ಅಥವಾ ಸಂಯೋಜಿತ ಕಾಲೇಜುಗಳಲ್ಲಿ ಶಿಕ್ಷಕರು, ವಿದ್ಯಾರ್ಥಿಗಳು ಅಥವಾ ಬೋಧಕೇತರ ಸಿಬ್ಬಂದಿಗಳು ಯಾವುದಾದರೂ ಗಮನಾರ್ಹ ಸಾಧನೆಗಳನ್ನು ಮಾಡಿದ್ದರೆ ಅಂತಹ ಅಂಶಗಳನ್ನು ಪ್ರತಿ ಸಿಂಡಿಕೇಟ್ ಸಭೆಯಲ್ಲಿ ಹಂಚಿಕೊಂಡು ಸಾಧಕರನ್ನು ಗುರುತಿಸಿ ಗೌರವಿಸುವ ಮತ್ತು ಅವರ ಯಶಸ್ಸನ್ನು ಪ್ರಸಂಶೆ ವ್ಯಕ್ತಪಡಿಸಿ ದಾಖಲಿಸುವ ಒಂದು ಸತ್‌ಸಂಪ್ರದಾಯವನ್ನು ರೂಡಿಸಿಕೊಳ್ಳಬೇಕು, ಇದರಿಂದ ಸಾಧಕರು ಇನ್ನೂ ಹೆಚ್ಚಿನ ಸಾಧನೆ ಮಾಡಲು ಹಾಗೂ ಯಶಸ್ಸು ಗಳಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು. ಮಾನ್ಯ ಕುಲಪತಿಗಳು ಈ ಸಲಹೆಯನ್ನು ಸ್ವಾಗತಿಸಿ ಮುಂದಿನ ಸಿಂಡಿಕೇಟ್ ಸಭೆಯಿಂದ ಇಂತಹ ಯಶಸ್ಸಿನ ಕತೆಗಳನ್ನು (success stories) ಹಂಚಿಕೊಳ್ಳ ಬಹುದೆಂದು ತಿಳಿಸಿದರು.

ನಂತರ, ಮಾನ್ಯ ಸದಸ್ಯರಾದ ಶ್ರೀ ಹೆಚ್. ಎನ್. ಹರಿಪ್ರಸಾದ್ ಅವರು ಮಾತನಾಡಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 28(2)ರನುಸಾರ "ಸಿಂಡಿಕೇಟ್, ಒಂದು ವರ್ಷದಲ್ಲಿ ಕನಿಷ್ಠಪಕ್ಷ ಎಂಟು ಸಭೆಗಳನ್ನು ನಡೆಸತಕ್ಕದು, ಎರಡು ನಿರಂತರ ಸಭೆಗಳ ನಡುವಿನ ಅವಧಿಯು ಎಂಟು ವಾರಗಳನ್ನು ಮೀರತಕ್ಕದ್ದಲ್ಲ" ಎಂದಿದೆ. ಆದರೆ ಇಂದಿನ ಸಭೆಯನ್ನು ಎಂಟು ವಾರಗಳನ್ನು ಮೀರಿ ಆಯೋಜಿಸಲಾಗಿದ್ದು, ನಿಯಮವನ್ನು ಪಾಲಿಸಿರುವುದಲ್ಲಿ ಎಂದು ಕ್ರಿಯೊಲೋಪವೆತ್ತಿದರು. ಕುಲಸಚಿವರು ಉತ್ತರಿಸಿ ಕೋವಿಡ್-19 ರ ಲಾಕ್‌ಡೌನ್ ಮತ್ತು ಇತರ ಕಾರಣಗಳಿಂದಾಗಿ ಸಭೆ ಕರೆಯುವದಲ್ಲಿ ಸ್ವಲ್ಪ ತಡವಾಗಿದೆ, ಆದ್ದರಿಂದ ತಡವಾಗಿರುವುದನ್ನು ಮನ್ನಿಸಬೇಕೆಂದು ಕೋರಿದರು.

ಮಾನ್ಯ ಸದಸ್ಯರಾದ ಡಾ: ಹೆಚ್. ಟಿ. ಅರವಿಂದ್ ಅವರು ಮಾತನಾಡಿ ಹಿಂದೆ ಸಿಂಡಿಕೇಟ್ ಸಭೆಯಲ್ಲಿ ಪ್ರತಿ ತಿಂಗಳಿಗೊಮ್ಮೆ ಸಿಂಡಿಕೇಟ್ ಸಭೆಯನ್ನು ಆಯೋಜಿಸ ಬೇಕೆಂದು ತೀರ್ಮಾನವಾಗಿದೆ. ಅದರಂತೆ ಸಭೆಗಳನ್ನು ನಡೆಸುತ್ತಿಲ್ಲ ಹಾಗಾಗಿ ಇಂದಿನ ಸಭೆಯ ಕಾರ್ಯಸೂಚಿ ಹೆಚ್ಚಾಗಿದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ಅವರು ಮಾತನಾಡಿ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸ್ಥಾಯಿ ಸಮಿತಿಗಳನ್ನು (Standing Committees) ರಚಿಸುವ ಪದ್ಧತಿಯಿದೆ. ಇಂತಹ ಸ್ಥಾಯಿ ಸಮಿತಿಗಳು ವಿಶ್ವವಿದ್ಯಾಲಯದ ವಿವಿಧ ಕಾರ್ಯಗಳ/ಚಟುವಟಿಕೆಗಳ ಬಗ್ಗೆ ಸಿಂಡಿಕೇಟಿಗೆ ಶಿಫಾರಸ್ಸುಗಳನ್ನು ನೀಡುವ ಸಮಿತಿಗಳಾಗಿ ಕಾರ್ಯನಿರ್ವಹಿಸುತ್ತವೆ. ಇದರಿಂದ ವಿವಿಧ ಪ್ರಾಧಿಕಾರಗಳ ಸದಸ್ಯರ ಸೇವೆಯನ್ನು ಬಳಸಿಕೊಂಡು ವಿಶ್ವವಿದ್ಯಾಲಯದ ಅಭಿವೃದ್ಧಿ ಕಾರ್ಯಗಳು ಪರಿಣಾಮಕಾರಿಯಾಗಿ ಜರುಗಲು ಸಹಾಯವಾಗುವುದು ಎಂದು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ಧನಿಗೂಡಿಸಿ ಈ ವಿಷಯದ ಬಗ್ಗೆ ತಾವು ವಿಶ್ವವಿದ್ಯಾಲಯಕ್ಕೆ ಒಂದು ಪ್ರಸ್ತಾವನೆ/ಮನವಿಯನ್ನು ಸಲ್ಲಿಸಿರುವುದಾಗಿ ತಿಳಿಸಿದರು. ಮಾನ್ಯ ಕುಲಪತಿಗಳು ಪ್ರತಿಕ್ರಿಯೆ ನೀಡಿ ಇತರ ವಿಶ್ವವಿದ್ಯಾಲಯಗಳಲ್ಲಿರುವ ಪದ್ಧತಿಗಳನ್ನು ಪರಿಶೀಲಿಸಿ ಮುಂದಿನ ಸಭೆಯಲ್ಲಿ ಇದರ ಬಗ್ಗೆ ವಿಷಯ ಮಂಡಿಸಲಾಗುವುದು ಹಾಗು ಚರ್ಚಿಸಬಹುದು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಹೆಚ್. ಎನ್. ಹರಿಪ್ರಸಾದ್ ಮತ್ತು ಡಾ. ಆರ್. ಕೆ. ಚಂದ್ರನಾಥ್ ಅವರುಗಳು ಮಾತನಾಡಿ ಸಿಂಡಿಕೇಟ್ ಸಭೆಯನ್ನು ಬೆಳಿಗ್ಗೆ 11.30ರ ಬದಲಾಗಿ 10.30ಕ್ಕೆ ಪ್ರಾರಂಭಿಸಲು/ನಿಗಧಿಪಡಿಸಲು ಸಲಹೆಯಿತ್ತರು. ಮಾನ್ಯ ಕುಲಪತಿಗಳು ಉತ್ತರಿಸಿ ಸದಸ್ಯರು ಒಪ್ಪುವುದಾದರೆ ಇನ್ನೂ ಮುಂಚಿತವಾಗಿ ಸಭೆಯನ್ನು ಆಯೋಜಿಸ ಬಹುದೆಂದರು.

ಚರ್ಚೆಯ ನಂತರ ಇನ್ನು ಮುಂದೆ ಸಿಂಡಿಕೇಟ್ ಸಭೆಗಳನ್ನು ಬೆಳಿಗ್ಗೆ 10.30 ಕ್ಕೆ ನಿಗಧಿಪಡಿಸಲು ನಿರ್ಣಯಿಸಲಾಯಿತು.

ಮೇಲಿನ ಚರ್ಚೆಯ ನಂತರ ಕಾರ್ಯಸೂಚಿಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಯಿತು.

| | |
|---|---|
| ವಿಷಯ ಸಂಖ್ಯೆ–1: | ದಿನಾಂಕ 27.02.2020 ರಂದು ಜರುಗಿದ 7 ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ಹಾಗೂ ದಿನಾಂಕ 04.06.2020 ರಂದು ಜರುಗಿದ ವಿಶೇಷ ಸಭೆಯ ಮತ್ತು 05.06.2020 & 16.06.2020 ರಂದು ಜರುಗಿದ ಅಸಾಮಾನ್ಯ ಸಭೆಗಳ ನಡಾವಳಿಗಳನ್ನು ಧೃಢೀಕರಿಸುವ ಕುರಿತು.<br><br>ಸಿಂಡಿಕೇಟ್ ನಿರ್ಣಯ:<br>ಅ) ದಿನಾಂಕ 27.02.2020ರಂದು ಜರುಗಿದ 7ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ನಡಾವಳಿಗಳ ವಿಷಯ ಸಂಖ್ಯೆ 6 ಮತ್ತು 9ರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ದಿನಾಂಕ 23.03.2020ರಂದು ಇ–ಮೇಲ್ ಮೂಲಕ ಕಳುಹಿಸಿದ್ದ ವೀಕ್ಷಣೆಗಳ ಕುರಿತು ನೀಡಲಾಗಿದ್ದ ಸ್ಪಷ್ಟೀಕರಣದೊಂದಿಗೆ ತಿದ್ದುಪಡಿ ಮಾಡಿದ ನಿರ್ಣಯಗಳನ್ನು ಸಿಂಡಿಕೇಟ್ ಗಮನಿಸಿ, ಧೃಢೀಕರಿಸಿತು.<br><br>ಆ) ದಿನಾಂಕ 04.06.2020 ರಂದು ಜರುಗಿದ ವಿಶೇಷ ಸಭೆಯ ನಡಾವಳಿಗಳ ಕುರಿತು ಮಾನ್ಯ ಸಿಂಡಿಕೇಟ್ ಸದಸ್ಯರು ದಿನಾಂಕ 24–25 ಜೂನ್ 2020 ರಂದು ಇ–ಮೇಲ್‌ನಲ್ಲಿ ಕಳುಹಿಸಿದ್ದ ಅಭಿಪ್ರಾಯಗಳ ಮೇರೆಗೆ ನಡಾವಳಿಗಳಿಗೆ ತಿದ್ದುಪಡಿ ಮಾಡಿ ಕ್ರೋಢೀಕೃತ/ಪರಿಷ್ಕೃತ ನಡಾವಳಿಗಳನ್ನು ಸದಸ್ಯರಿಗೆ ವಿತರಿಸಲಾಗಿದೆ ಎಂದು ಕುಲಸಚಿವರು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ಮಾತನಾಡಿ ದಿನಾಂಕ 04.06.2020 ರ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದ್ದ ಎರಡೂ ವಿಷಯಗಳಿಗೆ ಸಂಬಂಧಿಸಿದಂತೆ ಸದಸ್ಯರು ಕೇಳಿದ್ದ ಮಾಹಿತಿಗಳನ್ನು ಸಂಗ್ರಹಿಸಿ 21 ದಿನಗಳ ಕಾಲಮಿತಿಯಲ್ಲಿ ಸಿಂಡಿಕೇಟ್ ಮುಂದೆ ಮಂಡಿಸಬೇಕೆಂಬ ಅಂಶ ಬಿಟ್ಟುಹೋಗಿದೆ. ಆ ಕಾಲಮಿತಿಯನ್ನು ಸಹ ನಿರ್ಣಯಗಳಲ್ಲಿ ಸೇರಿಸಬೇಕೆಂದು ತಿಳಿಸಿದರು.<br>ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ಮತ್ತು ಡಾ: ಹೆಚ್. ಟಿ. ಅರವಿಂದ್ ಅವರುಗಳು ಇಂತಹ ತಿದ್ದುಪಡಿಗಳನ್ನು ತಪ್ಪಿಸಲು ಪ್ರತಿ ವಿಷಯದ ಮೇಲಿನ ನಿರ್ಣಯಗಳನ್ನು ಓದಿ ಧೃಢೀಕರಿಸಬೇಕು (Read and Recorded) ಎಂದು ಸಲಹೆಯಿತ್ತರು.<br>ಮಾನ್ಯ ಸದಸ್ಯರಾದ ಡಾ: ಆರ್. ಕೆ. ಚಂದ್ರನಾಥ್ ಅವರು ಈ ತಿದ್ದುಪಡಿಗಳೊಂದಿಗೆ ನಡಾವಳಿಗಳನ್ನು ಧೃಢೀಕರಿಸಬಹುದೆಂದು ತಿಳಿಸಿದರು. |

| | |
|---|---|
| | ನಡಾವಳಿಗಳನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆ ಸದರಿ ಪರಿಷ್ಕೃತ ನಡಾವಳಿಗಳನ್ನು ಮೇಲಿನ ತಿದ್ದುಪಡಿಗಳೊಂದಿಗೆ ಧೃಢೀಕರಿಸಿತು.<br>ಇ) **05.06.2020** ಮತ್ತು **16.06.2020** ರಂದು ಜರುಗಿದ ಅಸಾಮಾನ್ಯ ಸಭೆಗಳ ನಡಾವಳಿಗಳಿಗೆ ಐದು ಜನ ಮಾನ್ಯ ಸಿಂಡಿಕೇಟ್ ಸದಸ್ಯರು ದಿನಾಂಕ **29-30** ಜೂನ್, **2020**ರಂದು ಇ-ಮೇಲ್‌ನಲ್ಲಿ ಕಳುಹಿಸಿದ್ದ ಅಭಿಪ್ರಾಯಗಳನ್ನು ಅಳವಡಿಸಿ ಪರಿಷ್ಕೃತ ನಡಾವಳಿಗಳನ್ನು ದಿನಾಂಕ **10.07.2020**ರ ಪತ್ರದ ಮೂಲಕ ಕಳುಹಿಸಲಾಗಿದೆ ಎಂದು ಕುಲಸಚಿವರು ತಿಳಿಸಿದರು.<br>ಸಿಂಡಿಕೇಟ್ ಸದರಿ ನಡಾವಳಿಗಳನ್ನು ಪರಾಂಭರಿಸಿತು. ಮಾನ್ಯ ಸದಸ್ಯರಾದ ಡಾ: ಹೆಚ್. ಟಿ. ಅರವಿಂದ್ ಅವರು ವಿಷಯ ಸಂಖ್ಯೆ 5ರ ನಿರ್ಣಯದಲ್ಲಿ "**UGC** ನಿಯಮಾವಳಿಗಳ ಪ್ರಕಾರ ಪಿ.ಹೆಚ್‌ಡಿ ಪದವಿ ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಪ್ರತಿ ಗಂಟೆಗೆ ರೂ. **1250/-** ಹಾಗೂ ಪಿ.ಹೆಚ್.ಡಿ ಪದವಿ ಇಲ್ಲದ ಅತಿಥಿ ಉಪನ್ಯಾಸಕರಿಗೆ ರೂ. **750/-** ಮಂಜೂರಿಸಲು ಕ್ರಮ ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು" ಎಂದಿರುವುದನ್ನು "**UGC** ನಿಯಮಾವಳಿಗಳ ಪ್ರಕಾರ **NET/SLET/Ph.D** ಪದವಿ ಹೊಂದಿರುವ ಅತಿಥಿ ಉಪನ್ಯಾಸಕರಿಗೆ ಪ್ರತಿ ಗಂಟೆಗೆ ರೂ. **1250/-** ಹಾಗೂ **NET / SLET/ Ph.D** ಪದವಿ ಇಲ್ಲದ ಅತಿಥಿ ಉಪನ್ಯಾಸಕರಿಗೆ ರೂ. **750/-** ಮಂಜೂರಿಸಲು ಕ್ರಮ ಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು" ಎಂದು ತಿದ್ದುಪಡಿ ಮಾಡಬೇಕೆಂದು ತಿಳಿಸಿದರು.<br>ಮೇಲಿನ ತಿದ್ದುಪಡಿಗಳೊಂದಿಗೆ ದಿನಾಂಕ **05.06.2020** ಮತ್ತು **16.06.2020** ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಗಳ ನಡಾವಳಿಗಳನ್ನು ಸಿಂಡಿಕೇಟ್ ಸಭೆ ಧೃಢೀಕರಿಸಿತು. |
| ವಿಷಯ ಸಂಖ್ಯೆ- 2: | ದಿನಾಂಕ **27.02.2020** ರಂದು ಜರುಗಿದ 7ನೇ ಸಿಂಡಿಕೇಟ್ ಸಾಮಾನ್ಯ ಸಭೆಯ ಹಾಗೂ ದಿನಾಂಕ **04.06.2020**ರಂದು ಜರುಗಿದ ವಿಶೇಷ ಸಭೆಯ ಮತ್ತು **05.06.2020 & 16.06.2020**ರಂದು ಜರುಗಿದ ಅಸಾಮಾನ್ಯ ಸಭೆಗಳ ನಡಾವಳಿಗಳ ಮೇಲೆ ಕೈಕೊಂಡ ಕ್ರಮಮಗಳ ವರದಿ.<br>ಸಿಂಡಿಕೇಟ್ ನಿರ್ಣಯ:<br>**(i)** ದಿನಾಂಕ **27.02.2020**ರಂದು ಜರುಗಿದ ಸಿಂಡಿಕೇಟ್ 7ನೇ ಸಾಮಾನ್ಯ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ಅನುಸರಣಾ ವರದಿಯನ್ನು ಸಿಂಡಿಕೇಟ್ ಪರಾಂಭರಿಸಿ ಅನುಮೋದಿಸಿತು.<br>**(ii)** ದಿನಾಂಕ **04.06.2020**ರ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ 2ರ ನಿರ್ಣಯದಲ್ಲಿ **Logysis** ಮತ್ತು **Uniclare** ಸಂಸ್ಥೆಗಳು ನೀಡುತ್ತಿರುವ ಸೇವೆಗೆ ಸಂಬಂಧಿಸಿದಂತೆ ಸುರಕ್ಷತಾ ಕ್ರಮಗಳನ್ನು ಪರಿಶೀಲಿಸಲು ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಕರಣ್‌ಕುಮಾರ್ ಅವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಸಮಿತಿಗೆ **NIC**ಇಂದ ಒಬ್ಬ ತಜ್ಞರನ್ನು ಸೇರಿಸಿಕೊಳ್ಳುವುದರ ಮೂಲಕ ಸಮಿತಿಯನ್ನು ಮುಂದುವರೆಸಲು ಸಿಂಡಿಕೇಟ್ ನಿರ್ಣಯಿಸಿತು. |

(iii) ದಿನಾಂಕ 05.06.2020 & 16.06.2020 ರಂದು ಜರುಗಿದ ಅಸಾಮಾನ್ಯ ಸಭೆಗಳ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯ ಬಗ್ಗೆ ಈ ಕೆಳಕಂಡಂತೆ ಚರ್ಚಿಸಿ ನಿರ್ಣಯಿಸಲಾಯಿತು.

ವಿಷಯ ಸಂಖ್ಯೆ 1: ರಸಾಯನಶಾಸ್ತ್ರ ವಿಭಾಗದ ಉನ್ನತೀಕರಣಕ್ಕಾಗಿ ಹಾಗೂ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅಗತ್ಯ ಸಂಪನ್ಮೂಲ ಕ್ರೋಢೀಕರಣಕ್ಕಾಗಿ ರಚಿಸಿರುವ ಸಮಿತಿಗೆ ಮೂರು ಜನರನ್ನು ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ಅವರು ಸೂಚಿಸಬೇಕೆಂದು ಕೋರಲಾಯಿತು.

ವಿಷಯ ಸಂಖ್ಯೆ 3: ನಿರ್ಣಯ 2ರಲ್ಲಿರುವಂತೆ ಗುತ್ತಿಗೆ ಆಧಾರದ/ ಸಮಾಲೋಚಕರ ನೇಮಕಾತಿಯ ಆದೇಶಗಳನ್ನು ಸದಸ್ಯರಿಗೆ ಒದಗಿಸಿರುವುದಿಲ್ಲ ಎಂದು ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ತಿಳಿಸಿದರು.

ಮಾನ್ಯ ಕುಲಪತಿಗಳು ಉತ್ತರಿಸಿ ಕೆಲವು ನಿವೃತ್ತ ಅಧಿಕಾರಿಗಳನ್ನು ಗುತ್ತಿಗೆ ಆಧಾರ/ಸಮಾಲೋಚಕರನ್ನಾಗಿ ನೇಮಕ ಮಾಡಿರುವುದಕ್ಕೆ ವೈಯಕ್ತಿಕ ಆದೇಶಗಳನ್ನು ನೀಡಲಾಗಿದೆ. ಆದರೆ ಇತರ ಬೋಧಕೇತರ ಸಿಬ್ಬಂದಿಯ ಸೇವೆಯನ್ನು ಗುತ್ತಿಗೆ ಆಧಾರದ ಮೇಲೆ ಪಡೆಯುವಾಗ ಕಾನೂನಾತ್ಮಕ ಕಾರಣಗಳಿಂದಾಗಿ ನೇಮಕಾತಿ ಆದೇಶಗಳನ್ನು ವೈಯಕ್ತಿಕವಾಗಿ ನೀಡದೇ ಬೇರೆ ವಿಶ್ವವಿದ್ಯಾಲಯಗಳು ಪಾಲಿಸುತ್ತಿರುವ ಪದ್ಧತಿಯನ್ನು ಪಾಲಿಸಲಾಗುತ್ತಿದೆ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ಪ್ರತಿಕ್ರಿಯಿಸಿ ನೇಮಕಾತಿ ಆದೇಶವಿಲ್ಲದೆ ಸಂಭಾವನೆ/ವೇತನ ಪಾವತಿಸುವುದು ಆಕ್ಷೇಪಣೆವಾರ್ಹವಾಗುವುದು ಎಂದರು.

ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ಅವರು ಮಾತನಾಡಿ ತಾತ್ಕಾಲಿಕ ಸಿಬ್ಬಂದಿಯನ್ನು ನೇಮಕಮಾಡುವ ಪ್ರಕ್ರಿಯೆಯನ್ನು ಜುಲೈ 1 ರಿಂದ ನಿಯಮಗಳನುಸಾರ ಮಾಡಲು ಹಿಂದಿನ ಸಭೆಯಲ್ಲಿ ತಿಳಿಸಲಾಗಿತ್ತು. ಆದಾಗ್ಯೂ ಇಂತಹ ಸಿಬ್ಬಂದಿಗೆ ಜುಲೈ ತಿಂಗಳ ವೇತನವನ್ನು ಸಿಂಡಿಕೇಟ್ ಅನುಮೋದನೆಯಿಲ್ಲದೆ ಪಾವತಿಸಿರುವುದು ಸರಿಯಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಮಾನ್ಯ ಸದಸ್ಯರಾದ ಡಾ: ಆರ್. ಕೆ. ಚಂದ್ರನಾಥ್ ಅವರು ಕುಲಸಚಿವರಿಗೆ ಇದರ ಬಗ್ಗೆ ಸ್ಪಷ್ಟೀಕರಣ ನೀಡಲು ಕೋರಿದರು.

ಕುಲಸಚಿವರು ಉತ್ತರಿಸಿ ಸಿಂಡಿಕೇಟ್ ನಿರ್ಣಯದಂತೆ ಮಾನವ ಸಂಪನ್ಮೂಲವನ್ನು ಒದಗಿಸಲು ವಿವರಗಳನ್ನು ಒದಗಿಸುವಂತೆ ಜುಲೈ ತಿಂಗಳಿನಲ್ಲೇ ಕಿಯೋನಿಕ್ಸ್ ಸಂಸ್ಥೆಯನ್ನು ಕೋರಲಾಯಿತು. ಆದರೆ ಅವರು ಕೋವಿಡ್-19 ರ ಲಾಕ್‌ಡೌನ್ ಕಾರಣದಿಂದಾಗಿ ಆಗಸ್ಟ್ ಮೊದಲ ವಾರದವರೆಗೆ ಉತ್ತರ ಕಳುಹಿಸಿರಲಿಲ್ಲ. ಹಾಗಾಗಿ ಸಿಂಡಿಕೇಟ್ ಅನುಮೋದನೆಯನ್ನು ನಿರೀಕ್ಷಿಸಿ ಜುಲೈ ತಿಂಗಳ ಸಂಬಳಗಳನ್ನು ಪಾವತಿಸಬೇಕಾಯಿತು. ಈ ಪ್ರಕ್ರಿಯೆಯನ್ನು ಸೆಪ್ಟೆಂಬರ್ ತಿಂಗಳಿನಲ್ಲಿ ಮುಗಿಸಲಾಗುವುದು ಎಂದು ತಿಳಿಸಿದರು.

| | |
|---|---|
| | <u>ವಿಷಯ ಸಂಖ್ಯೆ 10:</u> 2020-21 ಸಾಲಿನ ಆಯವ್ಯಯ ಅಂದಾಜುಗಳನ್ನು ಪರಿಶೀಲಿಸಿ ಅನುಮೋದನೆ ನೀಡುವ ಕುರಿತು ಮಾನ್ಯ ಸದಸ್ಯರಾದ ಡಾ: ಹೆಚ್. ಟಿ. ಅರವಿಂದ್ ಅವರು ಮಾತನಾಡಿ ಹಿಂದಿನ ಮೂರು ವರ್ಷಗಳ ಲೆಕ್ಕ ಪತ್ರಗಳ ಆಡಿಟ್ ಆಗಿದೆಯೇ ಎಂದು ಪ್ರಶ್ನಿಸಿದರು. ಸಭೆಯಲ್ಲಿ ಆಹ್ವಾನಿತರಾಗಿ ಹಾಜರಿದ್ದ ವಿತ್ತಾಧಿಕಾರಿಗಳು, ಲೆಕ್ಕ ಪತ್ರಗಳ ಆಡಿಟ್ ಆಗಿದೆ, ಚಾರ್ಟೆಡ್ ಅಕೌಂಟೆಂಟ್ ಅವರ ಪ್ರಮಾಣ ಪತ್ರದೊಂದಿಗೆ ಸಂಬಂಧಪಟ್ಟ ಇಲಾಖೆಗೆ ಸಲ್ಲಿಸಲಾಗಿದೆ.ಆದರೆ ಆಡಿಟ್ ವರದಿಗಳು ಇನ್ನೂ ಬಂದಿರುವುದಿಲ್ಲ, ವರದಿಗಳು ಬಂದ ಕೂಡಲೇ ಸಿಂಡಿಕೇಟ್ ಮುಂದೆ ಮಂಡಿಸಲಾಗುವುದು ಎಂದು ತಿಳಿಸಿದರು.<br><br>ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ಅವರು ಮಾತನಾಡಿ 2016-17ನೇ ಸಾಲಿನಿಂದ 2019-20ನೇ ಸಾಲಿನ ವೋಚರ್, ಲೆಕ್ಕ ಪುಸ್ತಕ ಹಾಗೂ ಲೆಕ್ಕ ಪತ್ರಗಳನ್ನು Tally Software ನಲ್ಲಿ ದಾಖಲಿಸಿ ವಾರ್ಷಿಕ ಲೆಕ್ಕ ಪತ್ರಗಳನ್ನು ಹಾಗೂ ವರದಿಗಳನ್ನು ಸಿದ್ದಪಡಿಸಲು ನಾಲ್ಕು ಜನ ಅನುಭವವುಳ್ಳ ಸಹಾಯಕರನ್ನು ಹಾಗೂ ಚಾರ್ಟೆಡ್ ಅಕೌಂಟೆಂಟ್‌ರನ್ನು ನೇಮಕ ಮಾಡಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿದ್ದರೂ ಸಹ ವಿತ್ತಾಧಿಕಾರಿಗಳು ಈ ವಿಷಯದಲ್ಲಿ ವಿಳಂಭ ಮಾಡಿ ಸಿಂಡಿಕೇಟ್ ನಿರ್ಣಯವನ್ನು ಕಾರ್ಯಗತಗೊಳಿಸಿರುವುದಿಲ್ಲ, ಆದುದರಿಂದ ದಂಡರೂಪದಲ್ಲಿ ಅವರ ಎರಡು ತಿಂಗಳ ಸಂಬಳವನ್ನು ತಡೆಹಿಡಿಯಬೇಕು ಎಂದು ಆಗ್ರಹಿಸಿ ಇದರ ಬಗ್ಗೆ ಸಭೆಯಲ್ಲಿ ಸೂಚನೆ ಮಂಡಿಸುವುದಾಗಿ ತಿಳಿಸಿದರು.<br><br>ಕುಲಪತಿಗಳ ಸೂಚನೆಯ ಮೇರೆಗೆ ವಿತ್ತಾಧಿಕಾರಿಗಳು ವಿವರಣೆ ನೀಡಿ ನಾಲ್ಕು ಜನ ಸಹಾಯಕರ ಸೇವೆ ಪಡೆಯಲು ನಿಯಮಗಳನುಸಾರ ಸ್ಪರ್ಧಾತ್ಮಕ ದರಪಟ್ಟಿ ಕರೆಯಲಾಗಿದ್ದು. ಯಾವ ಸಂಸ್ಥೆಯೂ ಭಾಗವಹಿಸದಿದ್ದುದರಿಂದ 2ನೆಯ ಸಲ ದರಪಟ್ಟಿಯನ್ನು ಆಹ್ವಾನಿಸಲಾಗುವುದು. ಅಲ್ಲದೆ ತಮ್ಮ ಅನಾರೋಗ್ಯದ ಕಾರಣಗಳಿಂದಾಗಿ ಈ ಪ್ರಕ್ರಿಯೆ ತಡವಾಗಿದೆ ಎಂದು ತಿಳಿಸಿದರು.<br><br>ಮಾನ್ಯ ಸದಸ್ಯರಾದ ಡಾ: ಆರ್. ಕೆ. ಚಂದ್ರನಾಥ್ ಮತ್ತು ಡಾ: ಹೆಚ್. ಟಿ. ಅರವಿಂದ್ ಅವರುಗಳು ಮಾತನಾಡಿ ವಿತ್ತಾಧಿಕಾರಿಗಳಿಂದ ಪ್ರಮಾಧವಾಗಿದೆ, ಅವರು ನೀಡಿರುವ ಕಾರಣಗಳು ಸಕಾರಣಗಳಾಗುವುದಿಲ್ಲ. ತಮ್ಮ ತಪ್ಪನ್ನು ಒಪ್ಪಿಕೊಳ್ಳ ಬೇಕಾಗುತ್ತದೆ ಎಂದರು.<br><br>ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ಮಾತನಾಡಿ ತಾವು ಹಿಂದೆ ಸ್ಪಷ್ಟವಾಗಿ ತಿಳಿಸಿದಂತೆ ವ್ಯಕ್ತಿಗಳ ಸೇವೆಯನ್ನು ಪ್ರತ್ಯೇಕವಾಗಿ ಪಡೆದಿದ್ದರೆ ಪಾರದರ್ಶಕ ನಿಯಮದ ಉಲ್ಲಂಘನೆಯಾಗುತ್ತಿರಲಿಲ್ಲ ಎಂದು ತಿಳಿಸಿ, ವಾರ್ಷಿಕ ಲೆಕ್ಕ ಪತ್ರಗಳನ್ನು ವಾರ್ಷಿಕ ವರದಿಗಳೊಂದಿಗೆ ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳೊಳಗೆ ಸಲ್ಲಿಸಬೇಕಾಗಿದೆ. ಈ ಪ್ರಕ್ರಿಯೆ ತುಂಬಾ ತಡವಾಗಿದೆ ಎಂದು ತಿಳಿಸಿ ತಮ್ಮ ನಿಲುವನ್ನು ಪುನರುಚ್ಚರಿಸಿದರು. |

ಮಾನ್ಯ ಸದಸ್ಯರುಗಳಾದ ಡಾ: ಇ. ಬಿ. ರಾಜೇಶ್, ಡಾ: ಬಿ. ಎ. ಅನುರಾಧ, ಶ್ರೀ ಹೆಚ್. ಎನ್. ಹರಿಪ್ರಸಾದ ಅವರುಗಳು ಮಾತನಾಡಿ ವಿತ್ತಾಧಿಕಾರಿಗಳು ಸರ್ಕಾರಿ ನಿಯಮಗಳ ಬಗ್ಗೆ ಹಿಂದೆಯೇ ಸಿಂಡಿಕೇಟ್ ಗಮನಕ್ಕೆ ತರಬೇಕಿತ್ತು ಎಂದರು.

ಕುಲಸಚಿವರು (ಮೌಲ್ಯಮಾಪನ) ಪ್ರೊ: ಬಿ. ರಮೇಶ್ ಅವರು ಮಧ್ಯೆ ಪ್ರವೇಶಿಸಿ, ವಿತ್ತಾಧಿಕಾರಿಯವರ ಕ್ರಮ ಉದ್ದೇಶ ಪೂರ್ವಕವಾದುದಲ್ಲ, ಹಾಗಾಗಿ ಈ ವಿಳಂಭವನ್ನು ಮನ್ನಿಸಬೇಕೆಂದು ಸಭೆಯನ್ನು ಕೋರಿದರು.

ಮಾನ್ಯ ಸದಸ್ಯರುಗಳಾದ ಡಾ: ವಿ. ಆರ್. ದೇವರಾಜು, ಅವರು ಮಾತನಾಡಿ ಇದು ಆಡಳಿತದ ವೈಫಲ್ಯವಾಗಿದೆ, ಹಾಗಾಗಿ ಎಲ್ಲರೂ ಜವಾಬ್ದಾರಿ ಹೊರಬೇಕಾಗುತ್ತದೆ ಎಂದರು. ಮಾನ್ಯ ಸದಸ್ಯರಾದ ಶ್ರೀ ಹೆಚ್. ಎನ್. ಹರಿಪ್ರಸಾದ್ ಅವರು ಮಾತನಾಡಿ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗ ಸಿಂಡಿಕೇಟ್‌ನ ಅಧಿಕಾರ ಮತ್ತು ಮಹತ್ವವನ್ನು ಅರಿತಿರಬೇಕು ಎಂದರು.

ವಿತ್ತಾಧಿಕಾರಿಗಳು ಉತ್ತರಿಸಿ ಸದಸ್ಯರಾದ ಶ್ರೀ ಕರಣ್‌ಕುಮಾರ್ ಅವರು ಈ ವಿಷಯದಲ್ಲಿ ತುಂಬಾ ಆಸ್ತೆ ವಹಿಸಿ ಸಲಹೆ ನೀಡಿದ್ದರು. ಸಿಂಡಿಕೇಟ್ ತೀರ್ಮಾನಕ್ಕೆ ಅಗೌರವ ತೋರುವುದು ತಮ್ಮ ಉದ್ದೇಶವಾಗಿರಲಿಲ್ಲ, ತಾವು ವಿಶ್ವವಿದ್ಯಾಲಯದ ಆಡಳಿತ ವ್ಯವಸ್ಥೆಗೆ ಹೊಸಬರಾಗಿರುವುದರಿಂದ ಈ ರೀತಿಯ ಲೋಪವಾಗಿದೆ, ಇನ್ನು ಮುಂದೆ ಎಚ್ಚರದಿಂದಿರುವುದಾಗಿ ತಿಳಿಸಿ ಸಿಂಡಿಕೇಟ್ ಸಭೆಯ ಕ್ಷಮೆ ಕೋರಿದರು.

ಕುಲಸಚಿವರು ಮಾತನಾಡಿ ಸಿಂಡಿಕೇಟ್ ನಿರ್ಣಯದಂತೆ ಲೆಕ್ಕ ಪತ್ರಗಳನ್ನು ಸಿದ್ದಪಡಿಸಲು ಪ್ರತ್ಯೇಕವಾಗಿ ಎರಡು ತಿಂಗಳ ಅವಧಿಗೆ ನಾಲ್ಕು ಜನರ ಸೇವೆಯನ್ನು ಪಡೆಯಲು ಕೂಡಲೇ ಕ್ರಮವಹಿಸಲಾಗುವುದು. ಈಗ ಆಗಿರುವ ವಿಳಂಭವನ್ನು ಮನ್ನಿಸಬೇಕೆಂದು ಕೋರಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ಅವರು ಪ್ರತಿಕ್ರಿಯಿಸಿ ವಿತ್ತಾಧಿಕಾರಿಗಳು ಇದನ್ನು ವೈಯಕ್ತಿಕವಾಗಿ ತೆಗೆದುಕೊಳ್ಳದೇ ಸಿಂಡಿಕೇಟ್ ತೀರ್ಮಾನವನ್ನು ಜಾರಿಗೊಳಿಸಬೇಕು ಎಂದು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ಡಿ. ಜಿ. ಶ್ರೀನಿವಾಸಮೂರ್ತಿ ಮತ್ತು ಡಾ: ಆರ್. ಕೆ. ಚಂದ್ರನಾಥ್ ಅವರುಗಳು ತಪ್ಪನ್ನು ಮನ್ನಿಸಿ ಮುಂದುವರೆಯಬಹುದೆಂದರು.

ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ಮಾತನಾಡಿ ನಾಲ್ಕು ಜನರ ಸೇವೆಯನ್ನು ಪಡೆಯಲು ಈಗಾಗಲೇ ದರಪಟ್ಟಿ ಕರೆದಿರುವ ಕಾರಣ ಆ ಪ್ರಕ್ರಿಯೆಯನ್ನು ಹಿಂಪಡೆಯಲು ಕಷ್ಟವಾಗಬಹುದೆಂದರು.

ಮೇಲಿನಂತೆ ಸುಧೀರ್ಘ ಚರ್ಚೆಯ ನಂತರ ಸಿಂಡಿಕೇಟ್ ಕೆಳಕಂಡಂತೆ ನಿರ್ಣಯಿಸಿತು.

**ಸಿಂಡಿಕೇಟ್ ನಿರ್ಣಯ:**

ಈ ವಿಷಯದಲ್ಲಿ ದಿನಾಂಕ **5/16-05-2020**ರ ಸಿಂಡಿಕೇಟ್ ನಿರ್ಣಯವನ್ನು ಸರಿಯಾಗಿ ಅರ್ಥೈಸಿಕೊಂಡು ಅದನ್ನು ಜಾರಿಗೊಳಿಸಲು ಕೂಡಲೇ ಕ್ರಮವಹಿಸಲು ನಿರ್ಣಯಿಸಲಾಯಿತು. ಹಾಗು ದರಪಟ್ಟಿ ಕರೆದಿರುವ ಪ್ರಕ್ರಿಯೆಯನ್ನು ರದ್ದುಪಡಿಸಲು ನಿರ್ಣಯಿಸಲಾಯಿತು.

| | |
|---|---|
| | ಈ ಹಂತದಲ್ಲಿ ಭೋಜನಕ್ಕೆ ವಿರಾಮಕ್ಕೆ ಸಭೆಯನ್ನು ಮುಂದೂಡಲಾಯಿತು. ಮಾನ್ಯ ಕುಲಪತಿಗಳು ಮಧ್ಯಾಹ್ನ ಸರ್ಕಾರದಲ್ಲಿ ಒಂದು ಮುಖ್ಯವಾದ ಸಭೆಗೆ ಹೋಗಬೇಕಿರುವುದರಿಂದ **ಭೋಜನ ನಂತರ ಸಭೆಯ ಅಧ್ಯಕ್ಷತೆಯನ್ನು ಹಿರಿಯ ಡೀನರಾದ ಡಾ: ಎಂ. ಪಾಂಡುರಂಗಪ್ಪ ಅವರು ವಹಿಸಲು ಅಧಿಕರಿಸುವುದಾಗಿ ತಿಳಿಸಿದರು.**<br>ಭೋಜನಾ ನಂತರ ಡಾ: ಎಂ. ಪಾಂಡುರಂಗಪ್ಪ ಅವರ ಅಧ್ಯಕ್ಷತೆಯಲ್ಲಿ ಸಭೆ ಮುಂದುವರೆಯಿತು.<br><br>ವಿಷಯ ಸಂಖ್ಯೆ-11 : **Campus redevelopment -reg**<br>ಈ ವಿಷಯದಲ್ಲಿ ತೆಗೆದುಕೊಂಡಿರುವ ಕ್ರಮವನ್ನು ಕುಲಸಚಿವರು ವಿವರಿಸಿದರು. Expression of Interest ಗಾಗಿ ಕರೆಯಲಾಗಿರುವ ಟೆಂಡರ್ ಷರತ್ತುಗಳ ಬಗ್ಗೆ Institute of Engineers ನಿಂದ ಒಂದು ಮನವಿ ಬಂದಿದ್ದು, ಸಿವಿಲ್ ಇಂಜಿನಿಯರುಗಳೂ ಸಹ ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿ ಟೆಂಡರ್ ತಿದ್ದುಪಡಿ ಮಾಡಿ ಪ್ರಕಟಿಸಲಾಗಿದೆ. ಟೆಂಡರ್ ಸಲ್ಲಿಸಲು 31.08.2020 ಕೊನೆಯ ದಿನಾಂಕವಾಗಿದ್ದು, ಸ್ವೀಕೃತವಾದ ಟೆಂಡರ್‌ಗಳನ್ನು ತಾಂತ್ರಿಕ ಸಮಿತಿಯಲ್ಲಿ ಪರಿಶೀಲಿಸಿ ನಂತರ ನಿಯಮಾನುಸಾರ ಸಿಂಡಿಕೇಟ್ ನಲ್ಲಿ ಮಂಡಿಸಲಾಗುವುದೆಂದು ತಿಳಿಸಿದರು.<br>ವಿಷಯ ಸಂಖ್ಯೆ-15: ಮಾನ್ಯ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ಅವರು ಮಾತನಾಡಿ ಟೆಂಡರ್ ಪ್ರಕ್ರಿಯೆ ವಿಳಂಭ ವಾಗುವುದರಿಂದ ವಿಳಂಭ ತಪ್ಪಿಸಲು ಕಂಪ್ಯೂಟರ್‌ಗಳನ್ನು ಕಿಯೋನಿಕ್ಸ್ ಸಂಸ್ಥೆಯಿಂದ ಖರೀದಿಸಬಹುದಾಗಿತ್ತು ಎಂದು ಅಭಿಪ್ರಾಯಪಟ್ಟರು. ಕುಲಸಚಿವರು ಉತ್ತರಿಸಿ ಕೇಂದ್ರ ಖರೀದಿ ಸಮಿತಿ ಸಭೆಯಲ್ಲಿ ಟೆಂಡರ್ ಮೂಲಕ ಖರೀದಿಸಿದರೆ ದರಗಳು ಹಾಗೂ ಗುಣಮಟ್ಟ ಸ್ಪರ್ಧಾತ್ಮಕವಾಗಿರುತ್ತದೆಂದು ತೀರ್ಮಾನ ವಾಗಿರುವುದರಿಂದ ಟೆಂಡರ್ ಕರೆಯಲಾಗಿದೆ ಎಂದು ತಿಳಿಸಿದರು.<br>ವಿಷಯ ಸಂಖ್ಯೆ-22ರ ಬಗ್ಗೆ ಅನುಸರಣಾ ವರದಿಯನ್ನು ಮುಂದುವರೆಸಿ ಕುಲಸಚಿವರು ವಿವರಿಸಿ ಸ್ನಾತಕೋತ್ತರ ತರಗತಿಗಳು ಪ್ರಾರಂಭವಾಗುವಾಗ ಎಲ್ಲಾ ವಿದ್ಯಾರ್ಥಿಗಳಿಗೆ ಒಮ್ಮೆ ಎನ್.95 ಮಾಸ್ಕ್‌ಗಳನ್ನು ವಿತರಿಸಿ ಥರ್ಮಲ್ ಸ್ಕ್ಯಾನಿಂಗ್ ಮಾಡಲಾಗುವುದು ಎಂದು ತಿಳಿಸಿದರು. ಸಿಂಡಿಕೇಟ್ ಈ ವಿಷಯವನ್ನು ಒಪ್ಪಿ 05/ 16.06.2020 ರ ಸಿಂಡಿಕೇಟ್ ಸಭೆಗಳ ಇನ್ನುಳಿದ ಎಲ್ಲಾ ವಿಷಯಗಳ ನಿರ್ಣಯಗಳ ಮೇಲೆ ತೆಗೆದುಕೊಂಡ ಕ್ರಮಗಳನ್ನು ಅನುಮೋದಿಸಿತು. |
| ವಿಷಯ ಸಂಖ್ಯೆ-3 | **ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಹೆಸರನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಎಂದು ಬದಲಾಯಿಸಿ ಸರ್ಕಾರ ಹೊರಡಿಸಿದ ಅಧಿಸೂಚನೆಯನ್ನು ಪ್ರಾಧಿಕಾರಗಳ ಗಮನಕ್ಕೆ ತರುವ ಕುರಿತು.**<br><br>ಕುಲಸಚಿವರು ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯದ ಹೆಸರನ್ನು "ಬೆಂಗಳೂರು ನಗರ ವಿಶ್ವವಿದ್ಯಾನಿಲಯ" ಎಂದು ಬದಲಾಯಿಸಿ ಸರ್ಕಾರ ಹೊರಡಿಸಿರುವ *ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಆಧ್ಯಾದೇಶ, 2020* ರಲ್ಲಿನ ಅಂಶಗಳನ್ನು ಸಭೆಯ ಗಮನಕ್ಕೆ ತಂದರು. |

| | |
|---|---|
| | ಸಿಂಡಿಕೇಟ್ ನಿರ್ಣಯ:<br><br>(i) ಆಧ್ಯಾದೇಶದ ಕನ್ನಡ ಅವತರಣಿಕೆಯಲ್ಲಿ 'ಬೆಂಗಳೂರು ನಗರ ವಿಶ್ವವಿದ್ಯಾನಿಲಯ" ಎಂದಿರುವುದನ್ನು ಸಿಂಡಿಕೇಟ್ ಚರ್ಚಿಸಿ, ಇದು ಅಧಿಕೃತವಾಗಿ ರಾಜ್ಯಪತ್ರದಲ್ಲಿ ಪ್ರಕಟವಾಗಿರುವುದರಿಂದ ಆಧ್ಯಾದೇಶದಲ್ಲಿರುವಂತೆ ಸರ್ಕಾರದ ಅಧಿಸೂಚನೆಯ ದಿನಾಂಕ ಜೂನ್ 19, 2020ನೇ ದಿನಾಂಕ ದಿಂದ ಜಾರಿಗೆ ಬರುವಂತೆ ವಿಶ್ವವಿದ್ಯಾನಿಲಯದ ಹೆಸರನ್ನು "ಬೆಂಗಳೂರು ನಗರ ವಿಶ್ವವಿದ್ಯಾನಿಲಯ" "Bengaluru City University" ಎಂದು ಬದಲಾಯಿಸಲು, ಹಾಗೂ ಇದರ ಬಗ್ಗೆ ಸಾರ್ವಜನಿಕ ಪ್ರಕಟಣೆ ಹೊರಡಿಸಬೇಕೆಂದು ನಿರ್ಣಯಿಸಲಾಯಿತು.<br><br>(ii) ಇಲ್ಲಿಯವರೆಗಿನ ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯದ "Bengaluru Central University" ಹೆಸರಿನಲ್ಲಿ ಪ್ರವೇಶ ಪಡೆದು, ಪರೀಕ್ಷೆ ಬರೆದಿರುವ ವಿದ್ಯಾರ್ಥಿಗಳಿಗೆ ಅಂಕ ಪಟ್ಟಿಗಳನ್ನು ಮತ್ತು ಇತರ ಸರ್ಟಿಫಿಕೇಟಗಳನ್ನು ಅದೇ ಹಳೆಯ ಹೆಸರಿನಲ್ಲಿ ನೀಡಲು ನಿರ್ಣಯಿಸಲಾಯಿತು.<br><br>(iii) ಮುಂದಿನ ಸುಮಾರು ಹತ್ತು ವರ್ಷಗಳವರೆಗೆ ಸಾರ್ವಜನಿಕರ ಮಾಹಿತಿಗಾಗಿ ವಿಶ್ವವಿದ್ಯಾನಿಲಯದ ವೆಬ್ ಸೈಟಿನಲ್ಲಿ ವಿಶ್ವವಿದ್ಯಾನಿಲಯದ ಹೆಸರಿನ ಕೆಳಗೆ ಬ್ರಾಕೆಟ್‌ನಲ್ಲಿ (within brackets) "(Formerly known as Bengaluru Central University") "(ಹಿಂದಿನ ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯ)" ಎಂದು ನಮೂದಿಸಲು ನಿರ್ಣಯಿಸಲಾಯಿತು. |
| ವಿಷಯ ಸಂಖ್ಯೆ-4 | ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಕರಡು ಪರಿನಿಯಮಗಳನ್ನು (Statute) ಪರಿಗಣಿಸುವ ಕುರಿತು.<br><br>ಕುಲಸಚಿವರು ವಿಷಯವನ್ನು ಮಂಡಿಸಿ 04 ಕರಡು ಪರಿನಿಯಮಗಳನ್ನು ರಚಿಸಿ ದಿನಾಂಕ 05.06.2020ರಂದು ಜರುಗಿದ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದ್ದು, ಸಿಂಡಿಕೇಟ್ ನಿರ್ಣಯದಂತೆ ಸದರಿ ಪರಿನಿಯಮಗಳನ್ನು ವಿಶ್ರಾಂತ ಕುಲಪತಿಗಳಾದ ಪ್ರೊ: ಬಿ. ತಿಮ್ಮೇಗೌಡ ಅವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ಪುನರ್‌ರಚಿಸಿ 04 ಪರಿನಿಯಮಗಳ ಜೊತೆಗೆ ಇನ್ನಿತರ 07 ಪರಿನಿಯಮಗಳನ್ನು ಸಿದ್ದಪಡಿಸಲಾಗಿದೆ, ಇನ್ನುಳಿದ ಪರಿನಿಯಮಗಳನ್ನು ರಚಿಸುವ ಕಾರ್ಯ ಪ್ರಗತಿಯಲ್ಲಿದೆ. ವಿವಿಧ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಸಂಬಂಧಿಸಿದಂತೆ ಆರ್ಥಿಕ ಪರಿಣಾಮಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 41(2) ಮತ್ತು (3)ರನುಸಾರ ಹಣಕಾಸು ಸಮಿತಿಯ ಮುಂದೆ ಮಂಡಿಸಿ ಹಣಕಾಸು ಸಮಿತಿ ಹಾಗೂ ವಿದ್ಯಾವಿಷಯಕ ಪರಿಷತ್ತಿನ ಅನುಮೋದನೆಯೊಂದಿಗೆ ಸಿಂಡಿಕೇಟ್ ಮುಂದೆ ಪರಿಗಣನೆಗಾಗಿ ಮಂಡಿಸಲಾಗಿದೆ ಎಂದು ವಿವರಿಸಿದರು. ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯ ನೇಮಕಾತಿಯ ಬಗ್ಗೆ ಹಣಕಾಸು ಸಮಿತಿಯು ಕೆಲವು ತಿದ್ದುಪಡಿಗಳನ್ನು ಸೂಚಿಸಿದೆ ಎಂದು ತಿಳಿಸಿದರು.<br><br>ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ಮತ್ತು ಶ್ರೀಮತಿ ಜ್ಯೋತಿ ವಿಜಯ್ ಅವರುಗಳು ಮಾತನಾಡಿ ಕರಡು ಪರಿನಿಯಮಗಳನ್ನು ಕೂಲಂಕಷವಾಗಿ ಪರಿಶೀಲಿಸಲು, ಸಣ್ಣಪುಟ್ಟ ಕಾಗುಣಿತ/ವ್ಯಾಕರಣ ತಪ್ಪುಗಳಿದ್ದರೆ ಸರಿಪಡಿಸಲು ಸಾಕಷ್ಟು ಸಮಯ ಬೇಕಾಗುವುದರಿಂದ ಈ ವಿಷಯವನ್ನು ಮುಂದೂಡಿ ಮುಂದಿನ ಸಭೆಯಲ್ಲಿ ಪರಿಗಣಿಸಬಹುದೆಂದು ತಿಳಿಸಿದರು. ಅಲ್ಲದೆ ಕರಡು ಪರಿನಿಯಮಗಳ soft copy ಗಳನ್ನು ಎಲ್ಲಾ ಸದಸ್ಯರಿಗೆ ಕಳುಹಿಸಬೇಕೆಂದು ಕೋರಿದರು. |

| | |
|---|---|
| | ಸಿಂಡಿಕೇಟ್ ನಿರ್ಣಯ:<br>ಸದಸ್ಯರ ಅಭಿಪ್ರಾಯದಂತೆ ವಿಷಯವನ್ನು ಮುಂದಿನ ಸಭೆಗೆ ಮುಂದೂಡಲಾಯಿತು ಹಾಗೂ ಕರಡು ಪರಿನಿಯಮಗಳ soft copy ಗಳನ್ನು ಎಲ್ಲಾ ಸದಸ್ಯರಿಗೆ ಇ-ಮೇಲ್ ಮೂಲಕ ಕಳುಹಿಸಲು ನಿರ್ಣಯಿಸಲಾಯಿತು.<br>ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ಮತ್ತು ಶ್ರೀಮತಿ ಜ್ಯೋತಿ ವಿಜಯ್ ಅವರು ಪರಿನಿಯಮಗಳನ್ನು ಕೂಲಂಕಷವಾಗಿ ಪರಿಶೀಲಿಸಿ ತಿದ್ದುಪಡಿಗಳೇನಾದರೂ ಇದ್ದರೆ ತಿಳಿಸುವುದಾಗಿ ತಿಳಿಸಿದರು.<br>ದಿನಾಂಕ: 13.08.2015 ರಂದು ಪ್ರಕಟಿಸಲಾದ ಕರ್ನಾಟಕ ರಾಜ್ಯಪತ್ರದ ಪ್ರಕರಣ 7(2) ರಲ್ಲಿ ತಿಳಿಸಿರುವಂತೆ ಈ ವಿಶ್ವವಿದ್ಯಾನಿಲಯದ ಪರಿನಿಯಮಗಳನ್ನು ಜಾರಿಯಾಗುವವರೆಗೆ ಬೆಂಗಳೂರು ವಿಶ್ವವಿದ್ಯಾಲಯ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000 ರ ಪ್ರಕಾರ ರಚಿಸಿಕೊಳ್ಳಲಾಗಿರುವ ಹಾಗೂ ಸಾಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ಪರಿನಿಯಮಗಳನ್ನು ಯಥಾವತ್ತಾಗಿ ಅಳವಡಿಸಿ ಕೊಳ್ಳಲು ತೀರ್ಮಾನಿಸಲಾಯಿತು. |
| ವಿಷಯ ಸಂಖ್ಯೆ -5 | ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ನವೆಂಬರ್/ ಡಿಸೆಂಬರ್ 2018-19 ನೇ ಶೈಕ್ಷಣಿಕ ಸಾಲಿನಿಂದ ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸಿರುವ ಬಿಲ್ಲುಗಳನ್ನು ಪಾವತಿಸುವ ಬಗ್ಗೆ.<br>ಕುಲಸಚಿವರು ವಿಷಯವನ್ನು ಮಂಡಿಸಿ ಪರೀಕ್ಷಾ ವಿಭಾಗದಲ್ಲಿ 2018-19ನೇ ಶೈಕ್ಷಣಿಕ ಸಾಲಿನಿಂದ ಪ್ರಶ್ನೆ ಪತ್ರಿಕೆಗಳನ್ನು ಮುದ್ರಿಸಿ ಸರಬರಾಜು ಮಾಡಿರುವ ಬಿಲ್ಲುಗಳಿಗೆ ಹಣ ಪಾವತಿಸಲು ಸಿಂಡಿಕೇಟ್‌ನ ಅನುಮೋದನೆ ಕೋರಿದರು.<br>ಮಾನ್ಯ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ಮತ್ತು ಡಾ: ಹೆಚ್. ಟಿ. ಅರವಿಂದ್ ಅವರು ಮಾತನಾಡಿ ಪರೀಕ್ಷಾವಾರು ಪ್ರಶ್ನೆ ಪತ್ರಿಗೆಗಳ ಮತ್ತು ಓ.ಎಂ.ಆರ್ ಶೀಟ್‌ಗಳ ಸಂಖ್ಯೆಯ ವಿವರ ಹಾಗು ಪ್ರತಿ ಪ್ರಶ್ನೆ ಪತ್ರಿಕೆಯ/ಓ.ಎಂ.ಆರ್. ಮುದ್ರಣ ವೆಚ್ಚದ ದರಗಳನ್ನು ಒದಗಿಸಲು ಕೋರಿದರು. ಇದರೊಂದಿಗೆ ಪಿ. ಹೆಚ್‌ಡಿ. ಪ್ರವೇಶ ಪರೀಕ್ಷೆಗೆ ಮುದ್ರಿಸಿದ ಸಾಮಗ್ರಿಯ ವಿವರಗಳನ್ನು ಒದಗಿಸಿದ ನಂತರ ಮುಂದಿನ ಸಭೆಯಲ್ಲಿ ಈ ವಿಷಯವನ್ನು ಪರಿಗಣಿಸಬಹುದೆಂದು ತಿಳಿಸಿದರು.<br>ಸಿಂಡಿಕೇಟ್ ನಿರ್ಣಯ:<br>ವಿಷಯವನ್ನು ಮುಂದಿನ ಸಭೆಗೆ ಮುಂದೂಡಲು ನಿರ್ಣಯಿಸಲಾಯಿತು. ಕುಲಸಚಿವರು(ಮೌಲ್ಯಮಾಪನ) ಅವರು ಮುಂದಿನ ಸಭೆಯಲ್ಲಿ ಸದಸ್ಯರು ಕೇಳಿರುವ ವಿವರಗಳನ್ನು ಒದಗಿಸುವುದಾಗಿ ತಿಳಿಸಿದರು. |

| | |
|---|---|
| ವಿಷಯ ಸಂಖ್ಯೆ-6 | **ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿ ದಿನನಿತ್ಯದ ಸ್ವಚ್ಛತೆಗಾಗಿ ಗುತ್ತಿಗೆ ನೀಡಿರುವ ಬಗ್ಗೆ ವಿವರಗಳು ಹಾಗೂ ದಿನಾಂಕ 01.07.2020 ರಿಂದ ನೂತನ ಟೆಂಡರ್‌ದಾರರು ಆಯ್ಕೆ ಆಗುವ ತನಕ ಪ್ರಸ್ತುತ ಗುತ್ತಿಗೆಯನ್ನು ಮುಂದುವರೆಸುವ ಬಗ್ಗೆ**<br><br>ಕುಲಸಚಿವರು ವಿಷಯವನ್ನು ಮಂಡಿಸಿ ಸ್ವಚ್ಛತಾ ಕಾರ್ಯಗಳಿಗೆ ಟೆಂಡರ್ ಆಗಿರುವ ಪ್ರಕ್ರಿಯೆಯನ್ನು ವಿವರಿಸಿದರು. ಮೊದಲನೇ ಬಾರಿ ಟೆಂಡರ್ ಅನಿವಾರ್ಯ ಕಾರಣದಿಂದ ಮುಂದೂಡಲಾಯಿತು. ಎರಡನೇ ಬಾರಿ ಏಕ ಟೆಂಡರ್ ಆಗಿರುವುದರಿಂದ ಮೂರನೇ ಸಲ ಟೆಂಡರ್ ಆಹ್ವಾನಿಸಲಾಗಿದೆ. ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಗುತ್ತಿಗೆ ನೀಡುವುದು ವಿಳಂಭವಾಗಿರುವುದರಿಂದ 01.07.2020 ರಿಂದ ಹೊಸ ಗುತ್ತಿಗೆದಾರರು ಆಯ್ಕೆಯಾಗುವವರೆಗೆ ಹಾಲಿ ಕಾರ್ಯನಿರ್ವಹಿಸುತ್ತಿರುವ ಗುತ್ತಿಗೆದಾರರನ್ನು ಮುಂದುವರೆಸಲು ಸಭೆಯ ಅನುಮೋದನೆ ಕೋರಿದರು.<br><br>ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ಸ್ವಚ್ಛತಾ ಸಿಬ್ಬಂದಿಯ ಹಾಜರಾತಿ ತೆಗೆದುಕೊಳ್ಳುವ ಬಗ್ಗೆ ಹಾಗೂ ಅವರಿಗೆ ವೇತನ ಪಾವತಿಯ ಖಚಿತತೆಯ ಬಗ್ಗೆ ವಿವರ ಕೇಳಿದರು. ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ಅವರು ಸಿಬ್ಬಂದಿಗೆ ಇ.ಎಸ್.ಐ ಮತ್ತು ಪಿ.ಎಫ್ ಪಾವತಿಸಿರುವ ಬಗ್ಗೆ ಧೃಡೀಕರಣಗಳನ್ನು ಖಚಿತಪಡಿಸಿಕೊಳ್ಳಬೇಕೆಂದು ತಿಳಿಸಿದರು. ಈ ಎಲ್ಲಾ ಅಂಶಗಳನ್ನು ಗುತ್ತಿಗೆದಾರರೊಂದಿಗೆ ಮಾಡಿಕೊಳ್ಳುವ ಕರಾರು ಪತ್ರದಲ್ಲಿ ಅಳವಡಿಸಬೇಕೆಂದು ತಿಳಿಸಿದರು.<br><br>ಮಾನ್ಯ ಸದಸ್ಯರಾದ ಡಾ: ಇ. ಬಿ. ರಾಜೇಶ್ ಅವರು ಮಾತನಾಡಿ ವಿಶ್ವವಿದ್ಯಾಲಯದ ಆವರಣ ದೊಡ್ಡದಾಗಿರುವುದರಿಂದ ಸ್ವಚ್ಛತಾ ಕಾರ್ಯಗಳಿಗೆ ಇನ್ನೂ ಹೆಚ್ಚಿನ ಸಿಬ್ಬಂದಿಯನ್ನು ಪಡೆಯ ಬೇಕಾಗಬಹುದೆಂದು ಅಭಿಪ್ರಾಯಪಟ್ಟರು.<br><br>ಸಿಂಡಿಕೇಟ್ ನಿರ್ಣಯ:<br>**ವಿಶ್ವವಿದ್ಯಾಲಯದಲ್ಲಿ ಹಾಲಿ ಸ್ವಚ್ಛತಾ ಕಾರ್ಯಗಳನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರನ್ನು 01.07.2020 ರಿಂದ ಸೆಪ್ಟೆಂಬರ್ ಅಂತ್ಯದವರೆಗೆ ಮುಂದುವರೆಸಲು ಸಿಂಡಿಕೇಟ್ ಅನುಮೋದನೆ ನೀಡಿತು. ಟೆಂಡರ್ ಪ್ರಕ್ರಿಯೆಯನ್ನು ತ್ವರಿತವಾಗಿ ಅಂತಿಮಗೊಳಿಸಲು ಸೂಚಿಸಲಾಯಿತು.** |
| ವಿಷಯ ಸಂಖ್ಯೆ-7 | **ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿ ಆಧಾರ್ ಸಂಖ್ಯೆ ಆಧಾರಿತ ಡಿಜಿಟಲ್ (e-Sign) ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಆನ್‌ಲೈನ್ ಮೂಲಕ ಮೆ. ಕಿಯೋನಿಕ್ಸ್ ಸಂಸ್ಥೆಯವರ e-Documents Generation System (EDGS) ತಂತ್ರಾಂಶವನ್ನು ಬಳಸಿಕೊಂಡು Online /digital format ನಲ್ಲಿ ತಯಾರಿಸಿ ವಿತರಿಸುವ ಸಂಬಂಧ ಚರ್ಚೆ ಮತ್ತು ನಿರ್ಣಯಕ್ಕಾಗಿ ವಿಷಯವನ್ನು ಸಿಂಡಿಕೇಟನಲ್ಲಿ ಮಂಡಿಸಲಾಗಿದೆ.**<br><br>ಕುಲಸಚಿವರು ಅವರು ವಿಷಯವನ್ನು ಮಂಡಿಸಿದರು. ಮಾನ್ಯ ಸದಸ್ಯರಾದ ಡಾ: ಇ. ಬಿ. ರಾಜೇಶ್ ಅವರು ಚರ್ಚೆ ಆರಂಭಿಸಿ ಕಿಯೋನಿಕ್ಸ್ ಸಂಸ್ಥೆಯವರು EDGS ತಂತ್ರಾಂಶದ ಡಿಜಿಟೆಲ್ ಅಂಕ ಪಟ್ಟಿ/ಪ್ರಮಾಣ ಪತ್ರಗಳಿಗೆ ನಮೂದಿಸಿರುವ ದರ (ರೂ.132/- + 18% ಜಿಎಸ್‌ಟಿ) ಹೆಚ್ಚು ಎಂದು ಕಂಡು ಬರುತ್ತಿದೆ. ಈ ಪ್ರಸ್ತಾವನೆಯ ಬಗ್ಗೆ ಕಿಯೋನಿಕ್ಸ್ ಸಂಸ್ಥೆ ಸಿಂಡಿಕೇಟ್ ಸಭೆಯಲ್ಲಿ ಬಂದು ಪ್ರಸ್ತುತಿ (presentation) ನೀಡಬೇಕೆಂದು ತಿಳಿಸಿದರು. |

| | |
|---|---|
| | ಮಾನ್ಯ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ಅವರು ಮಾತನಾಡಿ ಈ ಪ್ರಸ್ತಾವನೆಯನ್ನು ಪರೀಕ್ಷಾ ನಿರ್ವಹಣಾ ವ್ಯವಸ್ಥೆಯ (Examination Management System) ಜೊತೆಗೆ ಪರಿಗಣಿಸಬಹುದಾಗಿದೆ ಎಂದು ತಿಳಿಸಿದರು.<br><br>ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ಅವರು ಮಾತನಾಡಿ ಇದರ ಬಗ್ಗೆ ವೆಚ್ಚ ವಿಶ್ಲೇಷಣೆ (Cost Analysis) ಮಾಡಿ ವೆಚ್ಚ ಹೆಚ್ಚಾಗಿದೆ ಎಂದು ಕಂಡುಬಂದರೆ ವಾಸ್ತವಾಂಶವನವನ್ನು ಸರ್ಕಾರಕ್ಕೆ ತಿಳಿಸಬಹುದು ಎಂದು ತಿಳಿಸಿದರು.<br><br>**ಸಿಂಡಿಕೇಟ್ ನಿರ್ಣಯ:**<br>ಪ್ರಸ್ತಾವನೆಯ ಬಗ್ಗೆ ಕಿಯೋನಿಕ್ಸ್ ಸಂಸ್ಥೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತುತಿ ನೀಡಿದ ನಂತರ ವೆಚ್ಚ ವಿಶ್ಲೇಷಣೆ ಮಾಡಿ ನಂತರ ತೀರ್ಮಾನಿಸಬಹುದೆಂದು ನಿರ್ಣಯಿಸಲಾಯಿತು.<br><br>ಕುಲಸಚಿವರು (ಮೌಲ್ಯಮಾಪನ) ಅವರು ಕಿಯೋನಿಕ್ಸ್ ಅವರಿಂದ ಪ್ರಸ್ತುತಿಗೆ ವ್ಯವಸ್ಥೆ ಮಾಡಲು ಸೂಚಿಸಲಾಯಿತು. |
| ವಿಷಯ ಸಂಖ್ಯೆ –8 | **ವಿಶ್ವವಿದ್ಯಾನಿಲಯದ ವಿವಿಧ ಕಛೇರಿ/ವಿಭಾಗಗಳಲ್ಲಿ ಕಾರ್ಯ ನಿರ್ವಹಿಸಲು ಜುಲೈ 2020 ರಲ್ಲಿ 54 ವಿವಿಧ ವೃಂದದ ನೌಕರರ ಸೇವೆ ಪಡೆದು ಅವರಿಗೆ ವೇತನ ಪಾವತಿಸಿರುವ ಬಗ್ಗೆ.**<br>ಕುಲಸಚಿವರು ವಿಷಯವನ್ನು ಮಂಡಿಸಿದರು. ಹಿಂದಿನ ಸಿಂಡಿಕೇಟ್ ಸಭೆಯ ನಿರ್ಣಯದಂತೆ ಕಿಯೋನಿಕ್ಸ್ ಸಂಸ್ಥೆಯಿಂದ ಮಾನವ ಸಂಪನ್ಮೂಲ ಪಡೆಯಲು ಪತ್ರ ವ್ಯವಹಾರ ನಡೆಸಿ ಕಾರಣಾಂತರಗಳಿಂದ ಅವರಿಂದ ಮರುತ್ತರ ಬರುವಲ್ಲಿ ವಿಳಂಭವಾಗಿರುವುದರಿಂದ ಸಿಂಡಿಕೇಟ್ ಅನುಮೋದನೆಯನ್ನು ನಿರೀಕ್ಷಿಸಿ, ಹಾಲಿ ಕಾರ್ಯನಿರ್ವಹಿಸುತ್ತಿರುವ 54 ನೌಕರರ ಸೇವೆಯನ್ನು ಪಡೆದು ಜುಲೈ 2020ರ ವೇತನ ಪಾವತಿ ಮಾಡಲಾಗಿದೆ. ಈ ಪ್ರಕ್ರಿಯೆ ಇನ್ನೂ ಪೂರ್ಣಗೊಳ್ಳ ಬೇಕಾಗಿರುವುದರಿಂದ 2020ರ ಸೆಪ್ಟೆಂಬರ್ ಅಂತ್ಯದವರೆಗೆ ಹಾಲಿ ಇರುವ ಪರಿಸ್ಥಿತಿಯನ್ನು ಮುಂದುವರೆಸಲು ಅನುಮೋದನೆ ನೀಡಬೇಕೆಂದು ಕೋರಿದರು. ಪರ್ಯಾಯವಾಗಿ ಈ ಸೇವೆಗಾಗಿ ಟೆಂಡರ್ ಕರೆಯಲೂ ಸಹ ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.<br><br>ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ಅವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸೇವೆ ತೃಪ್ತಿಕರವಾಗಿದ್ದರೆ ಅಂತಹವರನ್ನು ಗುರ್ತಿಸಿ ಕಿಯೋನಿಕ್ಸ್ ಮೂಲಕ ಅವರ ಸೇವೆಯನ್ನು ಮುಂದುವರೆಸ ಬಹುದೆಂದು ತಿಳಿಸಿದರು.<br>ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ಮಾತನಾಡಿ ಕಿಯೋನಿಕ್ಸ್ ಸಂಸ್ಥೆಯವರು ಒದಗಿಸುವ ವ್ಯಕ್ತಿಗಳ ಸೇವೆಯನ್ನು ಪಡೆಯುವ ಮುನ್ನ ವಿಶ್ವವಿದ್ಯಾಲಯ ವೃತಿ ಕೌಶಲ್ಯ ಪರೀಕ್ಷೆ (Skill Test) ಯನ್ನು ಮಾಡಲಾಗುವುದೇ ಎಂದು ತಿಳಿಯ ಬಯಸಿದರು. ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ಅವರು ಧನಿಗೂಡಿಸಿ ಅಂತಹ ಪರೀಕ್ಷೆಯನ್ನು ಮಾಡಬೇಕೆಂದರು.<br><br>ಕುಲಸಚಿವರು ಉತ್ತರಿಸಿ ಹೊಸ ವ್ಯಕ್ತಿಗಳ ಸೇವೆಯನ್ನು ಬಳಸಿಕೊಳ್ಳುವ ಮುಂಚೆ ಒಂದು ಪರೀಕ್ಷೆಯನ್ನು ನಡೆಸಲಾಗುವುದೆಂದು ತಿಳಿಸಿದರು. |

| | |
|---|---|
| | ಸಿಂಡಿಕೇಟ್ ನಿರ್ಣಯ:<br><br>1) ವಿಶ್ವವಿದ್ಯಾನಿಲಯದಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ 54 ಸಿಬ್ಬಂದಿಯನ್ನು 2020 ರ ಜುಲೈ ತಿಂಗಳುಗಳಲ್ಲಿ ಮುಂದುವರೆಸಿ ವೇತನ ಪಾವತಿಸಿರುವುದಕ್ಕೆ ಸಿಂಡಿಕೇಟ್ ಘಟನೋತ್ತರ ಅನುಮೋದನೆ ನೀಡಿತು.<br><br>2) ಕಿಯೋನಿಕ್ಸ್ ಸಂಸ್ಥೆಯೊಡನೆ ಒಡಂಬಡಿಕೆ ಅಥವಾ ಟೆಂಡರ್ ಮೂಲಕ ಗುತ್ತಿಗೆದಾರರನ್ನು ಆಯ್ಕೆ ಮಾಡುವವರೆಗೆ ಹಾಲಿ 54 ಸಿಬ್ಬಂದಿಯನ್ನು 2020ರ ಆಗಸ್ಟ್ ಮತ್ತು ಸೆಪ್ಟೆಂಬರ್ ಅಂತ್ಯದವರೆಗೆ ಮುಂದುವರೆಸಲು ಸಿಂಡಿಕೇಟ್ ನಿರ್ಣಯಿಸಿತು.<br><br>3) ಸೆಪ್ಟೆಂಬರ್ 2020ರ ಅಂತ್ಯದೊಳಗೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಆಡಳಿತಕ್ಕೆ ಸೂಚಿಸಲಾಯಿತು. |
| ವಿಷಯ ಸಂಖ್ಯೆ-9 | ವಿಶ್ವವಿದ್ಯಾನಿಲಯದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಉದ್ಯಾನವನ ಹಾಗೂ ಅದರ ಸುತ್ತಮುತ್ತದಲ್ಲಿನ ರಸ್ತೆಗಳನ್ನು ಸ್ವಚ್ಛಗೊಳಿಸಲು ಜುಲೈ 2020ರಲ್ಲಿ ತೋಟಪಾಲಕರ ಸೇವೆ ಪಡೆದಿರುವ ಬಗ್ಗೆ.<br><br>ಕುಲಸಚಿವರು ವಿಷಯವನ್ನು ಮಂಡಿಸಿ ತೋಟಪಾಲಕರ ಸೇವೆಯನ್ನು ಪಡೆಯಲು ಎರಡು ಬಾರಿ ಇ-ಟೆಂಡರ್ ಕರೆಯಲಾಗಿ ಮೊದಲನೇ ಬಾರಿ ಟೆಂಡರ್ ಅನಿವಾರ್ಯ ಕಾರಣದಿಂದಾಗಿ ಮುಂದೂಡಲಾಯಿತು. ಎರಡನೇ ಬಾರಿ ಏಕ ಬಿಡ್ ಬಂದಿರುವುದರಿಂದ 3ನೇ ಬಾರಿ ಟೆಂಡರ್ ಕರೆಯಲಾಗಿದೆ. ಹಾಗಾಗಿ 6 ಜನ ತೋಟಪಾಲಕರನ್ನು ಜುಲೈ 2020ರ ತಿಂಗಳುಗಳಲ್ಲಿ ಮುಂದುವರೆಸಿ ವೇತನ ಪಾವತಿಸಲಾಗಿದೆ. ಇದಕ್ಕೆ ಸಿಂಡಿಕೇಟ್ ಘಟನೋತ್ತರ ಅನುಮೋದನೆ ನೀಡಿ, ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸುವವರೆಗೆ ಅದೇ ಸ್ಥಿತಿಯನ್ನು ಮುಂದುವರೆಸಲು ಅನುಮೋದನೆ ಕೋರಿದರು.<br><br>ಸಿಂಡಿಕೇಟ್ ನಿರ್ಣಯ:<br><br>1) ಜುಲೈ 2020ರ ತಿಂಗಳುಗಳಲ್ಲಿ ಆರು ಜನರನ್ನು ತೋಟಪಾಲಕರ ಕಾರ್ಯಗಳಿಗೆ ಉಪಯೋಗಿಸಿ ತಲಾ ಮಾಹೆಯಾನ ರೂ.8,000/- ಸಂಭಾವನೆ ನೀಡಿರುವುದಕ್ಕೆ ಸಿಂಡಿಕೇಟ್ ಘಟನೋತ್ತರ ಅನುಮೋದನೆ ನೀಡಿತು.<br><br>2) 3ನೇ ಬಾರಿ ಕರೆದಿರುವ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸುವವರೆಗೆ 6 ತೋಟಪಾಲಕರ ಸೇವೆಯನ್ನು ಸೆಪ್ಟೆಂಬರ್ ಅಂತ್ಯದವರೆಗೆ ಪಡೆದು ವೇತನ ಪಾವತಿಸಲು ಸಿಂಡಿಕೇಟ್ ಅನುಮೋದನೆ ನೀಡಿತು. |

| | |
|---|---|
| ವಿಷಯ ಸಂಖ್ಯೆ-10 | ಬೆಂಗಳೂರು ವಿಶ್ವವಿದ್ಯಾಲಯದಿಂದ ವರ್ಗಾವಣೆಗೊಂಡು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೂರು ನೌಕರರು ಮಾತೃ ವಿಶ್ವವಿದ್ಯಾಲಯಕ್ಕೆ ಹಿಂದಿರುಗುವ ಇಚ್ಛೆ ಹೊಂದಿ ಸಲ್ಲಿಸಿರುವ ಮನವಿಗಳ ಬಗ್ಗೆ.<br><br>ಕುಲಸಚಿವರು ವಿಷಯವನ್ನು ಮಂಡಿಸಿದರು.<br>**ಸಿಂಡಿಕೇಟ್ ನಿರ್ಣಯ:**<br>**ಚರ್ಚೆಯ ನಂತರ ಸರ್ಕಾರಿ ಆದೇಶ ಸಂಖ್ಯೆ ಇಡಿ 346 ಯುಬಿವಿ 2018, ದಿನಾಂಕ 13.02.2019 ರಲ್ಲಿ ನೀಡಿರುವ ಆಯ್ಕೆಯ ಸ್ವಾತಂತ್ರದ ಪ್ರಕಾರ ಈ ಕೆಳಕಂಡ 3 ನೌಕರರನ್ನು ಅವರ ಮನವಿಯ ಮೇರೆಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದಿಂದ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಹುದ್ದೆರಹಿತವಾಗಿ ವರ್ಗಾವಣೆ ಮಾಡಲು ಸಿಂಡಿಕೇಟ್ ನಿರ್ಣಯಿಸಿತು.**<br>**01. ಶ್ರೀಮತಿ ರಾಜಸುಲೋಚನಾ, ಅಧೀಕ್ಷಕರು**<br>**02. ಶ್ರೀಮತಿ ಸಿ. ಈ. ವಸಂತ ಕುಮಾರಿ, ಸಹಾಯಕಿ**<br>**03. ಶ್ರೀ ಎನ್. ವೆಂಕಟೇಶ್‌ಮೂರ್ತಿ, ಗ್ರೂಪ್-ಡಿ** |
| ವಿಷಯ ಸಂಖ್ಯೆ-11 | **ನವೆಂಬರ್/ಡಿಸೆಂಬರ್ 2019 ರಲ್ಲಿ ನಡೆದ ಸ್ನಾತಕ ಪದವಿ ಪರೀಕ್ಷೆಯಲ್ಲಿ Malpractice ಮಾಡಿದ ವಿದ್ಯಾರ್ಥಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಸಂಬಂಧ Malpractice Enquiry Committee ಶಿಫಾರಸ್ಸುಗಳನ್ನು ಸಿಂಡಿಕೇಟಿನ ಮುಂದೆ ಮಂಡಿಸುವ ಕುರಿತು.**<br><br>ಕುಲಸಚಿವರು ವಿಷಯವನ್ನು ಮಂಡಿಸಿದರು.<br>ಮಾನ್ಯ ಸದಸ್ಯರಾದ ಡಾ: ಇ. ಬಿ. ರಾಜೇಶ್ ಅವರು ಪ್ರಸ್ತಾವನೆಯಲ್ಲಿರುವ Malpractice ಮಾಡಿರುವ ವಿದ್ಯಾರ್ಥಿಗಳಿಗೆ ರೂ. 5,000/- ದಂಡ ವಿಧಿಸಲಾಗಿದೆ. ಆದರೆ ಒಬ್ಬ ವಿದ್ಯಾರ್ಥಿಗೆ ಮಾತ್ರ ರೂ. 10,000/- ದಂಡ ವಿಧಿಸಲಾಗಿದೆ ಎಂದು ಗಮನಿಸಿದರು.<br>ಕುಲಸಚಿವರು (ಮೌಲ್ಯಮಾಪನ) ಅವರು ಉತ್ತರಿಸಿ ಆ ವಿದ್ಯಾರ್ಥಿ ಉತ್ತರ ಪತ್ರಿಕೆಯನ್ನು ಹೊರ ತೆಗೆದುಕೊಂಡು ಹೋಗಿ ಹರಿದು ಹಾಕಿರುವುದನ್ನು ಪರಿಗಣಿಸಿ ಸಮಿತಿಯು ಹೆಚ್ಚಿನ ದಂಡ ವಿಧಿಸಿದೆ ಎಂದು ಸ್ಪಷ್ಟಪಡಿಸಿದರು.<br>ಮಾನ್ಯ ಸದಸ್ಯರಾದ ಡಾ: ಹೆಚ್. ಟಿ. ಅರವಿಂದ್ ಅವರು, ಪ್ರಸ್ತುತ ವಿಶ್ವವಿದ್ಯಾನಿಲಯದ ಪರೀಕ್ಷೆಗಳನ್ನು BCU Examination Manual -2018ರ ಪ್ರಕಾರ ನಡೆಸಲಾಗುತ್ತಿದೆ. ಆದರೆ ಪರಾಮರ್ಶಿತ ಟಿಪ್ಪಣಿಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಆರ್ಡಿನೆನ್ಸ್ 2011 ರ ಪ್ರಕಾರ ದಂಡಗಳನ್ನು ವಿಧಿಸಲಾಗಿದೆ ಎಂದು ಗಮನಿಸಿದರು. ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ಅವರು ಮಾತನಾಡಿ 2015 ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮದಲ್ಲಿರುವಂತೆ ನಮ್ಮದೇ ಆದ ಹೊಸ ಪರಿನಿಯಮ / ವಿನಿಯಮ / ಆಧ್ಯಾದೇಶಗಳನ್ನು ಹೊಂದುವವರೆಗೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಜಾರಿಯಲ್ಲಿರುವ ಪರಿನಿಯಮ/ ವಿನಿಯಮ / ಆಧ್ಯಾದೇಶಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕಾಗಿತ್ತು ಎಂದು ತಿಳಿಸಿದರು. |

| | |
|---|---|
| | ಸಿಂಡಿಕೇಟ್ ನಿರ್ಣಯ:<br>ಬೆಂಗಳೂರು ವಿಶ್ವವಿದ್ಯಾಲಯ ಪರೀಕ್ಷಾ ಆರ್ಡಿನೆನ್ಸ್ –2011 ರಲ್ಲಿ ಮತ್ತು **BCU Examination Manual–2018** ರಲ್ಲಿರುವ **Malpractice** ಗೆ ಸಂಬಂಧಿಸಿದ ದರಗಳು ಒಂದೇ ರೀತಿ ಇರುವುದನ್ನು ಗಮನಿಸಿ ನವೆಂಬರ್/ಡಿಸೆಂಬರ್ 2019 ರಲ್ಲಿ ನಡೆದ ಸ್ನಾತಕ ಪದವಿ ಪರೀಕ್ಷೆಯಲ್ಲಿ **Malpractice** ಮಾಡಿದ ವಿದ್ಯಾರ್ಥಿಗಳ ಬಗ್ಗೆ ದಿನಾಂಕ **08–06–2020** ರಂದು ಜರುಗಿದ **Malpractice Enquiry Committee** ಸಭೆಯು ಮಾಡಿರುವ ಶಿಫಾರಸ್ಸುಗಳನ್ನು ಸಿಂಡಿಕೇಟ್ ಪರಿಗಣಿಸಿ ಅನುಮೋದಿಸಿತು. |
| ವಿಷಯ ಸಂಖ್ಯೆ–12 | **Inclusion of certain items proposed by Smt. Jyothi Vijay, Syndicate Member for discussion and deliberation by the Members of the Syndicate at the meeting scheduled on 29.08.2020.**<br>ದಿನಾಂಕ 17.08.2020 ಹಾಗೂ 28.08.2020 ರಂದು ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ಇ–ಮೇಲ್‌ನಲ್ಲಿ ಕಳುಹಿಸಿರುವ 14 ಅಂಶಗಳ ಬಗ್ಗೆ ಶ್ರೀಮತಿ ಜ್ಯೋತಿ ವಿಜಯ್ ಅವರು ಪ್ರಸ್ತಾಪಿಸಿ ಅವುಗಳಲ್ಲಿ ಕ್ರಮಸಂಖ್ಯೆ 8 ಮತ್ತು 7 ರ ಕುರಿತು ಇಂದಿನ ಸಭೆಯಲ್ಲಿ ಪರಿಗಣಿಸಲು ಕೋರಿದರು.<br>ಅದರಂತೆ ಸಿಂಡಿಕೇಟ್ ಮೊದಲಿಗೆ ಕ್ರಮ ಸಂಖ್ಯೆ 8– **"Constituting 5-6 Syndicate Standing Committees in order to plan and execute several administrative, academic and other progressive works so as to provide the much needed fillip in the formative stages of the University"** ಇದರ ಬಗ್ಗೆ ಚರ್ಚೆ ನಡೆಸಿತು. ಶ್ರೀ ಕರಣ್ ಕುಮಾರ್ ಅವರು ಮಾತನಾಡಿ ಇದು ಹೊಸ ವಿಶ್ವವಿದ್ಯಾನಿಲಯವಾಗಿರುವುದರಿಂದ ವಿಶ್ವವಿದ್ಯಾನಿಲಯದ ಬೆಳವಣಿಗೆಯ ದೃಷ್ಟಿಯಿಂದ ಇಂತಹ ಸ್ಥಾಯಿ ಸಮಿತಿಗಳನ್ನು (Standing Committees) ರಚಿಸುವ ಅಗತ್ಯವಿದೆ ಎಂದು ತಿಳಿಸಿದರು.<br>ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ವಿಶ್ವವಿದ್ಯಾನಿಲಯದಲ್ಲಿ ಸಿಂಡಿಕೇಟ್‌ಗೆ ವಿವಿಧ ಕ್ಷೇತ್ರಗಳಿಂದ ನಾಮನಿರ್ದೇಶನ ಮಾಡುವ ಉದ್ದೇಶ, ಗುರಿಗಳನ್ನು ವಿವರಿಸಿದರು. ಹೊಸ ವಿಶ್ವವಿದ್ಯಾನಿಲಯದ ಪ್ರಥಮ ಸಿಂಡಿಕೇಟ್ ಸದಸ್ಯರಾಗಿ ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಸದಸ್ಯರು ಗಮನಾರ್ಹವಾಗಿ ಅಗತ್ಯ ಸಲಹೆ–ಸೂಚನೆಗಳನ್ನು ನೀಡಬೇಕಾಗಿದೆ ಎಂದರು. ದಿನಾಂಕ 28–08–2020ರಂದು ಅವರು ಕಳುಹಿಸಿರುವ ಪ್ರಸ್ತಾವನೆಯಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಕೆಳಕಂಡಂತೆ ವಿವರಣೆ ನೀಡಿದ್ದಾರೆ:<br>*" Honesty is necessary, but not sufficient to perform" - this is the oft-made statement in bureaucratic circles.*<br>*We have been nominated with the hope and expectation that we 'would perform, would improve governance, and deliver value to stakeholders of the University the students, the teachers and the society at large.*<br>*Well, given the environment in public Universities, it is quite possible for us to get sucked in tasks relating to investigations, initiating disciplinary proceedings, exposing people and taking punitive actions against the 'wrong-doers' in the University.* |

*When we actually look back at the end of 03 years, we are sure to realise that we have simply achieved nothing, added no value absolutely, as we didn't even focus on evolving systems that could minimise the incidence of poor practices, let alone 'new initiatives for the millennial youth'!!! But by then, it would be too late, and a lost opportunity!*

*It is understandable that evolving systems takes 'time'; but, someone, somewhere has to make the 'beginning'. There can be no 'better day' than today. While we have been bestowed with the 'board room power' as 'Syndicate Member' (nominated either by His Excellency the Governor and/ or the Government), the need is also to be 'the foot soldier'- both, by 'spirit' and 'by action'.*

*For this, we need to 'be' the change we wish to 'see'!*
*This Syndicate team has the very special privilege of being the 'founding Syndicate team'; however, we would love to be the 'pioneering Syndicate team', setting the right path for the teams in future.*

*For this, we propose to serve the University through 5-6 Standing Committees that would serve as a means of improving the Syndicate's effectiveness and efficiency in areas where more focused, specialised and technical discussions are required. These Committees would prepare the groundwork for decision making and report at the subsequent Syndicate meeting. These Committees would enable better management of Syndicate's full time and would allow in-depth scrutiny and focused attention for a given area. As is the common practice in any Governing Board, right from Standing to Ad hoc Committees to Task forces and Advisory Councils, this Syndicate too proposes to accomplish the ambitious task of building BCU through a variety of smaller groups..."*

ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ. ಆರ್. ಪಾರ್ವತಿ ಅವರು ಮಾತನಾಡಿ ಪ್ರಸ್ತಾಪಿತ ಸಮಿತಿಗಳು ಹಾಲಿ ಇರುವ ವಿವಿಧ ಪ್ರಾಧಿಕಾರಗಳ/ಸಮಿತಿಗಳ ಪುನರಾವರ್ತನೆಯಾಗುವುದೇ ಎಂದು ಸಂಶಯ ವ್ಯಕ್ತಪಡಿಸಿದರು. ಪ್ರಸ್ತಾಪಿತ ಸಮಿತಿಗಳು ಸಿಂಡಿಕೇಟ್ ಮತ್ತು ವಿಶ್ವವಿದ್ಯಾಲಯಕ್ಕೆ ಶಿಫಾರಸ್ಸುಗಳನ್ನು ನೀಡುವ ಕಾರ್ಯ ನಿರ್ವಹಿಸುತ್ತವೆ ಎಂದು ಮಾನ್ಯ ಸಿಂಡಿಕೇಟ್ ಸದಸ್ಯರಾದ ಶ್ರೀ ಕರಣ್‌ಕುಮಾರ್ ಸ್ಪಷ್ಟ ಪಡಿಸಿದರು.

**ಸಿಂಡಿಕೇಟ್ ನಿರ್ಣಯ:**

**ಸುಧೀರ್ಘ ಚರ್ಚೆಯ ನಂತರ, ಎರಡು ವರ್ಷದ ಅವಧಿಗೆ ಈ ಕೆಳಕಂಡ ಸದಸ್ಯರನ್ನೊಳಗೊಂಡಂತೆ ವಿವಿಧ ಸಮಿತಿಗಳನ್ನು (BCU Syndicate Standing Committees (SSCs)) ರಚಿಸಲು ನಿರ್ಣಯಿಸಲಾಯಿತು:**

**i. <u>SSC on Infrastructure and E-governance</u>**

1. ಶ್ರೀ ಕರಣ್‌ಕುಮಾರ್, ಸಿಂಡಿಕೇಟ್ ಸದಸ್ಯರು
2. ಶ್ರೀ. ಹೆಚ್.ಆರ್. ಸತೀಶ್, ಸಿಂಡಿಕೇಟ್ ಸದಸ್ಯರು
3. ವಿದ್ಯಾವಿಷಯಕ ಪರಿಷತ್ತಿನ ಒಬ್ಬ ಸದಸ್ಯರು
4. ವಿಶ್ವವಿದ್ಯಾಲಯದ ಒಬ್ಬ ಪ್ರಾಧ್ಯಾಪಕರು
5. ಸಮಿತಿಯ ಅಧ್ಯಕ್ಷರು ಆಹ್ವಾನಿಸುವ ಒಬ್ಬ ಬಾಹ್ಯ ತಜ್ಞರು

**Scope of work for the Committee:**

Enable the Syndicate take timely and appropriate decisions relating to –

1. Establishing end-to-end infrastructure for e-governance of University administration – IT infrastructure for administrative offices viz. Desktops/ Laptops, Internet, Wi-Fi enabled campus, e-files, e-storage of files, intra-university e-communication platform, HR data, Finance data, Physical assets data, e-Procurement of day-to-day consumables, Daily cash management, etc.
2. Mandatory e-mail communication within the departments, b/w University departments, b/w departments and the administrative wing. University e-mail ids to all teaching and non-teaching staff with Unique code linked to names/ positions.
3. Automation (Bio-metric/face recognition) for in-time, out-time, attendance, leaves, out-of-office note within the day, etc.
4. IT infrastructure for Auditorium, Board rooms, Senate Hall, Departments, etc.
5. University Website and regular to real-time updation, Two-way communication between the University and affiliated colleges, Knowledge Bank with subject-wise 'must-learn' concepts.
6. Digital library, Smart Class, Virtual Class, Web Conferencing, e-allotment of hostel accommodation, monitoring, procurement, etc.

**ii. SSC on Recruitment Monitoring Board (SSC on RMB)**

1. ಡಾ: ಹೆಚ್. ಟಿ. ಅರವಿಂದ್, ಸಿಂಡಿಕೇಟ್ ಸದಸ್ಯರು
2. ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ, ಸಿಂಡಿಕೇಟ್ ಸದಸ್ಯರು
3. ವಿದ್ಯಾವಿಷಯಕ ಪರಿಷತ್ತಿನ ಒಬ್ಬ ಸದಸ್ಯರು
4. ವಿಶ್ವವಿದ್ಯಾಲಯದ ಒಬ್ಬ ಪ್ರಾಧ್ಯಾಪಕರು
5. ಸಮಿತಿಯ ಅಧ್ಯಕ್ಷರು ಆಹ್ವಾನಿಸುವ ಒಬ್ಬ ಬಾಹ್ಯ ತಜ್ಞರು

**Scope of work for the Committee:**

a) **Non-teaching resources:**

Enable the Syndicate with timely, scientific and well processed information relating to human resource requirements at the University so as to take necessary decisions from time to time –

Identification & listing of the resource requirements for the next two years, Estimating cost of engagement, Delineating terms of their engagement, Drawing Job Descriptions, Planning advertisement to source candidates, Facilitating carrying out the recruitment process, Ensuring issuing of appointment letters, Induction & training, Handhold and Monitor performance.

b) **Teaching resources:**

Identification & listing of gaps in teaching resource requirements across the University departments, Drawing contours of Guest/ Visiting Faculty engagement for the next two years, Estimating cost of engagement, Delineate competency profile, Plan advertisement to source teaching resources, Carry

out the recruitment process, Issue appointment letters, Induction & training, Handhold and Monitor delivery.

Also propose the Syndicate on any Disciplinary Action to be initiated against Erring Staff. Again, with respect to adherence University norms, finding gaps in the recruitment of teaching & non-teaching staff of affiliated colleges and recommend the Syndicate for necessary action.

**iii. SSC on Monitoring of Affiliation, Admission and Examination (SSE on MAAE):**

1. ಶ್ರೀಮತಿ ಜ್ಯೋತಿ ವಿಜಯ್, ಸಿಂಡಿಕೇಟ್ ಸದಸ್ಯರು
2. ಡಾ. ಆರ್. ಪಾರ್ವತಿ, ಸಿಂಡಿಕೇಟ್ ಸದಸ್ಯರು
3. ವಿದ್ಯಾವಿಷಯಕ ಪರಿಷತ್ತಿನ ಒಬ್ಬ ಸದಸ್ಯರು
4. ವಿಶ್ವವಿದ್ಯಾಲಯದ ಒಬ್ಬ ಪ್ರಾಧ್ಯಾಪಕರು
5. ಸಮಿತಿಯ ಅಧ್ಯಕ್ಷರು ಆಹ್ವಾನಿಸುವ ಒಬ್ಬ ಬಾಹ್ಯ ತಜ್ಞರು

**Scope of work for the Committee:**

Enable the Syndicate in taking appropriate and timely decisions in all processes relating to-

1. Affiliation - affiliated colleges, affiliation status, courses and seats sanctioned, Faculty information of affiliated colleges, Information relating to repository of teacher competencies, automation of LIC process, Benchmarks for variety of affiliation, Course-fee-seat matrix etc.

2. Admissions - PhD & PG counselling & seat allotment, information relating to all students (UG, PG, PhD of affiliate colleges and the University), BCU roll number or ID, fee payments, etc.

3. Examination - Integration with admission data, e-communication of exam related information to colleges & students, e-hall tickets, e-vigilance of exam halls centralised at University, Continuous Assessment scores, Final evaluation scores, automation of external experts for Viva, etc. - including systems required to make them efficient, transparent and accountable.

**iv. SSC on Student Welfare Activities(SSC on SWA)**

1. ಶ್ರೀ ಹೆಚ್. ಎನ್. ಹರಿಪ್ರಸಾದ್, ಸಿಂಡಿಕೇಟ್ ಸದಸ್ಯರು
2. ಶ್ರೀ. ಹೆಚ್. ಆರ್. ಸತೀಶ್, ಸಿಂಡಿಕೇಟ್ ಸದಸ್ಯರು
3. ವಿದ್ಯಾವಿಷಯಕ ಪರಿಷತ್ತಿನ ಒಬ್ಬ ಸದಸ್ಯರು
4. ವಿಶ್ವವಿದ್ಯಾಲಯದ ಒಬ್ಬ ಪ್ರಾಧ್ಯಾಪಕರು
5. ಸಮಿತಿಯ ಅಧ್ಯಕ್ಷರು ಆಹ್ವಾನಿಸುವ ಒಬ್ಬ ಬಾಹ್ಯ ತಜ್ಞರು

**Scope of work:**

Establishing vibrant student-responsive system, endowments, scholarships, University student hostels, hostel facilities for international scholars, medical and life insurance, grievance redressal mechanism, support to slow learners, Periodic corporate interactions, internships, sports, cultural activities, student's magazine, fellowships, academic exchange programs, skill development, placement cell,

entrepreneurship development, business incubation, best practices of student support system, curriculum enrichment through value-added online courses, NSS, NCC, competition-based periodic events in all fields intra and inter-University and between University department students and affiliate college students, celebration of National festivals, annual BCU day celebs, repository of guests for events of various types, measures to maintain discipline, training for competitive exams, friendly measure for students with disabilities, Promotion of student clubs, Annual excursion, etc.

v. **SSC on Teacher Competency and Research Extension(SSC on TC & RE)**

1. ಡಾ: ಆರ್. ಕೆ. ಚಂದ್ರನಾಥ್, ಸಿಂಡಿಕೇಟ್ ಸದಸ್ಯರು
2. ಶ್ರೀ ಕೆ. ಕರಣ್‌ಕುಮಾರ್, ಸಿಂಡಿಕೇಟ್ ಸದಸ್ಯರು
3. ವಿದ್ಯಾವಿಷಯಕ ಪರಿಷತ್ತಿನ ಒಬ್ಬ ಸದಸ್ಯರು
4. ವಿಶ್ವವಿದ್ಯಾಲಯದ ಒಬ್ಬ ಪ್ರಾಧ್ಯಾಪಕರು
5. ಸಮಿತಿಯ ಅಧ್ಯಕ್ಷರು ಆಹ್ವಾನಿಸುವ ಒಬ್ಬ ಬಾಹ್ಯ ತಜ್ಞರು

**Scope of work for the Committee:**

Enabling the Syndicate on taking decisions relating to-

Designing incentives for sourcing research projects by teachers, Creating enabling environment to source research projects from domestic departments, national and international agencies, corporate companies for consulting projects, etc. Encouraging research for impact and then publication, Measures to leverage on teacher talent for research in affiliated colleges, Writing and Publishing books for student's reference (text books), Instituting Diverse Chairs, Recognition and Rewards, Teacher Clubs, Periodic events viz. Seminars/ Workshops/ Conferences, Framework and Demonstration events for Teacher competency development through extension activities, Faculty exchange programs, Developing a repository of professors of emeritus, corporate leaders and other experts to be invited periodically.

vi. **SSC on New Programms and Policy Implementation (SSC on NP & PI)**

1. ಶ್ರೀಮತಿ ಜ್ಯೋತಿ ವಿಜಯ್, ಸಿಂಡಿಕೇಟ್ ಸದಸ್ಯರು
2. ಡಾ: ಹೆಚ್. ಟಿ. ಅರವಿಂದ್, ಸಿಂಡಿಕೇಟ್ ಸದಸ್ಯರು
3. ವಿದ್ಯಾವಿಷಯಕ ಪರಿಷತ್ತಿನ ಒಬ್ಬ ಸದಸ್ಯರು
4. ವಿಶ್ವವಿದ್ಯಾಲಯದ ಒಬ್ಬ ಪ್ರಾಧ್ಯಾಪಕರು
5. ಸಮಿತಿಯ ಅಧ್ಯಕ್ಷರು ಆಹ್ವಾನಿಸುವ ಒಬ್ಬ ಬಾಹ್ಯ ತಜ್ಞರು

**Scope of work for the Committee:**

Enabling Syndicate decision-making on-

Establishing and Monitoring of new programs, departments and overseeing the implementation of NEP 2020. Reframing to align and configure with NEP, conduct need analysis, feasibility studies, institute new departments, new courses/ programs, academic restructuring, academic collaborations, corporate funded schools, Establishment of CASPER like schools within the University, etc.

ಮೇಲಿನ ಸಮಿತಿಗಳಲ್ಲಿರುವ ಇಬ್ಬರು ಸಿಂಡಿಕೇಟ್ ಸದಸ್ಯರಲ್ಲಿ ಪರಸ್ಪರ ಚರ್ಚಿಸಿ ಒಬ್ಬರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ. ಪ್ರತಿ ಸಮಿತಿಗೆ ಒಬ್ಬ ಬೋಧಕೇತರ ಸಿಬ್ಬಂದಿಯನ್ನು ಸಂಚಾಲಕರನ್ನಾಗಿ ನೇಮಿಸಬಹುದು. ಸಮಿತಿಯ ಶಿಫಾರಸ್ಸುಗಳನ್ನು ಕಾಲಕಾಲಕ್ಕೆ ವಿಶ್ವವಿದ್ಯಾನಿಲಯಕ್ಕೆ ತಲುಪಿಸುವುದು ಸಮಿತಿಯ ಅಧ್ಯಕ್ಷರ ಜವಾಬ್ದಾರಿಯಾಗಿರುತ್ತದೆ.

**ಕ್ರಮ ಸಂಖ್ಯೆ 12(7): Allotment of office cabin of dignity to Dr. Muninarayannappa, Sr. Professor, Dept. of Commerce, BCU**

ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ವಿಷಯವನ್ನು ಪ್ರಸ್ತಾಪಿಸಿ ಡಾ: ಮುನಿನಾರಾಯಣಪ್ಪ ಅವರು ತಮಗೆ ವಾಣಿಜ್ಯ ವಿಭಾಗದಲ್ಲಿ ಒಂದು ಪ್ರತ್ಯೇಕ ಕೊಠಡಿಯನ್ನು ಹಂಚಿಕೆ ಮಾಡಿಕೊಡುವಂತೆ ಕಳೆದ ಒಂದು ವರ್ಷದಿಂದ ವಿಶ್ವವಿದ್ಯಾಲಯದ ಆಡಳಿತಕ್ಕೆ ಮನವಿ ಸಲ್ಲಿಸುತ್ತಿದ್ದಾರೆ. ಇದನ್ನು ಸಿಂಡಿಕೇಟ್ ಸದಸ್ಯರ ಗಮನಕ್ಕೆ ತಂದಿರುತ್ತಾರೆ. ಆದರೆ ಇದು ಇನ್ನೂ ಬಗೆಹರಿದಿಲ್ಲ ಎಂದು ಸಭೆಯ ಗಮನಕ್ಕೆ ತಂದರು.

ಸಭಾಧ್ಯಕ್ಷರು ಉತ್ತರಿಸಿ ಈ ವಿಷಯದಲ್ಲಿ ಆಡಳಿತ ಅಗತ್ಯ ಕ್ರಮ ಕೈಗೊಂಡಿದೆ, ಆದರೂ ಸಮಸ್ಯೆ ಬಗೆಹರಿದಿಲ್ಲ ಎಂದು ತಿಳಿಸಿದರು.

ಕುಲಸಚಿವರು ಈ ವಿಷಯವನ್ನು ಬಗೆಹರಿಸಲು ತೆಗೆದುಕೊಂಡ ಕ್ರಮಗಳನ್ನು ವಿವರಿಸಿದರು. ತಾವು ವಿಭಾಗಕ್ಕೆ ಖುದ್ದು ಭೇಟಿ ನೀಡಿ ಪರಿಶೀಲಿಸಿದ್ದು, ಡಾ: ಮುನಿನಾರಾಯಣಪ್ಪನವರು ವಿನಂತಿಸಿದಂತೆ ಮುಖ್ಯ ದ್ವಾರದ ಪ್ರವೇಶದ ಬಲಭಾಗದಲ್ಲಿರುವ ಕೊಠಡಿಯನ್ನು ಹಂಚಿಕೆ ಮಾಡಿ ಆದೇಶ ಹೊರಡಿಸಲಾಯಿತು. ಆದರೆ ವಿಭಾಗದ ಅಧ್ಯಕ್ಷರು ಪತ್ರ ಬರೆದು ಮುಂಭಾಗದ ಕೊಠಡಿಯನ್ನು ಕಛೇರಿಯಾಗಿ ಹಾಗೂ ವಿಭಾಗದ ವಿವಿಧ ಸಭೆಗಳನ್ನು ನಡೆಸಲು ಉಪಯೋಗಿಸುತ್ತಿರುವುದಾಗಿ, ಅದನ್ನು ಡಾ: ಮುನಿನಾರಾಯಣಪ್ಪನವರಿಗೆ ಹಂಚಿಕೆ ಮಾಡಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ. ಡಾ: ಮುನಿನಾರಾಯಣಪ್ಪ ಅವರು ಹಾಲಿ ಒಂದು ಪ್ರತ್ಯೇಕ ಕ್ಯಾಬಿನ್‌ನಲ್ಲಿ ಕುಳಿತು ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ಆ ಕ್ಯಾಬಿನ್ ಪಕ್ಕದಲ್ಲಿಯೇ ಇನ್ನೊಬ್ಬ ಅಧ್ಯಾಪಕರು ಇರುವುದರಿಂದ ತಮಗೆ ಮತ್ತು ಸಂಶೋಧನಾ ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಗಳಿಗೆ ಅಡಚಣೆಯಾಗಿದೆ ಎಂಬುದು ಡಾ: ಮುನಿನಾರಾಯಣಪ್ಪ ಅವರ ಅಹವಾಲಾಗಿದೆ ಎಂದು ಕುಲಸಚಿವರು ತಿಳಿಸಿದರು.

ಮಾನ್ಯ ಸದಸ್ಯರಾದ ಡಾ. ಆರ್. ಪಾರ್ವತಿಯವರು ಮಾತನಾಡಿ ವಾಣಿಜ್ಯ ವಿಭಾಗದಲ್ಲಿ ಇಂತಹ ಸಮಸ್ಯೆಗಳು ಕಳೆದ 20 ವರ್ಷಗಳಿಂದ ಮುಂದುವರಿದಿವೆ. ಆದುದರಿಂದ ಇದನ್ನು ಸಿಂಡಿಕೇಟ್‌ನಲ್ಲಿ ಚರ್ಚಿಸುವುದು ಸರಿಯಲ್ಲ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಡಾ: ಆರ್. ಕೆ. ಚಂದ್ರನಾಥ್ ಅವರು ಮಾತನಾಡಿ ವಾಣಿಜ್ಯ ವಿಭಾಗಕ್ಕೆಂದು ಪ್ರಸನ್ನಕುಮಾರ್ ಬ್ಲಾಕ್‌ನಲ್ಲಿ ಹೊಸ ಕಟ್ಟಡ ನಿರ್ಮಾಣವಾಗಿದೆ. ವಿಭಾಗವನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರಿಸುವ ವ್ಯವಸ್ಥೆ ಮಾಡಿದರೆ ಈ ಸಮಸ್ಯೆ ಬಗೆಹರಿಯ ಬಹುದು ಎಂದರು.

ಕುಲಸಚಿವರು ಉತ್ತರಿಸಿ ಹೊಸ ಕಟ್ಟಡವನ್ನು ಬೆಂಗಳೂರು ವಿಶ್ವವಿದ್ಯಾಲಯ ನಿರ್ಮಿಸಿದ್ದು, ಸಂಬಂಧಪಟ್ಟ ಗುತ್ತಿಗೆದಾರರಿಗೆ ಹಣ ಪಾವತಿ ಬಾಕಿ ಇರುವುದರಿಂದ ಗುತ್ತಿಗೆದಾರರು ಕಟ್ಟಡವನ್ನು ವಿಶ್ವವಿದ್ಯಾಲಯಕ್ಕೆ ಹಸ್ತಾಂತರ ಮಾಡಿರುವುದಿಲ್ಲ ಎಂದು ತಿಳಿಸಿದರು.

ಶ್ರೀ ಕರಣ್ ಕುಮಾರ್ ಅವರು ಮಾತನಾಡಿ ತಾವು ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳೊಂದಿಗೆ ಇದರ ಬಗ್ಗೆ ಚರ್ಚಿಸಿ ಹೊಸ ಕಟ್ಟಡವನ್ನು ತ್ವರಿತವಾಗಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಹಸ್ತಾಂತರಿಸಲು ಕ್ರಮ ಕೈಗೊಳ್ಳುವಂತೆ ವಿನಂತಿಸುವುದಾಗಿ ತಿಳಿಸಿದರು.

| | |
|---|---|
| | ಸಿಂಡಿಕೇಟ್ ನಿರ್ಣಯ:<br><br>ಮೇಲಿನ ಚರ್ಚೆಯ ಹಿನ್ನೆಲೆಯಲ್ಲಿ ವಾಣಿಜ್ಯ ವಿಭಾಗವು ಹೊಸ ಕಟ್ಟಡಕ್ಕೆ ಸ್ಥಳಾಂತರವಾಗುವುದರಿಂದ ಅಲ್ಲಿಯವರೆಗೆ ಯಥಾಸ್ಥಿತಿ ಯನ್ನು ಕಾಪಾಡಿಕೊಳ್ಳುವಂತೆ ಡಾ: ಮುನಿನಾರಾಯಣಪ್ಪ ಅವರಿಗೆ ತಿಳಿಸಬೇಕೆಂದು ನಿರ್ಣಯಿಸಲಾಯಿತು. |
| ವಿಷಯ ಸಂಖ್ಯೆ 13 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಆವರಣ ಹಾಗೂ ಎಲ್ಲಾ ಕಛೇರಿ/ವಿಭಾಗಗಳಿಗೆ CCTVಗಳನ್ನು ಅಳವಡಿಸುವ ಬಗ್ಗೆ.<br><br>ಸಮಯಾಭಾವದಿಂದಾಗಿ ಮುಂದಿನ ಸಭೆಗೆ ಮುಂದೂಡಲಾಯಿತು. |
| ವಿಷಯ ಸಂಖ್ಯೆ 14 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಆವರಣ ಹಾಗೂ ಎಲ್ಲಾ ಕಛೇರಿ/ವಿಭಾಗಗಳಿಗೆ ದೂರವಾಣಿ/ಅಂತರ್‌ಜಾಲ ವ್ಯವಸ್ಥೆ ಒದಗಿಸುವ ಬಗ್ಗೆ<br><br>ಸಮಯಾಭಾವದಿಂದಾಗಿ ಮುಂದಿನ ಸಭೆಗೆ ಮುಂದೂಡಲಾಯಿತು. |
| ವಿಷಯ ಸಂಖ್ಯೆ 15 | ಕುಲಸಚಿವರ ಆಪ್ತಕಾರ್ಯಲಯದಲ್ಲಿ ಖಾಲಿ ಇರುವ ಆಪ್ತ ಕಾರ್ಯದರ್ಶಿ ಹುದ್ದೆಗೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡುವ ಬಗ್ಗೆ.<br><br>ಸಮಯಾಭಾವದಿಂದಾಗಿ ಮುಂದಿನ ಸಭೆಗೆ ಮುಂದೂಡಲಾಯಿತು. |
| ವಿಷಯ ಸಂಖ್ಯೆ 16 | ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಶ್ರೀಮತಿ ಶ್ಯಾಮಲ, ಸಹಾಯಕ ಕುಲಸಚಿವರು,ಅವರನ್ನು ವಿಶ್ವವಿದ್ಯಾಲಯದಲ್ಲಿ ಸಮಾಲೋಚಕರಾಗಿ ನೇಮಕಾತಿ ಮಾಡಿಕೊಳ್ಳುವ ಬಗ್ಗೆ.<br><br>ಸಮಯಾಭಾವದಿಂದಾಗಿ ಮುಂದಿನ ಸಭೆಗೆ ಮುಂದೂಡಲಾಯಿತು. |
| ವಿಷಯ ಸಂಖ್ಯೆ 17 | ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಸಮಾಲೋಚಕರಾಗಿ ವಿವಿಧ ವೃಂದದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಅಧಿಕಾರಿ/ನೌಕರರ ಸೇವೆಯನ್ನು ಮುಂದುವರೆಸಲು ಅನುಮೋದನೆ-ಬಗ್ಗೆ.<br><br>ಸಮಯಾಭಾವದಿಂದಾಗಿ ಮುಂದಿನ ಸಭೆಗೆ ಮುಂದೂಡಲಾಯಿತು. |
| ವಿಷಯ ಸಂಖ್ಯೆ-18 | ಬೆಂಗಳೂರು ಕೇಂದ್ರ ವಿಶ್ವವಿದ್ಯಾನಿಲಯದಲ್ಲಿ ವಕೀಲರ ತಂಡ ರಚನೆ ಹಾಗೂ ವೃತ್ತಿಪರ ಶುಲ್ಕ ನಿಗದಿಪಡಿಸುವ ಬಗ್ಗೆ.<br><br>ಕುಲಸಚಿವರು ವಿಷಯವನ್ನು ಮಂಡಿಸಿದರು. ದಿನಾಂಕ 16.06.2020ರ ಸಿಂಡಿಕೇಟ್ ನಿರ್ಣಯದಂತೆ ವಕೀಲರ ತಂಡವನ್ನು ಪರಿಷ್ಕರಿಸಿ ಶ್ರೀ ಹೆಚ್. ಎನ್. ಹರಿಪ್ರಸಾದ್, ಸಿಂಡಿಕೇಟ್ ಸದಸ್ಯರು ಸಲ್ಲಿಸಿರುವ ವರದಿಯನ್ನು, ಜೊತೆಗೆ ವಕೀಲರಿಗೆ ಪಾವತಿಸಬಹುದಾದ ವೃತ್ತಿಪರ ಶುಲ್ಕವನ್ನು ನಿಗಧಿಪಡಿಸಿರುವ ವಿವರಗಳನ್ನು ಸಿಂಡಿಕೇಟ್ ಪ್ರರಾಂಭರಿಸಿತು.<br><br>ಡಾ. ಹೆಚ್. ಟಿ ಅರವಿಂದ್ ಅವರು ಮಾತನಾಡಿ ಶ್ರೀ ರವಿವರ್ಮ ಕುಮಾರ್ ಅವರು ಹಿರಿಯ ವಕೀಲರಾಗಿರುವುದರಿಂದ ಅವರನ್ನು ವಕೀಲರ ತಂಡದಲ್ಲಿ ಸೇರಿಸುವ ಅಗತ್ಯವಿಲ್ಲ ಎಂದರು. ಹಿರಿಯ ವಕೀಲರನ್ನು ಅಗತ್ಯವಿದ್ದಲ್ಲಿ ಸಂದರ್ಭಕ್ಕಸನುಗುಣವಾಗಿ ಅವರ ಸೇವೆಯನ್ನು ಪಡೆಯ ಬಹುದೆಂದು ಅಭಿಪ್ರಾಯಪಡಲಾಯಿತು. |

| | |
|---|---|
| | ಸಿಂಡಿಕೇಟ್ ನಿರ್ಣಯ:<br><br>1. ಶ್ರೀ ಹೆಚ್. ಎನ್. ಹರಿಪ್ರಸಾದ್, ಸಿಂಡಿಕೇಟ್ ಸದಸ್ಯರು, ಸಲ್ಲಿಸಿರುವ ವರದಿಯಲ್ಲಿರುವ ವಕೀಲರ ತಂಡದಿಂದ ಹಿರಿಯ ವಕೀಲರಾದ ಶ್ರೀ ರವಿವರ್ಮ ಕುಮಾರ್ ಅವರ ಹೆಸರನ್ನು ಹೊರತುಪಡಿಸಿ, ಉಳಿದಂತೆ ವರದಿಯನ್ನು ಅನುಮೋದಿಸಲಾಯಿತು.<br><br>2. ಬೆಂಗಳೂರು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಾದ ಶ್ರೀ ಜಿ. ಕೆ. ಬೋರೇಗೌಡ ಅವರಿಂದ ಅಗತ್ಯವಿರುವಾಗ ಸಲಹೆ ಪಡೆದು, ಪ್ರತಿ ಸಲಹೆಗೆ / ಅಭಿಪ್ರಾಯಕ್ಕೆ ರೂ. 10,000/- (ರೂ. ಹತ್ತು ಸಾವಿರ) ಶುಲ್ಕ ಪಾವತಿಸಲು ಸಿಂಡಿಕೇಟ್ ಅನುಮೋದನೆ ನೀಡಿತು.<br><br>3. ವಕೀಲರ ತಂಡದಲ್ಲಿರುವ ವಕೀಲರಿಗೆ ನ್ಯಾಯಾಲಯಗಳಲ್ಲಿ ವಿವಿಧ ಪ್ರಕರಣಗಳಲ್ಲಿ ಮಂಡಿಸುವ ವಾದಕ್ಕೆ ಶ್ರೀ ಹೆಚ್. ಎನ್. ಹರಿಪ್ರಸಾದ್ ಅವರು ಶಿಫಾರಸು ಮಾಡಿರುವ ವೃತ್ತಿಪರ ಶುಲ್ಕವನ್ನು ನಿಗಧಿಪಡಿಸಲು ಸಿಂಡಿಕೇಟ್ ನಿರ್ಣಯಿಸಿತು (ಪಟ್ಟಿಯನ್ನು ಲಗತ್ತಿಸಿದೆ). |
| ವಿಷಯ ಸಂಖ್ಯೆ 19 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಆಡಳಿತ ಕಛೇರಿ/ಸ್ನಾತಕೋತ್ತರ ಅಧ್ಯಯನ ಕೇಂದ್ರಗಳಿಗೆ ಮಂಜೂರಾದ ಹುದ್ದೆಗಳಿಗಿತ ಹೆಚ್ಚುವರಿ ಸಂಖ್ಯೆಯಲ್ಲಿ ಕನಿಷ್ಠ ಬೇಕಾಗಿರುವ / ಬೋಧಕೇತರ ಹುದ್ದೆಗಳಿಗೆ ಹೊರಗುತ್ತಿಗೆಯಲ್ಲಿ ನೌಕರರ ಸೇವೆ ಪಡೆಯುವ ಬಗ್ಗೆ<br>**ಸಮಯಾಭಾವದಿಂದಾಗಿ ಮುಂದಿನ ಸಭೆಗೆ ಮುಂದೂಡಲಾಯಿತು.** |
| ವಿಷಯ ಸಂಖ್ಯೆ 20 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿ ಸಹಾಯಕರು / ಕಿರಿಯ ಸಹಾಯಕ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಮುಂಬಡ್ತಿ ನೀಡುವ ಬಗ್ಗೆ.<br>**ಸಮಯಾಭಾವದಿಂದಾಗಿ ಮುಂದಿನ ಸಭೆಗೆ ಮುಂದೂಡಲಾಯಿತು.** |
| ವಿಷಯ ಸಂಖ್ಯೆ 21 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕಟ್ಟಡಗಳ ನಿರ್ವಹಣೆ ಹಾಗೂ ಹೊಸ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವಿಶ್ವವಿದ್ಯಾಲಯಕ್ಕೆ ಪ್ರತ್ಯೇಕ ಅಭಿಯಂತರರ ವಿಭಾಗ ಸೃಜಿಸಲು ಮತ್ತು ಸಂಬಂಧಪಟ್ಟ ಹುದ್ದೆಗಳನ್ನು ಮಂಜೂರು ಮಾಡಲು ಕುರಿತು.<br><br>**ಸಮಯಾಭಾವದಿಂದಾಗಿ ಮುಂದಿನ ಸಭೆಗೆ ಮುಂದೂಡಲಾಯಿತು.** |
| ವಿಷಯ ಸಂಖ್ಯೆ 23 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿ ವಿವಿಧ ಕೇಂದ್ರ/ಸಮಿತಿಗಳನ್ನು ಯುಜಿಸಿ ನಿಯಮಾವಳಿ/ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000 ರ ಪ್ರಕರಣಗಳಡಿಯಲ್ಲಿ ಸ್ಥಾಪನೆ ಮಾಡುವ ಬಗ್ಗೆ.<br>**ಸಮಯಾಭಾವದಿಂದಾಗಿ ಮುಂದಿನ ಸಭೆಗೆ ಮುಂದೂಡಲಾಯಿತು.** |
| ವಿಷಯ ಸಂಖ್ಯೆ: 22 | **ಚರಣ್ ಬಿ.ಎಡ್. ಕಾಲೇಜಿನ ಸಂಯೋಜನೆಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 63ರಂತೆ ಹಿಂಪಡೆಯಲು ಠರಾವನ್ನು ಮಂಡಿಸುವ ಬಗ್ಗೆ.**<br><br>ಕುಲಸಚಿವರು ವಿಷಯವನ್ನು ಮಂಡಿಸಿ ಬೆಂಗಳೂರಿನ ಚರಣ್ ಬಿ.ಎಡ್ ಕಾಲೇಜಿಗೆ 2019-20 ನೇ ಸಾಲಿಗೆ ಹೊಸ ಸಂಯೋಜನೆ ನೀಡಿದ್ದು ಸದರಿ ಕಾಲೇಜು ಸಂಯೋಜನೆ ಪಡೆಯುವ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 59(13)ರಲ್ಲಿ ನಿಯಮಿತವಾಗಿರುವಂತೆ ರಾಷ್ಟ್ರೀಯ ಅಧ್ಯಾಪಕರ ಶಿಕ್ಷಣ ಪರಿಷತ್ತು (NCTE) ಪೂರ್ವಾನುಮೋದನೆ ನೀಡಿದೆಯೆಂದು ಸುಳ್ಳು ದಾಖಲೆ ಪತ್ರವನ್ನು ಸಲ್ಲಿಸಿದ್ದು, ಈ ಸುಳ್ಳು ದಾಖಲೆಯ ವಿಷಯ NCTE ದಿನಾಂಕ 17-03-2020 ರಂದು ವಿಶ್ವವಿದ್ಯಾನಿಲಯಕ್ಕೆ ಕಳುಹಿಸಿರುವ ಪತ್ರದಿಂದ ಸಾಬೀತಾಗಿದೆ. ಹಾಗೂ ಸದರಿ ಕಾಲೇಜಿನ ವಿರುದ್ಧ ದಿನಾಂಕ: 05/16- |

| | |
|---|---|
| | 06–2020 ರ ಸಿಂಡಿಕೇಟ್ ಸಭೆಯ ನಿರ್ಣಯದನುಸಾರ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕ್ಕದ್ದಮೆ ದಾಖಲಿಸಲಾಗಿದೆ. ಈ ವಿಷಯದಲ್ಲಿ ಕಾಲೇಜು ಮಾನ್ಯ ಉಚ್ಛನ್ಯಾಯಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿ (WP No 3994/2020) ನ್ಯಾಯಾಲಯ ನೀಡಿರುವ ಮಧ್ಯಂತರ ಆದೇಶದಂತೆ ಕಾಲೇಜಿನ ವಿದ್ಯಾರ್ಥಿಗಳಿಗೆ ಬಿ.ಎಡ್ ಪ್ರಥಮ ಸೆಮಿಸ್ಟರ್ ಪರೀಕ್ಷೆಗೆ ಬರೆಯಲು ಅನುಮತಿ ನೀಡಲಾಗಿದ್ದು, ನಂತರದ ಇನ್ನೊಂದು ಆದೇಶದಲ್ಲಿ ಫಲಿತಾಂಶಗಳನ್ನು ಪ್ರಕಟಿಸಲು ನ್ಯಾಯಾಲಯ ಆದೇಶ ನೀಡಿದೆ ಎಂದು ತಿಳಿಸಿದರು. ಹಾಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮ, 2000ದ ಪ್ರಕರಣ 63ರಲ್ಲಿ ನಿಯಮಿತ ವಾಗಿರುವಂತೆ ಚರಣ್ ಬಿ.ಎಡ್. ಕಾಲೇಜು ಶಿಕ್ಷಣದ ಹಿತಾಸಕ್ತಿಗೆ ಪ್ರತಿಕೂಲವಾಗುವ ರೀತಿಯಲ್ಲಿ ನಡೆದುಕೊಂಡಿರುವುದರಿಂದ ಸಂಯೋಜನೆಯನ್ನು ಹಿಂತೆಗೆದುಕೊಳ್ಳುವುದಕ್ಕೆ ಪ್ರಕರಣ 63(2) ರಡಿ ಸೂಚನೆಯನ್ನು ಕಾರಣಗಳ ಸಮೇತ ಲಿಖಿತದಲ್ಲಿ ನಿರೂಪಿಸಿ ನೋಟೀಸನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸುತ್ತಿರುವುದಾಗಿ ತಿಳಿಸಿದರು.<br><br>**ಸಿಂಡಿಕೇಟ್ ನಿರ್ಣಯ:**<br><br>ಕುಲಸಚಿವರು ಮಂಡಿಸಿದ ಸೂಚನೆಯ ಬಗ್ಗೆ ಮಾನ್ಯ ಸದಸ್ಯರುಗಳಾದ ಡಾ॥ ಇ. ಬಿ. ರಾಜೇಶ್, ಶ್ರೀ ಹೆಚ್. ಎನ್. ಹರಿಪ್ರಸಾದ್, ಡಾ॥ ಹೆಚ್. ಟಿ. ಅರವಿಂದ್ ಮುಂತಾದವರು ಮಾತನಾಡಿ ಸೂಚನೆಯನ್ನು ಸ್ವಾಗತಿಸಿದರು. ವಿಷಯದ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ ಪ್ರಕರಣ 63(3) ರನುಸಾರ ನೋಟೀಸಿನ ಒಂದು ಪ್ರತಿಯನ್ನು ಲಿಖಿತದಲ್ಲಿನ ನಿರೂಪಣೆಯಲ್ಲಿ ಕಾಲೇಜಿಗೆ ಕಳುಹಿಸಿ 21 ದಿನದೊಳಗಾಗಿ ವಿವರಣೆ ಸಲ್ಲಿಸಬೇಕೆಂದು ಕಾಲೇಜಿಗೆ ಸೂಚಿಸಲು ಸರ್ವಾನುಮತದಿಂದ ಸಿಂಡಿಕೇಟ್ ನಿರ್ಣಯಿಸಿತು.<br><br>**ಮುಂದುವರೆದು, ಸದರಿ ಕಾಲೇಜು 2020–21ನೇ ಸಂಯೋಜನೆ ಮುಂದುವರಿಕೆಗೆ ಅರ್ಜಿ ಸಲ್ಲಿಸಿದ್ದ ಪಕ್ಷದಲ್ಲಿ ಅದನ್ನು ಪರಿಗಣೆಸದಿರಲು ಸಿಂಡಿಕೇಟ್ ನಿರ್ಣಯಿಸಿತು.**<br><br>**ಮೇಲಿನ ನಿರ್ಣಯವನ್ನು ಓದಿ ಹೇಳಿದ ನಂತರ, ಸಭೆ ನಿರ್ಣಯವನ್ನು ದೃಢಪಡಿಸಿತು.** |

ಮುಂದೂಡಲಾದ ವಿಷಯಗಳನ್ನು ಪರಿಗಣಿಸಲು ಸಭೆಯನ್ನು ಮುಂದೂಡಿ ದಿನಾಂಕ 11.09.2020ರ ಶುಕ್ರವಾರದಂದು ಬೆಳಗ್ಗೆ 10.30 ಗಂಟೆಗೆ ಆಯೋಜಿಸಲು ಸಭೆ ನಿರ್ಣಯಿಸಿತು.

ಕುಲಸಚಿವರು ಸಭಾಧ್ಯಕ್ಷರಿಗೆ ಮತ್ತು ಎಲ್ಲಾ ಸದಸ್ಯರಿಗೆ ವಂದನೆಗಳನ್ನು ಅರ್ಪಿಸುವುದರೊಂದಿಗೆ ನಂತರ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

**ದಿನಾಂಕ 11.09.2020 ರಂದು ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಎಸ್. ಜಾಫೆಟ್ | ಸಭಾಧ್ಯಕ್ಷರು |
| 2. | ಶ್ರೀಮತಿ ಎಂ.ಎ. ನೀಲಾವತಿ<br>ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ – ಆಯುಕ್ತರ ಪರವಾಗಿ. | ಸದಸ್ಯರು |
| 3. | ಡಾ: ಎಂ. ಪಾಂಡುರಂಗಪ್ಪ | ಸದಸ್ಯರು |
| 4. | ಡಾ: ಹೆಚ್. ಟಿ. ಅರವಿಂದ್ | ಸದಸ್ಯರು |
| 5. | ಶ್ರೀ ಹೆಚ್. ಆರ್. ಸತೀಶ್ | ಸದಸ್ಯರು |

| | | |
|---|---|---|
| 6. | ಡಾ: ಬಿ.ಎ. ಅನುರಾಧಾ | ಸದಸ್ಯರು |
| 7. | ಡಾ: ಆರ್. ಪಾರ್ವತಿ | ಸದಸ್ಯರು |
| 8. | ಡಾ: ಇ. ಬಿ. ರಾಜೇಶ್ | ಸದಸ್ಯರು |
| 9. | ಶ್ರೀ ಡಿ. ಜಿ. ಶ್ರೀನಿವಾಸಮೂರ್ತಿ | ಸದಸ್ಯರು |
| 10. | ಶ್ರೀ ಕರಣ್‌ಕುಮಾರ್ | ಸದಸ್ಯರು |
| 11. | ಶ್ರೀ ಹೆಚ್. ಎನ್. ಹರಿಪ್ರಸಾದ್ | ಸದಸ್ಯರು |
| 12. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 13. | ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 14. | ಡಾ: ಆರ್.ಕೆ. ಚಂದ್ರನಾಥ್ | ಸದಸ್ಯರು |
| 15. | ಡಾ: ವಿ. ಆರ್. ದೇವರಾಜ್ | ಸದಸ್ಯರು |
| 16. | ಪ್ರೊ: ಬಿ. ರಮೇಶ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 17. | ಶ್ರೀ ಪಿ. ಕುಮಾರ್,<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಮೊದಲಿಗೆ, ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು ಸ್ವಾಗತಿಸಿ, ಸಭಾಧ್ಯಕ್ಷರಾದ ಪ್ರೊ: ಎಸ್. ಜಾಫೆಟ್, ಕುಲಪತಿಗಳಿಗೂ ಸಹ ಸ್ವಾಗತ ಕೋರಿ ಸಭೆಯನ್ನು ನಡೆಸಿಕೊಡಲು ಕೋರಿದರು.

ಸಭೆಯ ಪ್ರಾರಂಭದಲ್ಲಿ ಆಧಾರ್ ಸಂಖ್ಯೆ ಆಧಾರಿತ ಡಿಜಿಟಲ್ (e-Sign) ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಆನ್‌ಲೈನ್ ಮೂಲಕ ಮೆ. ಕಿಯೋನಿಕ್ಸ್ ಸಂಸ್ಥೆಯವರ e-Documents Generation System (EDGS) ತಂತ್ರಾಂಶವನ್ನು ಬಳಸಿಕೊಂಡು Online /digital format ನಲ್ಲಿ ತಯಾರಿಸಿ ವಿತರಿಸುವ ಕುರಿತು ಕಿಯೋನಿಕ್ಸ್ ಸಂಸ್ಥೆಯ ಪ್ರತಿನಿಧಿ ಪ್ರಾತ್ಯಕ್ಷಿತೆಯನ್ನು ನೀಡಿದರು. ವಿವರಗಳನ್ನು ವಿಷಯ ಸಂಖ್ಯೆ-7 ರಲ್ಲಿ ನೀಡಲಾಗಿದೆ.

ಅ) ಉಳಿದ ಕಾರ್ಯ ಸೂಚಿಯನ್ನು ಚರ್ಚೆಗೆ ತೆಗೆದುಕೊಳ್ಳುವ ಪೂರ್ವದಲ್ಲಿ, ಸನ್ಮಾನ್ಯ ಸದಸ್ಯರಾದ ಡಾ: ಆರ್. ಪಾರ್ವತಿಯವರು ತಾವು ದಿನಾಂಕ 01-09-2020 ರಂದು ವಾಣಿಜ್ಯ ವಿಭಾಗಕ್ಕೆ ಬಿ.ಓ.ಇ. ಅಧ್ಯಕ್ಷರಾದ ಡಾ: ಜಲಜಾರವರು ಕರೆದ ಸಭೆಗೆ ಹಾಜರಾಗಲು ಹೋದಾಗ, ಅಲ್ಲಿ ವಿಭಾಗದ ಪ್ರಾಧ್ಯಾಪಕರಾದ ಡಾ. ಎಂ. ಮುನಿನಾರಾಯಣಪ್ಪ ನವರು ದಿನಾಂಕ 29.08.2020ರಂದು ಜರುಗಿದ ಸಿಡಿಕೇಟ್ ಸಭೆಯಲ್ಲಿ ಅವರಿಗೆ ಒಂದು ಕೊಠಡಿಯನ್ನು ನೀಡುವ ಕುರಿತು ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ಮಂಡಿಸಿದ ಗೊತ್ತುವಳಿಗೆ ಸಂಬಂಧಿಸಿದಂತೆ ವಿಷಯವನ್ನು ಪ್ರಸ್ತಾಪಿಸಿ, ತಮ್ಮೊಂದಿಗೆ ಅಸಭ್ಯವಾಗಿ ವರ್ತಿಸಿ, ಅಸಂವಿಧಾನಿಕ ಹಾಗೂ ಏಕವಚನ ಪ್ರಯೋಗ ಮಾಡಿರುವ ಘಟನೆಯನ್ನು ವಿವರಿಸಿದರು. ಮೇಲಿನ ಗೊತ್ತುವಳಿ ಕುರಿತಂತೆ ಸಿಂಡಿಕೇಟ್ ಸಭೆ "ತಿಪ್ಪೆ ಸಾರಿಸುವ ಕೆಲಸ ಮಾಡಿದೆ" ಎಂದು ಹೇಳಿ ಆ ಕುರಿತು ತಮ್ಮೊಂದಿಗೆ ಅವಮಾನಕರವಾಗಿ ಮಾತನಾಡಿದ್ದಾರೆ ಎಂದು ಹೇಳಿದರು.

ಇದಲ್ಲದೆ, ದಿನಾಂಕ 05-09-2020 ರಂದು ಎಂ.ಕಾಂ. ವಿದ್ಯಾರ್ಥಿಗಳ ಪ್ರಾಜೆಕ್ಟ್ ರಿಪೋರ್ಟಗಳನ್ನು ಸಲ್ಲಿಸಲು ಕೊನೆಯ ದಿನಾಂಕವಾಗಿದ್ದು, ತಮ್ಮ ಮಹಾವಿದ್ಯಾಲಯದ ಹಿರಿಯ ಪ್ರಾಧ್ಯಾಪಕರು, ಒಬ್ಬ ಸಿಬ್ಬಂದಿಯ ಜೊತೆಗೆ ಪ್ರಾಜೆಕ್ಟ್ ರಿಪೋರ್ಟಗಳನ್ನು ಸಲ್ಲಿಸಲು ಹೋದಾಗ, ಡಾ. ಮುನಿನಾರಾಯಣಪ್ಪನವರು, ತಮ್ಮ ಸಂಶೋಧನಾ ವಿದ್ಯಾರ್ಥಿಗಳು ಬಂದಿಲ್ಲವೆಂಬ ಕಾರಣ ಹೇಳಿ ಪ್ರಾಜೆಕ್ಟ್ ರಿಪೋರ್ಟಗಳನ್ನು ತೆಗೆದುಕೊಳ್ಳಲು ನಿರಾಕರಿಸಿದ್ದಾರೆ. ನಂತರ ಕುಲಸಚಿವರು (ಮೌಲ್ಯಮಾಪನ) ರವರನ್ನು ದೂರವಾಣಿಯ ಮುಖಾಂತರ ಸಂಪರ್ಕಿಸಿ ವಿಷಯ ತಿಳಿಸಿದಾಗ ಅವರು ಸ್ವೀಕರಿಸಿದ್ದಾರೆ. ಇದು ಅವರ ಸೇಡಿನ ಮನೋಭಾವವನ್ನು ತೋರಿಸುತ್ತದೆ. ದಿನಾಂಕ 01-09-2020 ರಂದು ತಾವು ವಾಣಿಜ್ಯ ವಿಭಾಗಕ್ಕೆ ಅಧಿಕೃತ ಸಭೆಗೆ ಹಾಜರಾಗಲು ಹೋದಾಗ, ಡಾ.ಮುನಿನಾರಾಯಣಪ್ಪನವರು ತಮ್ಮೊಂದಿಗೆ ಲಘುವಾಗಿ ಮಾತನಾಡಿದ್ದು, ಅವರ ವರ್ತನೆಯಿಂದ ತಮಗೆ ತುಂಬಾ ನೋವಾಗಿದೆ ಎಂದು ಹೇಳಿದರು. ಸಿಂಡಿಕೇಟ್ ಸಭೆ 29.08.2020 ರ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದ ಕುರಿತು ಡಾ.ಮುನಿನಾರಾಯಣಪ್ಪನವರು ಅವಹೇಳನಕಾರಿಯಾಗಿ ಮಾತನಾಡಿರುವುದನ್ನು ಗಂಭೀರವಾಗಿ ಪರಿಗಣಿಸಿ, ಸದರಿ ಪ್ರಾಧ್ಯಾಪಕರ ಆಕ್ಷೇಪಾರ್ಹ ಹಾಗೂ ಬೇಜವಾಬ್ದಾರಿ ನಡವಳಿಕೆ ಕುರಿತಂತೆ ಈ ಸಭೆ ತುಂಬಾ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ಚರ್ಚೆಯಲ್ಲಿ ಭಾಗವಹಿಸಿ, ಡಾ. ಪಾರ್ವತಿ ಯವರೊಂದಿಗೆ ಡಾ. ಮುನಿನಾರಾಯಣಪ್ಪನವರು ನಡೆದುಕೊಂಡ ರೀತಿ ಹಾಗೂ ಆಡಿದ ಮಾತುಗಳು ಖಂಡನಾರ್ಹವೆಂದು ಹೇಳಿದರು. ವಾಣಿಜ್ಯ ವಿಭಾಗದ ಪ್ರಸ್ತುತ ಮುಖ್ಯಸ್ಥರು ಹಾಗೂ ಡೀನರಾಗಿರುವ ಡಾ. ಮುನಿರಾಜುರವರು ಎಲ್ಲಾ ವಾಣಿಜ್ಯ ಮಹಾವಿದ್ಯಾಲಯಗಳಿಗೆ ಸುತ್ತೋಲೆ ಹೊರಡಿಸಿ ಪ್ರತಿ ವಿದ್ಯಾರ್ಥಿಯಿಂದ ರೂ.100/- ಗಳನ್ನು ವಸೂಲು ಮಾಡುವ ಕುರಿತು ವಿಶ್ವವಿದ್ಯಾಲಯದ ಗಮನಕ್ಕೆ ತಂದಿರುವುದಾಗಿ ತಿಳಿಸಿದರು. ಎಂ.ಎಂ.ಎಸ್.ಕೋರ್ಸಿನ ಒಂದು ಮಹಾವಿದ್ಯಾಲಯದ ಫಲಿತಾಂಶ ಪ್ರಕಟಿಸುವುದನ್ನು ಉದ್ದೇಶಪೂರ್ವಕವಾಗಿ ವಿಳಂಬಮಾಡಿ ತೊದರೆ ನೀಡಿದ್ದು, ಹಣಕಾಸಿನ ಪ್ರತಿಫಲ ಅಪೇಕ್ಷೆ ಇತ್ಯಾದಿ ವಿಷಯಗಳ ಕುರಿತು ಪ್ರಸ್ತಾಪಿಸುವುದರ ಜೊತೆಗೆ ಹಿಂದೆ ಈ ವಿಶ್ವವಿದ್ಯಾಲಯದ ಕುಲಸಚಿವರಾಗಿ ಕೆಲಸ ನಿರ್ವಹಿಸಿದ ಇದೇ ವಿಭಾಗದ ಪ್ರಾಧ್ಯಾಪಕರು, ತಾವು ಹಿಂದೆ ಒಂದು ಮಹಾವಿದ್ಯಾಲಯದ ಪ್ರತಿನಿಧಿಯಾಗಿ ಕೆಲವು ಸಮಸ್ಯೆಗಳ ಕುರಿತು ಅವರನ್ನು ಭೇಟಿಯಾದಾಗ ಅವರೂ ಸಹ ಏಕವಚನದಲ್ಲಿ ಸಂಭೋದಿಸಿರುವ ಘಟನೆ ಹಾಗೂ ಅವರು ವರ್ತಿಸಿದ ರೀತಿಯನ್ನು ವಿವರಿಸಿ, ಈ ವಿಭಾಗದ ಎಲ್ಲಾ ಪ್ರಾಧ್ಯಾಪಕರು ತಮ್ಮ ಹುದ್ದೆಯ ಗೌರವ ಹಾಗೂ ವೈಯುಕ್ತಿಕ ಸಂಸ್ಕಾರ ಮರೆತಂತೆ ಕಾಣುತ್ತದೆ. ಈ ರೀತಿಯ ನಡವಳಿಕೆಯನ್ನು ನಿಯಂತ್ರಿಸುವ ಹಾಗೂ ಇದಕ್ಕೆ ಒಂದು ತಾರ್ಕಿಕ ಅಂತ್ಯ ಹೇಳುವ ಅಗತ್ಯವಿದೆ ಎಂದು ಹೇಳಿದರು.

ಮಾನ್ಯ ಸದಸ್ಯರಾದ ಡಾ.ಆರ್ ಕೆ. ಚಂದ್ರನಾಥ ರವರು, ವಾಣಿಜ್ಯ ವಿಭಾಗವನ್ನು 2000ನೇ ವರ್ಷದಿಂದ ಗಮನಿಸುತ್ತಿದ್ದೇನೆ, ಇತ್ತೀಚಿನ ದಿನಗಳಲ್ಲಿ ಈ ವಿಭಾಗದ ಪ್ರಾಧ್ಯಾಪಕರಲ್ಲಿ ಯೋಗ್ಯತೆ, ಸಂಸ್ಕಾರ, ಪರಸ್ಪರ ವಿಶ್ವಾಸಗಳ ಕೊರತೆ ಇರುವಂತೆ ಕಾಣುತ್ತದೆ. ಸಿಂಡಿಕೇಟ್ ಸದಸ್ಯರು ಹಾಗೂ ಕಾಲೇಜಿನ ಪ್ರಿನ್ಸಿಪಾಲರೊಂದಿಗೆ ಇವರು ಈ ರೀತಿ ವರ್ತಿಸಿದರೆ, ಇನ್ನು ಆ ವಿಭಾಗದ ವಿದ್ಯಾರ್ಥಿಗಳೊಂದಿಗೆ ಅವರು ಹೇಗೆ ವರ್ತಿಸುತ್ತಾರೆ ಎಂಬುದನ್ನು ಯಾರಾದರೂ ಊಹಿಸಬಹುದಾಗಿದೆ ಎಂದು ಹೇಳಿದರು. ಹೆಣ್ಣು ಮಕ್ಕಳನ್ನು ಗೌರವಿಸುವುದು ನಮ್ಮ ಸಂಸ್ಕಾರ, ಈ ಸಂಸ್ಕಾರ ಇಲ್ಲದಿರುವ ಪ್ರಾಧ್ಯಾಪಕರು, ಪ್ರಾಧ್ಯಾಪಕರೆಂದು ಕರೆಸಿಕೊಳ್ಳುವ ಯೋಗ್ಯತೆ ಹಾಗೂ ಅರ್ಹತೆ ಕಳೆದುಕೊಳ್ಳುತ್ತಾರೆ ಎಂದು

ಹೇಳಿ, ಇದನ್ನು ವಿಶ್ವವಿದ್ಯಾಲಯ ಬಹಳ ಗಂಭೀರವಾಗಿ ಪರಿಗಣಿಸಬೇಕು. ಈ ಪ್ರಾಧ್ಯಾಪಕರ ವರ್ತನೆಯನ್ನು ಖಂಡಿಸುವುದರೊಂದಿಗೆ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು, ಇಲ್ಲವಾದಲ್ಲಿ ತಾವು ಪ್ರಕರಣ ದಾಖಲು ಮಾಡುವ ಕುರಿತು ಪರಿಶೀಲಿಸುವುದಾಗಿ ಹೇಳಿದರು. ವಿಶ್ವವಿದ್ಯಾಲಯದ ಘನತೆ ಹಾಗೂ ಗೌರವಕ್ಕೆ ಚ್ಯುತಿ ಬರುವಂತೆ ವರ್ತಿಸುವ ಪ್ರಾಧ್ಯಾಪಕರನ್ನು ಸಹಿಸುವ ಅಗತ್ಯವಿಲ್ಲವೆಂದು ಹೇಳಿದರು.

ಮಾನ್ಯ ಸದಸ್ಯರಾದ ಶ್ರೀ ಹೆಚ್. ಆರ್. ಸತೀಶರವರು ಈ ಘಟನೆ ಕುರಿತು ತಮ್ಮ ಅಸಮಾಧಾನ ವ್ಯಕ್ತಪಡಿಸಿ, ವಾಣಿಜ್ಯ ವಿಭಾಗ ವಿಶ್ವವಿದ್ಯಾಲಯದಲ್ಲಿಯೇ ಅತ್ಯಂತ ಹೆಚ್ಚಿನ ವಿದ್ಯಾರ್ಥಿಗಳನ್ನು ಹೊಂದಿರುವ ದೊಡ್ಡ ವಿಭಾಗವಾಗಿದ್ದು, ಇಂತಹ ವಿಭಾಗದ ಪ್ರಾಧ್ಯಾಪಕರು, ಒಬ್ಬ ಸಿಂಡಿಕೇಟ್ ಸದಸ್ಯರೊಂದಿಗೆ ಈ ರೀತಿ ನಡೆದುಕೊಂಡರೆ ಇನ್ನು ವಿದ್ಯಾರ್ಥಿಗಳೊಂದಿಗೆ ಅವರು ಹೇಗೆ ನಡೆದುಕೊಳ್ಳುತ್ತಾರೆ, ಆ ವಿದ್ಯಾರ್ಥಿಗಳ ಪಾಡು ಹೇಗಿರಬಹುದು ಎಂಬುದನ್ನು ಊಹಿಸಿಕೊಂಡರೆ ಬೇಜಾರಾಗುತ್ತದೆ. ಈ ಘಟನೆಯನ್ನು ಅತ್ಯಂತ ಖಂಡನೀಯ ಹಾಗೂ ಕಠೋರ ಶಬ್ದಗಳಲ್ಲಿ ನಿಂದಿಸಬೇಕಾಗುತ್ತದೆ ಎಂದು ಹೇಳಿದರು.

ಮಾನ್ಯ ಸದಸ್ಯರಾದ ಡಾ. ಇ.ಬಿ. ರಾಜೇಶ್ ರವರು, ಸಿಂಡಿಕೇಟ್ ಸಭೆಗೆ, ಅದರ ಸದಸ್ಯರಿಗೆ ಹಾಗೂ ಆಸಭೆಯ ನಿರ್ಧಾರಗಳಿಗೆ ಎಲ್ಲರೂ ಗೌರವ ಕೊಡಬೇಕು. ಹಿಂದೆ ಆ ರೀತಿಯ ಸಂಪ್ರದಾಯ, ಸಂಸ್ಕಾರ ಇತ್ತು. ಡಾ. ಮುನಿನಾರಾಯಣಪ್ಪನವರ ವರ್ತನೆ ಇಡೀ ಸಿಂಡಿಕೇಟ್ ಸಭೆಗೆ ತೋರಿದ ಅಗೌರವವಾಗಿದೆ. ಈ ವಿಷಯದಲ್ಲಿ ತೆಗೆದುಕೊಳ್ಳುವ ನಿರ್ಧಾರ, ಈ ರೀತಿಯ ಮನೋಭಾವದ ಎಲ್ಲರಿಗೂ ಒಂದು ಸಂದೇಶ ಹೋಗುವಂತಿರಬೇಕು ಮತ್ತು ಅಂಥಹ ವ್ಯಕಿಗಳು ತಮ್ಮ ಮನೋಭಾವವನ್ನು ಸರಿಪಡಿಸಿಕೊಳ್ಳುವ ಎಚ್ಚರಿಕೆಯಂತಿರಬೇಕು ಎಂದು ಹೇಳಿದರು.

ಮಾನ್ಯ ಸದಸ್ಯರಾದ ಡಾ. ಹೆಚ್.ಟಿ. ಅರವಿಂದ ರವರು, ವಾಣಿಜ್ಯ ವಿಭಾಗದ ಅಧ್ಯಕ್ಷರೊಂದಿಗೆ ತಮಗಾದ ಕಹಿ ಅನುಭವಗಳನ್ನು ಹಂಚಿಕೊಂಡರು. ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ತೆಗೆದುಕೊಂಡು ವಿಭಾಗದ ಅಧ್ಯಕ್ಷರಲ್ಲಿ ಹೋದಾಗ ಅವರು ವರ್ತಿಸಿದ ರೀತಿ, ತೋರಿಸಿದ ದರ್ಪ ಹಾಗೂ ತಮ್ಮೊಂದಿಗಿನ ಅವರ ವರ್ತನೆಯನ್ನು ಸಭೆಗೆ ವಿವರಿಸಿ, ಇಂತಹ ಧೋರಣೆಗೆ ಕಡಿವಾಣ ಹಾಕಬೇಕಾಗಿದೆ ಎಂದು ಹೇಳಿದರು. ಖಂಡಿತವಾಗಿ ವಿಭಾಗದ ಪ್ರಾಧ್ಯಾಪಕರು ಸಿಂಡಿಕೇಟ್ ಸದಸ್ಯರೊಂದಿಗೆ ವರ್ತಿಸಿದ ರೀತಿ ಅಕ್ಷಮ್ಯವಾಗಿದೆ, ಇದನ್ನು ಗಂಭೀರವಾಗಿ ಪರಿಗಣಿಸಿ ಸಭೆ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಹೇಳಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಘಟನೆ ಕುರಿತು ಸದಸ್ಯರ ಭಾವನೆ ಹಾಗೂ ವಿಚಾರಗಳಿಗೆ ತಮ್ಮ ಸಹಮತಿ ವ್ಯಕ್ತಪಡಿಸಿ, ಡಾ. ಪಾರ್ವತಿಯವರು ಕಳುಹಿಸಿದ ಮೇಲ್ ನೋಡಿದ್ದು, ಇಂತಹ ಪ್ರಕರಣಗಳಲ್ಲಿ ಸಂಬಂಧಿಸಿದವರ ಮೇಲೆ ಕ್ರಮಕೈಗೊಳ್ಳಬೇಕಾದರೆ, ಒಂದು ಗೊತ್ತುವಳಿಯನ್ನು ಸದಸ್ಯರು ಮಂಡಿಸಬೇಕಾಗುತ್ತದೆ. ಆ ಗೊತ್ತುವಳಿಯ ಮೇಲೆ ಚರ್ಚೆಯಾಗಬೇಕು ನಂತರ ತೀರ್ಮಾನ ತೆಗೆದುಕೊಳ್ಳಬೇಕು. ಕಾರಣ ಡಾ.ಪಾರ್ವತಿಯವರು ತಮ್ಮ ಮೇಲ್ ನಲ್ಲಿರುವ ಅಂಶಗಳನ್ನು ಕುರಿತು ಗೊತ್ತುವಳಿ ಮಂಡಿಸಲು ತಿಳಿಸಿದರು. ಅದರಂತೆ ಡಾ. ಆರ್. ಪಾರ್ವತಿಯವರು ನೀಡಿದ ಗೊತ್ತುವಳಿಯನ್ನು ಅಧ್ಯಕ್ಷರ ಅನುಮತಿಯನ್ನು ಪಡೆದು ಕುಲಸಚಿವರು ಸಭೆಗೆ ಓದಿ ಹೇಳಿದರು.

**Resolution moved by Dr.R. Parvathi – Syndicate Member, Bengaluru City University:**

**"I have been insulted by Dr. Muninarayanappa, Professor of Department of Commerce using singular and unparlimentary words during my visit to University as a BoE Member and used unparlimentary words that 'Neenu Thippe Sarosa Kelasa madithiya in Syndicate meeting. He did not accept the M.Com project stating neither he has Office staff to collect the project report nor research scholars.'**

**This is a total disrespect to woman and Syndicate Member and I condemn such behavior of the Professor.**

**I request the Chair to take suitable action against such Professor at BCU."**

ಮಾನ್ಯ ಸದಸ್ಯರಾದ ಡಾ. ವಿ.ಆರ್. ದೇವರಾಜ್ ರವರು ಚರ್ಚೆಯಲ್ಲಿ ಭಾಗವಹಿಸಿ, ತಾವು ವಿಶ್ವವಿದ್ಯಾಲಯದ ಪ್ರಾಧ್ಯಾಪಕರನ್ನು ಪ್ರತಿನಿಧಿಸುತ್ತಿದ್ದು, ವಿಶ್ವವಿದ್ಯಾಲಯದ ಶಿಕ್ಷಕರು ವೈಯಕ್ತಿಕವಾಗಿ ಅನುಕರಣೀಯ ಸಂಸ್ಕಾರ ಹೊಂದಿರಬೇಕು ಎಂದು ಹೇಳಿದರು. ಡಾ. ಪಾರ್ವತಿಯವರಿಗೆ ಆಗಿರುವ ಅವಮಾನವನ್ನು ತಾವೂ ಸಹ ಖಂಡಿಸುವುದಾಗಿ ತಿಳಿಸಿದರು. ಇದಕ್ಕೆ ಜವಾಬ್ದಾರರಾದ ಪ್ರಾಧ್ಯಾಪಕರಿಗೆ ಎಚ್ಚರಿಕೆ ನೀಡಬೇಕು. ಅವರಿಗೆ ನೋಟೀಸು ನೀಡಿ ಅವರಿಂದ ಹೇಳಿಕೆ ಪಡೆಯಬೇಕು ಎಂದು ತಿಳಿಸಿದರು. ವಾಣಿಜ್ಯ ವಿಭಾಗ ಕುರಿತು ಸುಮಾರು ದಿವಸಗಳಿಂದ ಈ ರೀತಿಯ ಅಹಿತಕರ ದೂರುಗಳನ್ನು ಕೇಳುತ್ತಿದ್ದೇವೆ, ಮಹಾವಿದ್ಯಾಲಯಗಳ ವ್ಯವಸ್ಥಾಪಕರು ಒಡ್ಡುವ ಪ್ರಲೋಭನೆಗಳು, ಈ ರೀತಿಯ ಮನ:ಸ್ಥಿತಿಗೆ ಕಾರಣವಾಗುತ್ತವೆ. ಇವುಗಳನ್ನು ನಿಯಂತ್ರಿಸಲು ವಿಶ್ವವಿದ್ಯಾನಿಲಯ ಅಗತ್ಯಕ್ರಮ ಕೈಗೊಳ್ಳಬೇಕಾಗುತ್ತದೆ. ಪ್ರಥಮ ಹಂತದಲ್ಲಿ ಪ್ರಾಜೆಕ್ಟ್ ರಿಪೋರ್ಟಗಳ ಸ್ವೀಕಾರ ಹಾಗೂ ಮೌಲ್ಯಮಾಪನದ ಕೆಲಸವನ್ನು ಕುಲಸಚಿವರು (ಮೌಲ್ಯಮಾಪನ) ರವರ ಕಛೇರಿಯಿಂದಲೇ ಆಗಬೇಕು. ಕುಲಸಚಿವರು (ಮೌಲ್ಯಮಾಪನ) ರವರು ಬಿ.ಓ.ಇ. ರಚಿಸಿ ಮೌಲ್ಯಮಾಪನ ಕೆಲಸ ಮಾಡಿಸಬೇಕು. ಸ್ನಾತಕೋತ್ತರ ಪರೀಕ್ಷಕರ ಪಟ್ಟಿಯಲ್ಲಿ ಮಹಾವಿದ್ಯಾಲಯಗಳಲ್ಲಿ ಪಾಠ ಮಾಡುತ್ತಿರುವ ಅರ್ಹ ಪ್ರಾಧ್ಯಾಪಕರನ್ನು ಸೇರಿಸಬೇಕು. ಹಾಗೆ ಮಾಡಿದಲ್ಲಿ ಬೇರೆ ವಿಶ್ವವಿದ್ಯಾಲಯಗಳಿಂದ ಪ್ರಾಧ್ಯಾಪಕರನ್ನು ಕರೆಸುವುದು ಕಡಿಮೆ ಮಾಡಬಹುದು ಎಂದರು. ಮಾನ್ಯ ಸದಸ್ಯರಾದ ಡಾ. ಎಂ. ಪಾಂಡುರಂಗಪ್ಪನವರು ಸಹ ಡಾ. ವಿ. ಆರ್. ದೇವರಾಜ್ ರವರ ಸಲಹೆಗೆ ಸಹಮತ ವ್ಯಕ್ತಪಡಿಸಿದರು.

ಮಾನ್ಯ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯನವರು ಪರೀಕ್ಷಾ ಕೈಪಿಡಿಯಲ್ಲಿ ಪ್ರಾಜೆಕ್ಟ್ ಮೌಲ್ಯಮಾಪನ ಮಾಡುವ ಕುರಿತು ಇರುವ ಅಂಶಗಳನ್ನು ಗಮನಿಸಿ ಕ್ರಮಕೈಗೊಳ್ಳಬೇಕೆಂದು ಹೇಳಿದರು.

ಮಾನ್ಯ ಸದಸ್ಯರಾದ ಡಾ. ದೇವರಾಜ್ ಮತ್ತು ಶ್ರೀಮತಿ ಜ್ಯೋತಿ ವಿಜಯ ರವರು ಈಗಿರುವ ಪ್ರಾಜೆಕ್ಟ್ ರಿಪೋರ್ಟ ಅಂಕಗಳಲ್ಲಿ 100 ಅಂಕಗಳನ್ನು ಪ್ರಾಜೆಕ್ಟ್ ರಿಪೋರ್ಟ ಮೌಲ್ಯಮಾಪನಕ್ಕೆ ಹಾಗೂ 50 ಅಂಕಗಳನ್ನು ಮೌಖಿಕ ಪರೀಕ್ಷೆಗೆ ಪ್ರತ್ಯೇಕವಾಗಿ ನೀಡಬೇಕೆಂದು ಪ್ರತಿಪಾದಿಸಿದರು.

ಅಂತಿಮವಾಗಿ ಕುಲಪತಿಗಳು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿ, ಡಾ.ಪಾರ್ವತಿಯವರೊಂದಿಗೆ ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾದ ಡಾ.ಮುನಿನಾರಾಯಣಪ್ಪನವರು ಅನುಚಿತವಾಗಿ ವರ್ತಿಸಿರುವ ಘಟನೆಯನ್ನು ತಾವು ಸಹ ಖಂಡಿಸುವುದಾಗಿ ಹೇಳಿದರು. ತಾವು ಕುಲಪತಿಯ ಹುದ್ದೆ ವಹಿಸಿಕೊಂಡ ದಿನದಿಂದ ಇಂತಹ ಬೇಜವಾಬ್ದಾರಿ ವರ್ತನೆಯ ವರದಿಗಳು ತಮ್ಮ ಗಮನಕ್ಕೆ ಬರುತ್ತಿದ್ದು, ಹಲವಾರು ಸಂದರ್ಭಗಳಲ್ಲಿ ಕೆಲವು ಪ್ರಾಧ್ಯಾಪಕರು ತಮ್ಮೊಂದಿಗೆ ಅನಾಗರೀಕವಾಗಿ ವರ್ತಿಸಿದ್ದಾರೆ. ವಿಶ್ವವಿದ್ಯಾನಿಲಯ ಪ್ರಾರಂಭದ ಒಂದೂವರೆ ವರ್ಷಕಾಲ ಇಲ್ಲಿ ಕೆಲಸ ನಿರ್ವಹಿಸುತ್ತಿದ್ದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಈ ವಿಶ್ವವಿದ್ಯಾನಿಲಯದ ನಿಯಂತ್ರಣದಲ್ಲಿ ಇರಲಿಲ್ಲ. ಇವರೆಲ್ಲ ಬೆಂಗಳೂರು ವಿಶ್ವವಿದ್ಯಾಲಯದ ಸಿಬ್ಬಂದಿಗಳಾಗಿದ್ದರು. ಹೀಗಾಗಿ ಅವರ ಮೇಲೆ ಈ ವಿಶ್ವವಿದ್ಯಾನಿಲಯದ ಆಡಳಿತಾತ್ಮಕ ನಿಯಂತ್ರಣ ಇರಲಿಲ್ಲ. ಇತ್ತೀಚಿನ ದಿನಗಳಲ್ಲಿಯೂ ಸಹ ಒಬ್ಬರ ಮೇಲೆ ಇನ್ನೊಬ್ಬರು ದೂರುಗಳನ್ನು ನೀಡುವುದು ಒಂದು ಸಾಮಾನ್ಯ ಪ್ರಕ್ರಿಯೆ ಆಗಿ ನಿರಂತರವಾಗಿ ನಡೆದುಕೊಂಡು ಬಂದಿದೆ. ಇಲ್ಲಿ ಇರುವ ಕೆಲವು ಶಕ್ತಿಗಳು ಇಂತಹ ಋಣಾತ್ಮಕ ಸಂಸ್ಕೃತಿ ಬೆಳೆಸಿಕೊಂಡು ಬಂದಿದ್ದಾರೆ. ಪ್ರತಿ ಹಂತದಲ್ಲಿ ವಿಶ್ವವಿದ್ಯಾನಿಲಯದ ಅಭಿವೃದ್ಧಿಗೆ ಅಡೆತಡೆ ಉಂಟುಮಾಡುವುದು, ಅನಗತ್ಯವಾದ ವಿವಾದಗಳನ್ನು ಸೃಷ್ಠಿ ಮಾಡುವುದು, ಅವ್ಯಾಹತವಾಗಿ ನಡೆದುಕೊಂಡು ಬಂದಿದೆ. ಅದು ಗಾಂಧಿ ಜಯಂತಿಯಾಗಿರಬಹುದು, ಡಾ: ಅಂಬೇಡ್ಕರ ಜಯಂತಿಯಾಗಿರಬಹುದು, ಅಥವಾ ಇನ್ನಿತರ ಯಾವುದೆ ವಿಷಯವಾಗಿರಬಹುದು. ಮಹಾತ್ಮರ ಜಯಂತಿ ಆಚರಣೆ ಬರೀ ಫೋಟೊ ಇಟ್ಟು ಹಾರ ಹಾಕುವುದು ಅಲ್ಲ, ಅವರು ತತ್ವ, ಆದರ್ಶ, ಸಿದ್ಧಾಂತಗಳ ಕುರಿತು ಚಿಂತನೆ ಆಗಬೇಕು ಮತ್ತು ಯುವಕರಿಗೆ ಅವುಗಳ ಪರಿಚಯ ಮಾಡಬೇಕು. ಜಯಂತಿ ದಿವಸ ರಜೆ ಇದ್ದು ವಿದ್ಯಾರ್ಥಿಗಳು ಅಂದು ಕಾರ್ಯಕ್ರಮ ಆಯೋಜಿಸಿದರೆ ಬರುವುದಿಲ್ಲ. ಆ ಕಾರಣ ಗಾಂಧಿ ಜಯಂತಿ ಆಚರಣೆಯ ಪೂರ್ವದಲ್ಲಿ ಒಂದು ವಾರ ವಿವಿಧ ಚಟುವಟಿಕೆಗಳನ್ನು/ಸ್ಪರ್ಧಾ ಕಾರ್ಯಕ್ರಮಗಳನ್ನು ಜರುಗಿಸಿ ಅಂತಿಮವಾಗಿ ಕಾರ್ಯಕ್ರಮ ಆಯೋಜಿಸಿ, ವಿದ್ವಾಂಸರನ್ನು ಕರೆಸಿ ಮಹಾತ್ಮರ ಬಗ್ಗೆ ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಡುವ ಕಾರ್ಯಕ್ರಮ ಹಾಕಿಕೊಂಡಿರುವುದನ್ನು ಸಹಿಸದೇ ದೂರುಗಳನ್ನು ಕೊಟ್ಟಿರುವ ಪ್ರಸಂಗಗಳಿವೆ ಎಂದು ಹೇಳಿದರು. ಇತ್ತೀಚಿನ ಉದಾಹರಣೆ ನೀಡುತ್ತಾ, ತಾವು ಕಳೆದ ಸಿಂಡಿಕೇಟ್ ಸಭೆಯ ದಿವಸ ಮಧ್ಯಾಹ್ನ ಅಗತ್ಯ ಸಭೆಗೆ ಹೋಗಬೇಕಾದ ಕಾರಣ, ಹಿರಿಯ ಸದಸ್ಯರಾದ ಡಾ. ಪಾಂಡುರಂಗಪ್ಪನವರಿಗೆ ಅಧ್ಯಕ್ಷತೆ ವಹಿಸಿ ಕಲಾಪ ಮುಂದುವರೆಸಲು ತಿಳಿಸಿ ಹೋದ ತಕ್ಷಣದಲ್ಲಿ ಕೆಲವು ವಾಹಿನಿಗಳಲ್ಲಿ, "ಕುಲಪತಿಗಳಿಂದ ಸಿಂಡಿಕೇಟ್ ಸಭೆ ಭಹಿಷ್ಕಾರ" ಎಂಬ ಸುದ್ಧಿ ಬಿತ್ತರವಾಗುತ್ತಿತ್ತು. ಇದು ನಮ್ಮಲ್ಲಿರುವ ಕೆಲವು ವ್ಯಕ್ತಿಗಳು ಹೊಂದಿರುವ ಕೆಟ್ಟ ಮನ:ಸ್ಥಿತಿ, ಇಂತಹ ಮನ:ಸ್ಥಿತಿಯನ್ನು ಪ್ರೋತ್ಸಾಹಿಸುವ ಜನರು ಇರುವುದು ನೋವಿನ ಸಂಗತಿ. ಇಂತಹ ಸಂಸ್ಕೃತಿ ಖಂಡಿತವಾಗಿ ವಿಶ್ವವಿದ್ಯಾಲಯದ ಘನತೆಗೆ ಕುಂದು ತರುವುದಲ್ಲದೆ, ಶೈಕ್ಷಣಿಕ ವಾತಾವರಣವನ್ನು ಕಲುಷಿತಗೊಳಿಸುತ್ತದೆ ಎಂದು ಹೇಳಿ, ಮೇಲಿನ ಘಟನೆ ಕುರಿತು ಸಭೆ ಕಠಿಣ ನಿರ್ಧಾರ ತೆಗೆದುಕೊಳ್ಳಬೇಕೆಂದು ಹೇಳಿದರು.

**ಸಿಂಡಿಕೇಟ್ ತೀರ್ಮಾನ**

ಸುಧೀರ್ಘವಾದ ಚರ್ಚೆಯ ನಂತರ ಸಿಂಡಿಕೇಟ್ ಸಭೆ ಕೆಳಕಂಡ ಸರ್ವಾನುಮತದ ತೀರ್ಮಾನಗಳನ್ನು ತೆಗೆದುಕೊಳ್ಳಲು ನಿರ್ಣಯಿಸಿತು

ಸಿಂಡಿಕೇಟ್ ನಿರ್ಣಯ:

1) ಸನ್ಮಾನ್ಯ ಸಿಂಡಿಕೇಟ್ ಸದಸ್ಯರಾದ ಡಾ: ಆರ್. ಪಾರ್ವತಿಯವರು ಈ ಘಟನೆಯಿಂದ ಅನುಭವಿಸಿದ ನೋವು ಹಾಗೂ ದುಮ್ಮಾನಗಳಿಗೆ ಸ್ಪಂದಿಸಿ, ಸಂಪೂರ್ಣ ಸಿಂಡಿಕೇಟ್ ಸಭೆ ಅವರ ಜೊತೆಗೆ ಇದೆ ಎಂಬ ಭರವಸೆ ನೀಡಿ ಅವರಿಗೆ ಸಾಂತ್ವನ ಹೇಳಲು ತೀರ್ಮಾನಿಸಿತು.

2) ವಾಣಿಜ್ಯ ವಿಭಾಗದ ಪ್ರಾಧ್ಯಾಪಕರಾದ ಡಾ: ಎಂ. ಮುನಿನಾರಾಯಣಪ್ಪ ನವರು ಸಿಂಡಿಕೇಟ್ ಸದಸ್ಯರಾದ ಡಾ: ಪಾರ್ವತಿಯವರೊಂದಿಗೆ ಅನುಚಿತವಾಗಿ ನಡೆದುಕೊಂಡಿರುವ ವರ್ತನೆಯನ್ನು "ನೀನು ಸಿಂಡಿಕೇಟ್ ಸಭೆಯಲ್ಲಿ ತಿಪ್ಪೆ ಸಾರಿಸುವ ಕೆಲಸ ಮಾಡಿದ್ದಿಯಾ" ಎಂಬ ಪದಗಳ ಬಳಕೆಯನ್ನು ಸಭೆ ಗಂಭೀರವಾಗಿ ಪರಿಗಣಿಸಿ ಅವರ ವರ್ತನೆಯನ್ನು ಅತ್ಯಂತ ಕಠಿಣವಾದ ಪದಗಳಲ್ಲಿ ಖಂಡಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.

3) ಇನ್ನು ಮುಂದೆ ಎಲ್ಲಾ ಕೋರ್ಸು/ವ್ಯಾಸಂಗ/ವಿಷಯಗಳ ಪ್ರಾಜೆಕ್ಟ್ ರಿಪೋರ್ಟಗಳನ್ನು ಕುಲಸಚಿವರು (ಮೌಲ್ಯಮಾಪನ) ರವರ ಕಛೇರಿಯಲ್ಲಿಯೇ ಸ್ವೀಕರಿಸಿ, ಅವುಗಳ ಮೌಲ್ಯಮಾಪನ ಮಾಡಿಸುವ ಜವಾಬ್ದಾರಿ ಕುಲಸಚಿವರು (ಮೌಲ್ಯಮಾಪನ) ರವರು ನಿರ್ವಹಿಸಬೇಕೆಂದು ತೀರ್ಮಾನಿಸಲಾಯಿತು.

4) ನಡಾವಳಿಗಳನ್ನು ಧೃಢೀಕರಿಸಿದ ನಂತರ ಡಾ. ಎಂ. ಮುನಿನಾರಾಯಣಪ್ಪ, ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ ಇವರಿಗೆ ಈ ಘಟನೆ ಕುರಿತು ಕಾರಣ ಕೇಳಿ ನೋಟೀಸು ನೀಡಿ ಅವರಿಂದ ವಿವರಣೆ ಪಡೆದು ಸಿಂಡಿಕೇಟ್ ಸಭೆಗೆ ಮಂಡಿಸಬೇಕೆಂದು ತೀರ್ಮಾನಿಸಲಾಯಿತು.

ಆ) ಸದಸ್ಯರಾದ ಡಾ: ಬಿ.ಎ. ಅನುರಾಧ ರವರು ಕೆಲವು ಮಹಾವಿದ್ಯಾಲಯಗಳು ಶಿಕ್ಷಕರಿಗೆ ಸರಿಯಾಗಿ ವೇತನ ನೀಡುತ್ತಿಲ್ಲವೆಂದು ತಿಳಿಸಿ, ಈ ಕುರಿತು ಎಲ್ಲಾ ಮಹಾವಿದ್ಯಾಲಯಗಳಿಗೆ ಸೂಕ್ತ ತಿಳುವಳಿಕೆ ನೀಡಿ ಪತ್ರ ಬರೆಯಬೇಕೆಂದು ಪ್ರಸ್ತಾಪಿಸಿದರು.

ಕೆಲವು ಸದಸ್ಯರು ಶಿಕ್ಷಕರಿಗೆ ವೇತನ ನೀಡುವ ಕುರಿತು ವಿಶ್ವವಿದ್ಯಾನಿಲಯ ನಿರ್ದೇಶನ ನೀಡಲು ನಿಯಮಾವಳಿಗಳಲ್ಲಿ ಅವಕಾಶ ಇರುವ ಬಗ್ಗೆ ಸಂದೇಹ ವ್ಯಕ್ತಪಡಿಸಲು, ಸದಸ್ಯರಾದ ಶ್ರೀ ಕರಣ್‌ಕುಮಾರ್ ಹಾಗೂ ಶ್ರೀ ಶ್ರೀನಿವಾಸಯ್ಯನವರು ಖಂಡಿತವಾಗಿ ವಿಶ್ವವಿದ್ಯಾನಿಲಯ ಈ ಕುರಿತು ನಿರ್ದೇಶನ ನೀಡಬಹುದು. ಸ್ಥಳೀಯ ವಿಚಾರಣಾ ಸಮಿತಿಗಳು ಮಹಾವಿದ್ಯಾಲಯಗಳಿಗೆ ಭೇಟಿ ನೀಡಿದಾಗ ಈ ಕುರಿತು ಪರಿಶೀಲನೆ ಮಾಡಲು ಅವಕಾಶವಿದೆ ಎಂದು ಹೇಳಿದರು. ಆ ಸಂದರ್ಭದಲ್ಲಿ ವೇತನ ಪಾವತಿಯ ದಾಖಲೆಗಳನ್ನು ಪರಿಶೀಲಿಸಬೇಕೆಂದು ಹೇಳಿದರು. ಶ್ರೀಕರಣ್‌ಕುಮಾರ್ ರವರು ಮಹಾವಿದ್ಯಾಲಯಗಳು ಪ್ರತಿ ತಿಂಗಳು ತಮ್ಮ ಸಿಬ್ಬಂದಿಗಳಿಗೆ ಬ್ಯಾಂಕ್ ಮುಖಾಂತರ ವೇತನ ಪಾವತಿ ಮಾಡಿರುವ ವಿವರವಾದ ತಖ್ತೆಯನ್ನು ಇ-ಮೇಲ್ ಮುಖಾಂತರ ಕಳುಹಿಸಲು, ಹಾಗೆ ಕಳುಹಿಸಿದ ಮೇಲ್ ಹಾಗೂ ವೇತನ ಪಾವತಿ ವಿವರಗಳನ್ನು ಒಂದು ಪ್ರತ್ಯೇಕ ಫೋಲ್ಡರ್‌ನಲ್ಲಿ ಶೇಖರಿಸಿ ಇಟ್ಟುಕೊಳ್ಳಬೇಕೆಂದು ಹೇಳಿದರು. ಚರ್ಚೆಯ ನಂತರ ಸಿಂಡಿಕೇಟ್ ಸಭೆ ಕೆಳಗಿನಂತೆ ತೀರ್ಮಾನ ತೆಗೆದುಕೊಂಡಿತು.

ಸಿಂಡಿಕೇಟ್ ನಿರ್ಣಯ:

**ಎಲ್ಲಾ ಸಂಯೋಜಿತ ಮಹಾವಿದ್ಯಾಲಯಗಳಿಗೆ ಸುತ್ತೋಲೆ ಹೊರಡಿಸಿ, ಆಯಾ ಮಹಾವಿದ್ಯಾಲಯಗಳು 2020-21ನೇ ಸಾಲಿನ ಎಪ್ರಿಲ್ ತಿಂಗಳಿಂದ ಇದುವರೆಗೆ ತಮ್ಮ ಮಹಾವಿದ್ಯಾಲಯದ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿಗಳ ಬ್ಯಾಂಕ್ ಖಾತೆಗಳಿಗೆ ಪಾವತಿ ಮಾಡಿದ ವೇತನದ ವಿವರಗಳ ಪಟ್ಟಿಯನ್ನು ನಿಗದಿತ ನಮೂನೆಯಲ್ಲಿ ಇ-ಮೇಲ್ ಮುಖಾಂತರ ಸಲ್ಲಿಸಲು ಸೂಚಿಸಬೇಕೆಂದು ತೀರ್ಮಾನಿಸಲಾಯಿತು.**

| | |
|---|---|
| ವಿಷಯ ಸಂಖ್ಯೆ-4 | ವಿಶ್ವವಿದ್ಯಾನಿಲಯಕ್ಕೆ ಅಗತ್ಯವಿರುವ ಕರಡು ಪರಿನಿಯಮಗಳನ್ನು (Statutes) ಪರಿಗಣಿಸುವ ಕುರಿತು.<br><br>ಕಳೆದ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಕರಡು ಪರಿನಿಯಮಗಳ soft copy ಗಳನ್ನು ಎಲ್ಲಾ ಸದಸ್ಯರಿಗೆ ಇ-ಮೇಲ್ ಮೂಲಕ ಕಳುಹಿಸಲಾಗಿರುವ ವಿಷಯವನ್ನು ಕುಲಸಚಿವರು ಸಭೆಗೆ ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಪರಿನಿಯಮಗಳನ್ನು ಕೂಲಂಕಷವಾಗಿ ಪರಿಶೀಲಿಸಲು ಇನ್ನು ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ ಎಂದು ಹೇಳಿ, ಮುಂದಿನ 15 ದಿವಸಗಳಲ್ಲಿ ಒಂದು ಸಿಂಡಿಕೇಟ್ ಸಭೆ ಕರೆದು ಅಂತಿಮಗೊಳಿಸಬಹುದೆಂದು ತಿಳಿಸಿದರು. ಸದರಿ ಸಭೆಗೆ ಸಮಿತಿಯ ಆಧ್ಯಕ್ಷರಾದ ಡಾ: ತಿಮ್ಮೆಗೌಡ ರವರನ್ನು ಆಮಂತ್ರಿಸಿ ಅವರಿಗೆ ಸನ್ಮಾನಿಸಿ ಅವರಿಂದ ಪರಿನಿಯಮಗಳ ಕುರಿತು ಮಾರ್ಗದರ್ಶನ ಪಡೆಯಬಹುದೆಂದು ತಿಳಿಸಿದರು. ಸಮಿತಿ ಸಿದ್ಧಪಡಿಸಿರುವ 11 ಪರಿನಿಯಮಗಳು ಸರಿಯಾಗಿವೆ. ಕೇವಲ ಅಕ್ಷರದೋಷಗಳು ಏನಾದರೂ ಇದ್ದರೆ ಅವುಗಳನ್ನು ನೋಡಿ ಪರಿಪೂರ್ಣಗೊಳಿಸುವುದು ತಮ್ಮ ಉದ್ದೇಶವೆಂದು ಹೇಳಿ, ಸಭೆ ಅಗತ್ಯವೆನಿಸಿದರೆ ಪರಿನಿಯಮಗಳನ್ನು ಪರಿಶೀಲಿಸಿ ಒಪ್ಪಿಗೆ ನೀಡಬಹುದೆಂದು ಹೇಳಿದರು.<br><br>ಮಾನ್ಯ ಸದಸ್ಯರಾದ ಡಾ. ಇ.ಬಿ. ರಾಜೇಶ ರವರು, ಈಗಾಗಲೇ ಹಲವಾರು ಸುತ್ತಿನ ಚರ್ಚೆಯಾಗಿ ಪರಿನಿಯಮಗಳ ಕೂಲಂಕಷ ಪರಿಶೀಲನೆಯಾಗಿದೆ. ಸಮಿತಿ ಅದ್ಯಕ್ಷರಾಗಿರುವ ಡಾ. ತಿಮ್ಮೆಗೌಡರು ಸಹ ಬಹಳ ಮುತುವರ್ಜಿಯಿಂದ ಪರಿಶೀಲಿಸಿದ್ದಾರೆ. ಈ ಸಭೆ ಅನುಮೋದನೆ ನೀಡಿದ ಮೇಲೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಲವು ಆಯಾಮಗಳ ಪರಿಶೀಲನೆ ಆಗಬೇಕಾಗಿದೆ. ಸಮಿತಿ ಇನ್ನೂ ಹಲವು ಪರಿನಿಯಮಗಳನ್ನು ಸಿದ್ಧಪಡಿಸಬೇಕಾಗಿದೆ. ಅವುಗಳು ಪೂರ್ಣಗೊಂಡ ನಂತರ, ಡಾ. ಬಿ. ತಿಮ್ಮೆಗೌಡರನ್ನು ಆಮಂತ್ರಿಸಿ ಅವರನ್ನು ಅಭಿನಂದಿಸಿ ಅವರಿಂದ ಮಾರ್ಗದರ್ಶನ ಪಡೆಯಬಹುದು. ಈಗ ಪರಿನಿಯಮಗಳಿಗೆ ಅನುಮೋದನೆ ನೀಡಬಹುದೆಂದು ಹೇಳಿದರು.<br><br>ಸಿಂಡಿಕೇಟ್ ನಿರ್ಣಯ:<br><br>**ದಿನಾಂಕ 28.09.2020ರಂದು (ಸೋಮವಾರ) ಸಿಂಡಿಕೇಟ್ ಸಭೆ ಕರೆದು ಸದರಿ ಸಭೆಯಲ್ಲಿ ಎಲ್ಲಾ 11 ಪರಿನಿಯಮಗಳ ಕುರಿತು ಚರ್ಚಿಸಿ ಅನುಮೋದನೆ ನೀಡಲು ಕ್ರಮಕೈಗೊಳ್ಳಬಹುದು ಎಂದು ತೀರ್ಮಾನಿಸಲಾಯಿತು.** |
| ವಿಷಯ ಸಂಖ್ಯೆ-7 | ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದಲ್ಲಿ ಆಧಾರ್ ಸಂಖ್ಯೆ ಆಧಾರಿತ ಡಿಜಿಟಲ್ (e-Sign) ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಆನ್‌ಲೈನ್ ಮೂಲಕ ಮೆ. ಕಿಯೋನಿಕ್ಸ್ ಸಂಸ್ಥೆಯವರ e-Documents Generation System (EDGS) ತಂತ್ರಾಂಶವನ್ನು ಬಳಸಿಕೊಂಡು Online /digital format ನಲ್ಲಿ ತಯಾರಿಸಿ ವಿತರಿಸುವ ವ್ಯವಸ್ಥೆ ಕುರಿತಂತೆ ದಿನಾಂಕ 29-08-2020 ರಂದು ಜರುಗಿದ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಕಿಯೋನಿಕ್ಸ್ ಸಂಸ್ಥೆಯ ಪ್ರತಿನಿಧಿ ಸಿಂಡಿಕೇಟ್ ಸಭೆಯಲ್ಲಿ ನೀಡುವ ಪ್ರಾತ್ಯಕ್ಷಿತೆಯನ್ನು ಪರಿಗಣಿಸುವ ಕುರಿತು. |

| | |
|---|---|
| | ವಿವಿಧ ಪ್ರಮಾಣಪತ್ರಗಳನ್ನು ವಿಶ್ವವಿದ್ಯಾನಿಲಯದ ಸುಪರ್ದಿನಲ್ಲಿರುವ ದತ್ತಾಂಶಗಳನ್ನು ಉಪಯೋಗಿಸಿಕೊಂಡು ವಿದ್ಯಾರ್ಥಿಗಳಿಗೆ ಅವಶ್ಯಕವಾದ ಪ್ರಮಾಣಪತ್ರಗಳನ್ನು ನೀಡುವ ವ್ಯವಸ್ಥೆಯಲ್ಲಿ ಇರುವ ವಿವಿಧ ಅಂಶಗಳ ಹಾಗೂ ಅದರ ಉಪಯೋಗಗಳ ಕುರಿತು ಸಭೆಗೆ ವಿವರಿಸಿದರು. ಈ ತಂತ್ರಾಂಶದಲ್ಲಿ ಸಿಬ್ಬಂದಿಗಳ ಹಸ್ತಕ್ಷೇಪವಿಲ್ಲದೆ ತಂತ್ರಜ್ಞಾನದ ಸಹಾಯದಿಂದ ನೇರವಾಗಿ ವಿದ್ಯಾರ್ಥಿಯ ಇ-ಮೇಲ್‌ಗೆ ಪ್ರಮಾಣಪತ್ರಗಳನ್ನು ಕಳುಹಿಸುವುದು ಹಾಗೂ ಸದರಿ ಪ್ರಮಾಣಪತ್ರಗಳನ್ನು ಪರೀಕ್ಷಾ ವಿಭಾಗದ ಸಿಬ್ಬಂದಿ ಪರಿಶೀಲನೆ ನಂತರ, ಕುಲಸಚಿವರು (ಮೌಲ್ಯಮಾಪನ) ರವರಿಂದ ಅಧಿಕೃತಗೊಳಿಸಿದ ನಂತರ ವಿದ್ಯಾರ್ಥಿಗೆ ಒದಗಿಸುವುದು ಹೀಗೆ ಎರಡೂ ವಿಧದಲ್ಲಿ ವಿದ್ಯಾರ್ಥಿಗೆ ನೀಡುವ ಅವಕಾಶವಿದೆ ಎಂದು ಹೇಳಿ, ಸಂಸ್ಥೆ ಯಾವ ರೀತಿಯ ಸೇವೆ ಬಯಸುತ್ತದೆಯೋ ಅಂತಹ ಸೇವೆ ನೀಡಲಾಗುವುದು ಎಂದು ಹೇಳಿ, ಈ ಆಪ್‌ನಲ್ಲಿರುವ ಸುರಕ್ಷತಾ ಕ್ರಮಗಳ ಕುರಿತು ವಿವರಣೆ ನೀಡಿದರು.<br><br>ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ಮತ್ತು ಶ್ರೀಮತಿ ಜ್ಯೋತಿ ವಿಜಯ್ ರವರು ಇದರಿಂದ ವಿದ್ಯಾರ್ಥಿಗಳಿಗೆ ಮತ್ತು ವಿಶ್ವವಿದ್ಯಾನಿಲಯಕ್ಕೆ ಆಗುವ ಉಪಯೋಗ, ಸಮಯದ ಉಳಿತಾಯ, ವಿಶ್ವವಿದ್ಯಾನಿಲಯದ ಪಾತ್ರ ಎಲ್ಲಿ ಮುಗಿಯುತ್ತದೆ ಮತ್ತು ವಿದ್ಯಾರ್ಥಿ ಪಾತ್ರ ಎಲ್ಲಿ ಶುರುವಾಗುತ್ತದೆ ಎಂಬುದರ ಕುರಿತು ಮಾಹಿತಿ ಕೇಳಿದರು. ವಿದ್ಯಾರ್ಥಿ ಬೇಡಿಕೆ ಸಲ್ಲಿಸಿದ ನಂತರ ಶುಲ್ಕ ಪಾವತಿ ಖಚಿತಪಡಿಸಿಕೊಂಡು ವಿಶ್ವವಿದ್ಯಾನಿಲಯದ ನಿಯಂತ್ರಣದಲ್ಲಿರುವ ದತ್ತಾಂಶಗಳ ಆಧಾರದ ಮೇಲೆ ಪ್ರಮಾಣಪತ್ರಗಳನ್ನು ಸಿದ್ಧಪಡಿಸಿ ವಿದ್ಯಾರ್ಥಿಯ ಈ-ಮೇಲ್ ಗೆ ಪ್ರಮಾಣ ಪತ್ರ ಕಳುಹಿಸುವ ತಾಂತ್ರಿಕ ಸೇವೆ ಮಾತ್ರ ತಮ್ಮ ಸಂಸ್ಥೆಯಿಂದ ನೀಡಲಾಗುತ್ತದೆ. ತಮ್ಮ ಸಂಸ್ಥೆಯಿಂದ ಈಗಾಗಲೇ ಮೈಸೂರು ವಿಶ್ವವಿದ್ಯಾನಿಲಯ, ಧಾರವಾಡದ ಕೃಷಿ ವಿಶ್ವವಿದ್ಯಾನಿಲಯ, ಜಾನಪದ ವಿಶ್ವವಿದ್ಯಾನಿಲಯ, ಸಂಗೀತ ವಿಶ್ವವಿದ್ಯಾನಿಲಯಗಳಿಗೆ ಸೇವೆ ಒದಗಿಸಲಾಗುತ್ತಿದೆ, ಇದರಿಂದಾಗಿ ಸಮಯದ ಉಳಿತಾಯವಾಗುವುದಲ್ಲದೆ, ಅನಗತ್ಯ ಮಾನವ ಹಸ್ತಕ್ಷೇಪ ಕಡಿಮೆಯಾಗುತ್ತದೆ ಎಂದು ಹೇಳಿದರು.<br><br>ಮಾನ್ಯ ಸದಸ್ಯರಾದ ಡಾ. ಇ. ಬಿ. ರಾಜೇಶ್ ರವರು ಬೇರೆ ಬೇರೆ ಇಲಾಖೆಗಳು ಮತ್ತು ಸಂಸ್ಥೆಗಳು ಪ್ರಮಾಣಪತ್ರಗಳ ಖಜುತ್ವ ಪರಿಶೀಲಿಸಲು ಇರುವ ಅವಕಾಶಗಳ ಕುರಿತು ಮಾಹಿತಿ ಕೇಳಲು, ಈ ಕುರಿತು, ಅಗತ್ಯ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ಪ್ರಮಾಣಪತ್ರದ ಖಜುತ್ವ ಪರಿಶೀಲಿಸಲು ತಂತ್ರಾಂಶಗಳಲ್ಲಿ ಅವಕಾಶವಿದೆ, ಇಲ್ಲಿಯೂ ಸಹ ಆಟೋಮೇಟೆಡ್ ಹಾಗೂ ಸಿಬ್ಬಂದಿಗಳಿಂದ ಪರಿಶೀಲನೆ ನಂತರ ಹೀಗೆ ಎರಡು ರೀತಿಯಲ್ಲಿ ನೀಡಲು ಅವಕಾಶವಿದೆ ಎಂದು ಹೇಳಿದರು. ಚರ್ಚೆಯ ನಂತರ ಸಿಂಡಿಕೇಟ್ ಸಭೆ ಕೆಳಗಿನಂತೆ ತೀರ್ಮಾನಿಸಿತು.<br><br>**ಸಿಂಡಿಕೇಟ್ ನಿರ್ಣಯ:**<br><br>**1. ಈ ಸಂಸ್ಥೆಯವರು ಸಿದ್ಧಪಡಿಸಿರುವ ಪಿ.ಪಿ.ಟಿ ಯನ್ನು ಕುಲಸಚಿವರು (ಮೌಲ್ಯಮಾಪನ) ರವರ ಮುಖಾಂತರ ಎಲ್ಲ ಸಿಂಡಿಕೇಟ್ ಸದಸ್ಯರಿಗೆ ಕಳುಹಿಸಬೇಕೆಂದು ಸೂಚಿಸಲಾಯಿತು.**<br>**2. ಈ ಸಂಸ್ಥೆಯವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ನೀಡುತ್ತಿರುವ ಸೇವೆಯ ಉಪಯುಕ್ತತೆ, ವೆಚ್ಚ ಹಾಗೂ ಇತರ ವಿವರಗಳನ್ನು ಪರಿಶೀಲಿಸಲು ಕೆಳಕಂಡ ಸದಸ್ಯರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಮಾಹಿತಿ ಪಡೆದು ವರದಿ ಸಲ್ಲಿಸಬೇಕೆಂದು ತೀಮಾನಿಸಲಾಯಿತು.** |

| | |
|---|---|
| | 1. ಶ್ರೀ ಕರಣ್‌ಕುಮಾರ್<br>2. ಡಾ: ಎಂ. ಪಾಂಡುರಂಗಪ್ಪ<br>3. ಶ್ರೀಮತಿ ಜ್ಯೋತಿ ವಿಜಯ್<br>4. ಡಾ. ಆರ್. ಪಾರ್ವತಿ<br>5. ಡಾ:ಇ.ಬಿ. ರಾಜೇಶ್<br>6. ಕುಲಸಚಿವರು (ಮೌಲ್ಯಮಾಪನ)<br><br>ಕುಲಸಚಿವರು (ಮೌಲ್ಯಮಾಪನ) ರವರು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರು (ಮೌಲ್ಯಮಾಪನ) ರವರೊಂದಿಗೆ ಚರ್ಚಿಸಿ ಭೇಟಿಗೆ ದಿನಾಂಕ ನಿಗದಿಪಡಿಸಬೇಕೆಂದು ಸೂಚಿಸಲಾಯಿತು. |
| ವಿಷಯ ಸಂಖ್ಯೆ–12(6) | **Inclusion of certain items (1 to 14-Excluding 7 & 8) proposed by Smt. Jyothi Vijay, Syndicate Member for discussion and deliberation by the Members of the Syndicate at the meeting scheduled on 11.09.2020.**<br>**12(6) Enhancement of seats in an existing course in piece-meal manner (any number less than a defined section size) during the annual affiliation process and collection of affiliation fee on pro-rata basis**<br><br>ಯಾವುದೇ ಕೋರ್ಸಿನ ಒಂದು ವಿಭಾಗ (ಸೆಕ್ಷನ್)ಗಾಗಿ ನಿಗದಿಪಡಿಸಿದ ಪ್ರವೇಶ ಸಂಖ್ಯೆ ಹೊರತುಪಡಿಸಿ ಅತಿರಿಕ್ತ ಪ್ರವೇಶ ಸಂಖ್ಯೆಗೆ ಪ್ರೋ-ರೇಟಾ ಆಧಾರದ ಮೇಲೆ ಸಂಯೋಜನೆ ಶುಲ್ಕ ಆಕರಿಸುವುದು ಸರಿಯಲ್ಲ, ನಿಗಧಿಪಡಿಸಿದ ಪ್ರವೇಶ ಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯನ್ನು ಒಂದು ಹೆಚ್ಚುವರಿ ವಿಭಾಗವಾಗಿ (Additional Section) ಪರಿಗಣಿಸಬೇಕು ಎಂದು ಪ್ರಸ್ತಾಪಿಸಿದರು.<br>ಕುಲಸಚಿವರು ವಿವರ ನೀಡಿ, ಈಗಾಗಲೇ ಅಧಿಸೂಚನೆ ಹೊರಡಿಸಿ, ಒಂದು ವಿಭಾಗಕ್ಕೆ ನಿಗಧಿಯಾದ ಪ್ರವೇಶಸಂಖ್ಯೆಯನ್ನು ಹೊರತುಪಡಿಸಿ ಹೆಚ್ಚುವರಿಯಾಗಿ ಕೋರುವ ಪ್ರವೇಶ ಸಂಖ್ಯೆಯನ್ನು ಒಂದು ಅತಿರಿಕ್ತ ವಿಭಾಗವಾಗಿ ಪರಿಗಣಿಸಿ ಅದಕ್ಕನುಗುಣವಾಗಿ ಶುಲ್ಕ ಆಕರಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.<br>ಮೇಲಿನ ಮಾಹಿತಿಯ ಹಿನ್ನೆಲೆಯಲ್ಲಿ ಮಾನ್ಯ ಸದಸ್ಯರು ತಮ್ಮ ಗೊತ್ತುವಳಿಯ ಪರಿಗಣನೆಯನ್ನು ಕೈಬಿಡಲು ಒಪ್ಪಿಗೆ ಸೂಚಿಸಿದರು. |
| ವಿಷಯ ಸಂಖ್ಯೆ–13 | ಬೆಂಗಳೂರು ನಗರ ವಿಶ್ವವಿದ್ಯಾಲಯದ ಆವರಣ ಹಾಗೂ ಕಛೇರಿ/ವಿಭಾಗಗಳಿಗೆ ಸಿ.ಸಿ.ಟಿ.ವಿ. ಗಳನ್ನು ಅಳವಡಿಸುವ ಕುರಿತು.<br><br>**ಸಿಂಡಿಕೇಟ್ ನಿರ್ಣಯ:**<br>**ಕೇಂದ್ರೀಯ ಖರೀದಿ ಸಮಿತಿ ಸಭೆಯ ನಡಾವಳಿಗಳೊಂದಿಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಬೇಕೆಂದು ಸೂಚಿಸಲಾಯಿತು.** |
| ವಿಷಯ ಸಂಖ್ಯೆ–14 | ಬೆಂಗಳೂರು ನಗರ ವಿಶ್ವವಿದ್ಯಾಲಯದ ಆವರಣ, ಕಛೇರಿ/ವಿಭಾಗಗಳಿಗೆ ದೂರವಾಣಿ/ ಅಂತರಜಾಲ ವ್ಯವಸ್ಥೆ ಒದಗಿಸುವ ಕುರಿತು.<br><br>**ಸಿಂಡಿಕೇಟ್ ನಿರ್ಣಯ:**<br>**ಕೇಂದ್ರೀಯ ಖರೀದಿ ಸಮಿತಿ ಸಭೆಯ ನಡಾವಳಿಗಳೊಂದಿಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಬೇಕೆಂದು ಸೂಚಿಸಲಾಯಿತು.** |

| | |
|---|---|
| ವಿಷಯ ಸಂಖ್ಯೆ-15 | ಕುಲಸಚಿವರ ಆಪ್ತಕಾರ್ಯಾಲಯದಲ್ಲಿ ಖಾಲಿ ಇರುವ ಆಪ್ತ ಕಾರ್ಯದರ್ಶಿ ಹುದ್ದೆಗೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡುವ ಬಗ್ಗೆ.<br><br>ಕುಲಸಚಿವರ ಆಪ್ತಕಾರ್ಯಾಲಯದಲ್ಲಿ ಕೆಲಸ ನಿರ್ವಹಿಸಲು ಅನುಭವಿ ಸಿಬ್ಬಂದಿಗಳ ಅನುಪಸ್ಥಿತಿಯಿಂದಾಗಿ ಕೆಲಸ ಕಾರ್ಯಗಳ ನಿರ್ವಹಣೆಗೆ ತೊಂದರೆಯಾದ ಕಾರಣ ಸರ್ಕಾರದ ವಿವಿಧ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ ಅನುಭವ ಇರುವ ಶ್ರೀ ಸುರೇಶ ಇವರನ್ನು ಕುಲಸಚಿವರ ಆಪ್ತಕಾರ್ಯಾಲಯದಲ್ಲಿ ಖಾಲಿ ಇರುವ ಆಪ್ತ ಕಾರ್ಯದರ್ಶಿ ಹುದ್ದೆಗೆ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ಕುಲಸಚಿವರು ತಿಳಿಸಿದರು.<br><br>ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ಒಂದು ಸಿ.ವಿ. ಮೇಲೆ ನೇಮಕಾತಿ ಮಾಡುವುದು ಸರಿಯಾದ ಕ್ರಮವಲ್ಲ. ವಿಶ್ವವಿದಾಲಯಕ್ಕೆ ಬೇಕಾದ ಸಿಬ್ಬಂದಿಗಳ ಕೆಲಸಗಳ ವಿವರಗಳನ್ನು ಪ್ರಕಟಪಡಿಸಿ, ಎಲ್ಲ ಸಿಂಡಿಕೇಟ್ ಸದಸ್ಯರುಗಳಿಗೆ ಈ-ಮೇಲ್ ನಲ್ಲಿ ಕಳುಹಿಸಿ, ಸ್ವೀಕರಿಸಲಾಗುವ ಎಲ್ಲಾ ಸಿ.ವಿ. ಗಳನ್ನು ಪರಿಗಣಿಸಿ ಅರ್ಹರನ್ನು ನೇಮಕ ಮಾಡಬೇಕು ಎಂದು ಹೇಳಿದರು.<br><br>ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸಯ್ಯ ಮತ್ತು ಡಾ. ರಾಜೇಶ ರವರು ಕುಲಸಚಿವರು ತಮ್ಮ ಕಛೇರಿಯಲ್ಲಿ ಖಾಲಿ ಇರುವ ಆಪ್ತ ಕಾರ್ಯದರ್ಶಿ ಹುದ್ದೆಗೆ ತಮಗೆ ನಂಬಿಕೆ ಇರುವ ವ್ಯಕ್ತಿಯ ಸೇವೆಯನ್ನು ಪಡೆಯಲು ಅವಕಾಶವಿರಬೇಕು ಎಂದು ತಿಳಿಸಿದರು. ಡಾ. ಕೆ.ಆರ್. ಚಂದ್ರನಾಥ ರವರು, ಕುಲಸಚಿವರು ಸದರಿ ಸಿಬ್ಬಂದಿಯವರಿಗೆ ಸರಕಾರಿ ಕಛೇರಿಗಳಲ್ಲಿ ಕೆಲಸಮಾಡಿದ ಅನುಭವ ಇರುವುದರಿಂದ ಹಾಗೂ ಅವರ ಮೇಲೆ ನಂಬಿಕೆ ಇದ್ದಲ್ಲಿ ತೆಗೆದುಕೊಳ್ಳಬಹುದು ಎಂದು ಹೇಳಿದರು. ಶ್ರೀ ಕರಣಕುಮಾರ್ ರವರು ಮೂರು ತಿಂಗಳ ಅವಧಿಗೆ ಮಾತ್ರ ತೆಗೆದುಕೊಳ್ಳಬಹುದು. ಈ ರೀತಿ ಸೇವೆ ಪಡೆಯಬೇಕಾದ ಹುದ್ದೆಗಳ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿ, ಸಿಂಡಿಕೇಟ್ ಸದಸ್ಯರುಗಳಿಗೆ ಮೇಲ್ ಮುಖಾಂತರ ತಿಳಿಸಿ ಈ ಸಿಬ್ಬಂದಿಯ ಅರ್ಜಿ ಸೇರಿದಂತೆ ಸ್ವೀಕರಿಸಲಾದ ಒಟ್ಟಾರೆ ಅರ್ಜಿಗಳಿಂದ ಅರ್ಹ ಅಭ್ಯರ್ಥಿಯನ್ನು ಆಯ್ಕೆಗೊಳಿಸಬಹುದು ಎಂದು ಹೇಳಿದರು. ಡಾ. ಹೆಚ್. ಟಿ. ಅರವಿಂದ ರವರು ಅನಿವಾರ್ಯ ಸಂದರ್ಭಗಳಲ್ಲಿ ಮೂರು ತಿಂಗಳುಗಳ ಅವಧಿಗೆ ತೆಗೆದುಕೊಂಡು ನಂತರ ಸ್ವೀಕರಿಸಲಾದ ಅರ್ಜಿಗಳನ್ನು ಸ್ಥಾಯಿ ಸಮಿತಿ ಪರೀಶೀಲನೆ ಮಾಡಿದ ನಂತರ ಪರಿಗಣಿಸಬಹುದು ಎಂದು ಹೇಳಿದರು.<br><br>ಸಮಾಲೋಚಕರಾಗಿ ಸೇವೆ ಪಡೆಯಲು ಪರಿಗಣಿಸಬಹುದಾದ ಖಾಲಿ ಇರುವ ಹುದ್ದೆಗಳ ವಿವರಗಳನ್ನು ಪ್ರಕಟಿಸಿ ಅರ್ಜಿಗಳನ್ನು ಸ್ವೀಕರಿಸಿ ಅವರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸಿ ಸಮಾಲೋಚಕರ ಸೇವೆ ಪಡೆಯಲು ಕ್ರಮಕೈಗೊಳ್ಳಲಾಗುವುದು ಎಂದು ಕುಲಸಚಿವರು ಹೇಳಿದರು.<br><br>**ಸಿಂಡಿಕೇಟ್ ನಿರ್ಣಯ:**<br>**ಶ್ರೀ. ಎಸ್. ಸುರೇಶ್‌ರವರನ್ನು ಆಗಸ್ಟ್ 2020ರಿಂದ ಅನ್ವಯಿಸಿ ಮೂರು ತಿಂಗಳುಗಳ ಅವಧಿಗೆ ಕುಲಸಚಿವರ ಆಪ್ತಕಾರ್ಯದರ್ಶಿಯ ಹುದ್ದೆಗೆ ಸಮಾಲೋಚಕರಾಗಿ ನೇಮಕ ಮಾಡಿಕೊಳ್ಳಲು ಅನುಮತಿ ನೀಡಲಾಯಿತು. ಈ ಅವಧಿಯಲ್ಲಿ ಮೇಲೆ ಸೂಚಿಸಿದಂತೆ ಅರ್ಜಿಗಳನ್ನು ಕರೆದು ನೇಮಕಾತಿ ಮಾಡಿಕೊಳ್ಳುವ ವಿಧಿವಿಧಾನಗಳನ್ನು ಪೂರ್ಣಗೊಳಿಸಬೇಕೆಂದು ಸೂಚಿಸಲಾಯಿತು.** |

| | |
|---|---|
| ವಿಷಯ ಸಂಖ್ಯೆ-16 | ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಶ್ರೀಮತಿ ಶ್ಯಾಮಲ, ಸಹಾಯಕ ಕುಲಸಚಿವರು, ಅವರನ್ನು ವಿಶ್ವವಿದ್ಯಾನಿಲಯದಲ್ಲಿ ಸಮಾಲೋಚಕರಾಗಿ ನೇಮಕಾತಿ ಮಾಡಿಕೊಳ್ಳುವ ಬಗ್ಗೆ.<br><br>ಸಿಂಡಿಕೇಟ್ ನಿರ್ಣಯ:<br>**ಶ್ರೀಮತಿ ಎಸ್. ಶ್ಯಾಮಲ ಇವರನ್ನು ದಿನಾಂಕ 01-08-2020ರಿಂದ ಅನ್ವಯಿಸಿ ಗರಿಷ್ಠ ಒಂದು ವರ್ಷದ ಅವಧಿಗೆ ಸೀಮಿತಗೊಳಿಸಿ, ಅಥವಾ ಈ ಹುದ್ದೆಗೆ ಖಾಯಂ ಸಿಬ್ಬಂದಿಯ ನೇರನೇಮಕಾತಿ ಆಗುವವರೆಗೆ ಖಾಲಿ ಇರುವ ಟೆಕ್ನಿಕಲ್ ಅಸಿಸ್ಟಂಟ್ ಹುದ್ದೆಯ ಎದುರಾಗಿ ಸಮಾಲೋಚಕರಾಗಿ ನೇಮಕ ಮಾಡಲು ಅನುಮೋದನೆ ನೀಡಲಾಯಿತು. ಇವರಿಗೆ ಪಾವತಿಸಬೇಕಾದ ಸಮಾಲೋಚಕರ ಶುಲ್ಕವನ್ನು ವಾರ್ಷಿಕ ಐದು ಲಕ್ಷ ರೂಪಾಯಿಗಳ ಗರಿಷ್ಠಮಿತಿಗೆ ಒಳಪಟ್ಟು, ಸಮಾನಾಂತರ ಹುದ್ದೆಗಳಿಗೆ ನೀಡುತ್ತಿರುವ ಮಾಹೆಯಾನ ಮೊತ್ತವನ್ನು ಸಮಾಲೋಚಕರ ಶುಲ್ಕವಾಗಿ ಪಾವತಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.** |
| ವಿಷಯ ಸಂಖ್ಯೆ-17 | ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಸಮಾಲೋಚಕರಾಗಿ ವಿವಿಧ ವೃಂದದ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಅಧಿಕಾರಿ/ನೌಕರರ ಸೇವೆಯನ್ನು ಮುಂದುವರೆಸಲು ಅನುಮೋದನೆ - ಬಗ್ಗೆ.<br><br>ಕೆಲವು ಸದಸ್ಯರು ಪ್ರಸ್ತಾವನೆಯ ಜೊತೆಗೆ ನೀಡಲಾದ 14 ಜನರ ಪಟ್ಟಿ ಹಾಗೂ ಲಗತ್ತಿಸಿದ ಎರಡು ಪಟ್ಟಿಗಳ ಸಂಖ್ಯೆಯಲ್ಲಿ ವ್ಯತ್ಯಾಸ ಕುರಿತು ಕೇಳಿದ ಮಾಹಿತಿಗೆ ಕುಲಸಚಿವರು ವಿವರಣೆ ನೀಡಿ, ಪಟ್ಟಿಯಲ್ಲಿ ಇರುವ 3 ಜನರಿಗೆ ಪ್ರತ್ಯೇಕವಾಗಿ ಆದೇಶ ನೀಡಲಾಗಿದೆ. 14 ಜನರು ಸಧ್ಯ ಸಮಾಲೋಚಕರಾಗಿ ಕೆಲಸ ನಿರ್ವಹಿಸುತ್ತಿದ್ದು ಅವರುಗಳನ್ನು ಒಂದು ವರ್ಷದ ಅವಧಿಗೆ ಮುಂದುವರೆಸುವ ಕುರಿತು ಸಿಂಡಿಕೇಟ್ ಸಭೆ ಮುಂದೆ ಮಂಡಿಸಲಾಗಿದೆ ಎಂದು ಹೇಳಿದರು. ಅದಲ್ಲದೆ, ದಿನಾಂಕ 29-02-2016ರ ಸರ್ಕಾರಿ ಸುತ್ತೋಲೆಯಲ್ಲಿ, ನಿವೃತ್ತ ನೌಕರರ ಪುನರ್ ನೇಮಕಾತಿ ನಿಷೇಧ ಮತ್ತು ನಿವೃತ್ತಿ ನಂತರ ಸೇವಾವಧಿ ವಿಸ್ತರಿಸದಿರುವ ಕುರಿತು ತಿಳಿಸಲಾಗಿದೆ. ವಿಶ್ವವಿದ್ಯಾಲಯದ ಕೆಲಸಗಳ ನಿರ್ವಹಣೆಗೆ ನಿವೃತ್ತ ಸಿಬ್ಬಂದಿಗಳ ಸೇವೆ ಅಗತ್ಯವಾಗಿರುವುದರಿಂದ ಅವರನ್ನು ಸುತ್ತೋಲೆಯಲ್ಲಿ ತಿಳಿಸಿದಂತೆ ಪುನರ್ ನೇಮಕ, ಸೇವಾ ವಿಸ್ತರಣೆ, ಅಥವಾ ಒಪ್ಪಂದದ ನೇಮಕ ಮಾಡದೆ, ಸಮಾಲೋಚಕರಾಗಿ ನೇಮಕ ಮಾಡಲು ಪ್ರಸ್ತಾಪಿಸಲಾಗಿದೆ ಎಂದು ತಿಳಿಸಿದರು.<br>ಸಿಂಡಿಕೇಟ್ ನಿರ್ಣಯ:<br>**ಅನುಸೂಚಿಯಲ್ಲಿ ನಮೂದಿಸಿರುವ ಒಟ್ಟು 14 ಜನ ನಿವೃತ್ತ ಅಧಿಕಾರಿ/ನೌಕರರುಗಳನ್ನು ದಿನಾಂಕ 01-07-2020 ರಿಂದ ಗರಿಷ್ಠ ಒಂದು ವರ್ಷದ ಅವಧಿಗೆ ಅಥವಾ ಖಾಯಂ ಅಧಿಕಾರಿ/ಸಿಬ್ಬಂದಿಗಳ ನೇಮಕವಾಗುವವರೆಗೆ ಅಥವಾ 70 ವರ್ಷ ವಯಸ್ಸಿನ ಮಿತಿಗೆ ಒಳಪಟ್ಟು ಇದರಲ್ಲಿ ಯಾವುದೋ ಮೊದಲು ಆ ಅವಧಿಗೆ ಸಮಾಲೋಚಕರಾಗಿ ಮುಂದುವರೆಸಲು ಹಾಗೂ ಇದಕ್ಕಾಗಿ ತಗಲುವ ವಾರ್ಷಿಕ ರೂ. 52.92 ಲಕ್ಷ ವೆಚ್ಚಕ್ಕೆ ಅನುಮೋದನೆ ನೀಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.** |

| | |
|---|---|
| | ಶ್ರೀ ಗೋವಿಂದ ಸ್ವಾಮಿಯವರಿಗೆ ಖಾಲಿ ಇರುವ ಯಾವುದಾದರೂ ಒಂದು ಹುದ್ದೆಯ ಎದುರಿಗೆ ಗರಿಷ್ಠ ಒಂದು ವರ್ಷದ ಅವಧಿಗೆ ಅಥವಾ ಖಾಯಂ ಅಧಿಕಾರಿ/ಸಿಬ್ಬಂದಿಗಳ ನೇಮಕವಾಗುವವರೆಗೆ ಅಥವಾ 70 ವರ್ಷ ವಯಸ್ಸಿನ ಮಿತಿಗೆ ಒಳಪಟ್ಟು ಇದರಲ್ಲಿ ಯಾವುದೋ ಮೊದಲೋ ಆ ಅವಧಿಗೆ ಸಮಾಲೋಚಕರಾಗಿ ಮುಂದುವರೆಸಲು ಅನುಮೋದನೆ ನೀಡಲು ತೀರ್ಮಾನಿಸಲಾಯಿತು. ಇವರಿಗೆ 70 ವರ್ಷ ವಯಸ್ಸು ಪೂರ್ಣವಾಗದೇ ಇರುವ ಕುರಿತು ಧೃಢೀಕರಿಸಿಕೊಳ್ಳಬೇಕೆಂದು ಸೂಚಿಸಲಾಯಿತು.<br>ಶ್ರೀ ಸಿ.ಎ, ಬಾಲಸುಬ್ರಮಣ್ಯಮ್ ಇವರನ್ನು ಖಾಲಿ ಇರುವ ಬೆರಳಚ್ಚುಗಾರರ ಅಥವಾ ಬೇರೆ ಯಾವುದಾದರೂ ಹುದ್ದೆಯ ಎದುರಿಗೆ ಮೇಲಿನ ಷರತ್ತಿಗೆ ಒಳಪಟ್ಟು, ಮುಂದುವರೆಸಲು ತೀರ್ಮಾನಿಸಲಾಯಿತು. |
| ವಿಷಯ ಸಂಖ್ಯೆ–19 | ಬೆಂಗಳೂರು ನಗರ ವಿಶ್ವವಿದ್ಯಾಲಯದ ಆಡಳಿತ ಕಛೇರಿ/ಸ್ನಾತಕೋತ್ತರ ಅಧ್ಯಯನ ವಿಭಾಗಗಳಿಗೆ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚುವರಿ ಸಂಖ್ಯೆಯಲ್ಲಿ ಬೇಕಾಗಿರುವ ಬೋಧಕೇತರ ಹುದ್ದೆಗಳಿಗೆ ಹೊರಗುತ್ತಿಗೆಯಲ್ಲಿ ನೌಕರರ ಸೇವೆ ಪಡೆಯುವ ಕುರಿತು.<br><br>ವಿಶ್ವವಿದ್ಯಾನಿಲಯದ ಪ್ರತಿಯೊಂದು ಸ್ನಾತಕೋತ್ತರ ವಿಭಾಗಕ್ಕೆ ಕನಿಷ್ಠ ಒಂದು ಡಾಟಾ ಎಂಟ್ರಿ ಆಪರೇಟರ್ ಹಾಗೂ ಒಂದು ಗ್ರೂಪ್–ಡಿ ಸಿಬ್ಬಂದಿಗಳ ಸೇವೆ ಮತ್ತು ಆಡಳಿತದ ವಿವಿಧ ವಿಭಾಗಗಳ ಕಛೇರಿಗಳಿಗೆ ಹೆಚ್ಚುವರಿ ಗ್ರೂಪ್–ಸಿ ಮತ್ತು ಗ್ರೂಪ್–ಡಿ ಸಿಬ್ಬಂದಿಗಳ ಸೇವೆ ಅಗತ್ಯವಿರುವುದನ್ನು ಕುಲಸಚಿವರು ಸಭೆಗೆ ಮನವರಿಕೆ ಮಾಡಿಕೊಟ್ಟರು. ಈ ಹುದ್ದೆಗಳಿಗೆ ಮತ್ತು ಈಗಾಗಲೇ ಕಿಯೋನಿಕ್ಸ್ ಮುಖಾಂತರ ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಳ್ಳಲು ಪ್ರಸ್ತಾಪಿಸಿರುವ ಮಂಜೂರಾದ 74 ಹುದ್ದೆಗಳಿಗೆ ವಿಶ್ವವಿದ್ಯಾಲಯದ ಸಂಪನ್ಮೂಲದಿಂದ ವೇತನ ಪಾವತಿ ಮಾಡಬೇಕಾಗುತ್ತದೆ ಎಂದು ಹೇಳಿದರು. ಅವರು ಮುಂದುವರೆದು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಒಟ್ಟು ಮಂಜೂರಾಗಿರುವ 116 ಹುದ್ದೆಗಳ ಪ್ರತಿಶತ 10 ರಷ್ಟು ಹುದ್ದೆಗಳು ನಮ್ಮ ವಿಶ್ವವಿದ್ಯಾಲಯಕ್ಕೆ ಕೊಟ್ಟಿರುವುದಿಲ್ಲ. ಎರಡೂ ವಿಶ್ವವಿದ್ಯಾಲಯಗಳಿಗೆ ಇರುವ ಮಹಾವಿದ್ಯಾಲಯಗಳ ಸಂಖ್ಯೆ ಸಮಾನವಾಗಿದ್ದು ಸ್ನಾತಕೋತ್ತರ ವಿಭಾಗಗಳ ಸಂಖ್ಯೆಯಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಹಾಗಾಗಿ ಹುದ್ದೆಗಳನ್ನು ಅಸಮಾನವಾಗಿ ಹಂಚಿರುವ ಕುರಿತು ಸಭೆಯ ಗಮನ ಸೆಳೆದರು.<br><br>ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ರವರು ಈ ಕುರಿತು ತಾವು ಗಮನಿಸಿದ್ದಾಗಿ ಹೇಳಿ, ಮೂರು ವಿಶ್ವವಿದ್ಯಾಲಯಗಳ ಸಿಬ್ಬಂದಿಗಳ ತುಲನಾತ್ಮಕ ಪಟ್ಟಿಯನ್ನು ಸಿದ್ಧಪಡಿಸಿ ಮುಖ್ಯಮಂತ್ರಿಗಳ ಶೈಕ್ಷಣಿಕ ಸಲಹೆಗಾರರಿಗೆ ಒದಗಿಸಿದಲ್ಲಿ ಅವರ ಸಮ್ಮುಖದಲ್ಲಿ ಮೂರು ವಿಶ್ವವಿದ್ಯಾಲಯಗಳ ಶಾಸನಬದ್ಧ ಅಧಿಕಾರಿಗಳ ಹಾಗೂ ಕೆಲವು ಸಿಂಡಿಕೇಟ್ ಸದಸ್ಯರುಗಳ ಸಭೆ ಕರೆದು ಈ ವಿಷಯವನ್ನು ಇತ್ಯರ್ಥಪಡಿಸಬಹುದೆಂದು ಹೇಳಿದರು.<br><br>ಸಿಂಡಿಕೇಟ್ ನಿರ್ಣಯ:<br><br>**ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗಗಳಿಗೆ ಅಗತ್ಯವಾದ 20 ಗ್ರೂಪ್–ಸಿ ಮತ್ತು 16 ಗ್ರೂಪ್–ಡಿ ಹುದ್ದೆಗಳನ್ನು ಮತ್ತು ವಿವಿಧ ಆಡಳಿತ ವಿಭಾಗಗಳಿಗೆ ಅಗತ್ಯವಾದ 8 ಗ್ರೂಪ್–ಸಿ, ಹಾಗೂ 11– ಗ್ರೂಪ್–ಡಿ ಹೀಗೆ ಒಟ್ಟು 55 ಹುದ್ದೆಗಳನ್ನು ಸೃಜನೆ ಮಾಡಲು ಸಿಂಡಿಕೇಟ್ ಅನುಮೋದನೆ ನೀಡಿತು. ಮಂಜೂರಾತಿಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದಿಸಲಾಯಿತು. ಸರ್ಕಾರದ ಮಂಜೂರಾತಿ ಕಾಯ್ದಿರಿಸಿ ಹೊರಗುತ್ತಿಗೆ ಆಧಾರದ ಮೇಲೆ ಕೆ.ಟಿ.ಪಿ.ಪಿ. ಕಾಯ್ದೆ ಅಡಿಯಲ್ಲಿ ನೇಮಕಾತಿ ಮಾಡಿಕೊಳ್ಳಲು ನಿರ್ಣಯಿಸಲಾಯಿತು.** |

| | |
|---|---|
| | ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಒಟ್ಟು ಮಂಜೂರಾಗಿರುವ ಹುದ್ದೆಗಳು, ಖಾಲಿ ಇರುವ ಹುದ್ದೆಗಳು ಹಾಗೂ ಬೆಂಗಳೂರು ನಗರ ಮತ್ತು ಬೆಂಗಳೂರು ಉತ್ತರ ವಿಶ್ವವಿದ್ಯಾಲಯಗಳಿಗೆ **ಮಂಜೂರಾದ/ವರ್ಗಾವಣೆಯಾದ ಹುದ್ದೆಗಳ ತುಲನಾತ್ಮಕ ಪಟ್ಟಿ ಸಿದ್ಧಪಡಿಸಿ, ಮುಖ್ಯಮಂತ್ರಿಗಳ ಶೈಕ್ಷಣಿಕ ಸಲಹೆಗಾರರಿಗೆ ಸಲ್ಲಿಸಬೇಕೆಂದು, ಮೂರು ವಿಶ್ವವಿದ್ಯಾನಿಲಯಗಳ ಅಧಿಕಾರಿಗಳ ಮತ್ತು ಸಿಂಡಿಕೇಟ್ ಸದಸ್ಯರ ಸಭೆ ಕರೆಯಲು ಅವರನ್ನು ಕೋರಬೇಕೆಂದು ಸೂಚಿಸಲಾಯಿತು** |
| ವಿಷಯ ಸಂಖ್ಯೆ–20 | ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಸಹಾಯಕರು/ಕಿರಿಯ ಸಹಾಯಕರ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಮುಂಬಡ್ತಿ ನೀಡುವ ಬಗ್ಗೆ.<br><br>ಬೆಂಗಳೂರು ವಿಶ್ವವಿದ್ಯಾಲಯದಿಂದ ವಗಾವಣೆಯಾಗಿ ಬಂದು ಸಹಾಯಕರ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶ್ರೀಮತಿ ಟಿ. ಪದ್ಮಮ್ಮ ಇವರು ಸದರಿ ಹುದ್ದೆಯಲ್ಲಿ 10 ವರ್ಷಗಳ ಸೇವೆ ಪೂರೈಸಿರುವುದರಿಂದ ವೃಂದ ಹಾಗೂ ನೇಮಕಾತಿ ನಿಯಮಗಳಲ್ಲಿರುವ ಅವಕಾಶಗಳ ಪ್ರಕಾರ ಅಧೀಕ್ಷಕರ ಹುದ್ದೆಗೆ ಬಡ್ತಿ ಹೊಂದಲು ಅರ್ಹತೆ ಹೊಂದಿರುತ್ತಾರೆ. ಅವರನ್ನು ಸಾಮಾನ್ಯ ವರ್ಗದ ರೋಸ್ಟರ್ ಸಂಖ್ಯೆ 5 ರ ಎದುರಿಗೆ ಖಾಲಿ ಇರುವ ಹುದ್ದೆಗೆ ಬಡ್ತಿ ನೀಡಲು ಮತ್ತು ಕಿರಿಯ ಸಹಾಯಕರಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ವೆಂಕಟಾಚಲಪತಿ ಇವರೂ ಸಹ ವೃಂದ ಹಾಗೂ ನೇಮಕಾತಿ ನಿಯಮಗಳ ಪ್ರಕಾರ ಕಿರಿಯ ಸಹಾಯಕರ ಹುದ್ದೆಯಲ್ಲಿ 5 ವರ್ಷ ಸೇವೆ ಪೂರ್ಣಗೊಳಿಸಿ ಸಹಾಯಕ ಹುದ್ದೆಗೆ ಬಡ್ತಿ ಹೊಂದಲು ಅರ್ಹತೆ ಹೊಂದಿರುವುದರಿಂದ, ಅವರನ್ನೂ ಸಹ ರೋಸ್ಟರ್ ಸಂ. 7 ಕ್ಕೆ ಎದುರಾಗಿ ಸಹಾಯಕರ ಹುದ್ದೆಗೆ ಮುಂಬಡ್ತಿ ನೀಡಲು ದಿನಾಂಕ 10-08-2020ರಂದು ಜರುಗಿದ ಇಲಾಖಾ ಮುಂಬಡ್ತಿ ಸಮಿತಿ ಶಿಫಾರಸ್ಸು ಮಾಡಿರುತ್ತದೆ. ಸದರಿ ಶಿಫಾರಸ್ಸುಗಳನ್ನು ಪರಿಶೀಲನೆ ಹಾಗೂ ಅನುಮೋದನೆಗೆ ಸಿಂಡಿಕೇಟ್ ಸಭೆಗೆ ಮಂಡಿಸಲಾಗಿದೆ ಎಂದು ಕುಲಸಚಿವರು ವಿವರಿಸಿದರು. ಕೆಲವು ಸದಸ್ಯರು, ಹಿಂದಿನ ಸಿಂಡಿಕೇಟ್ ಸಭೆಯಲ್ಲಿ, ಅರ್ಹತೆ ಹೊಂದಿದ ದಿನಾಂಕದಿಂದ ಬಡ್ತಿ ನೀಡಲು ಪರಿಗಣಿಸಲಾಗಿತ್ತು, ಕಾರಣ ಅರ್ಹತೆ ಹೊಂದಿದ ದಿನಾಂಕದಿಂದ ಬಡ್ತಿ ನೀಡಲು ಪರಿಗಣಿಸಬೇಕೆಂದು ಕೋರಿದರು. ಕೋರ್ಟ್ ಪ್ರಕರಣ ಹೊರತುಪಡಿಸಿ, ನಿಯಮಾವಳಿಗಳ ಪ್ರಕಾರ ಪೂರ್ವಾನ್ವಯಗೊಳಿಸಿ ಮುಂಬಡ್ತಿ ನೀಡಲು ಅವಕಾಶವಿಲ್ಲವೆಂದು ತಿಳಿಸಲಾಯಿತು.<br>ಸಿಂಡಿಕೇಟ್ ನಿರ್ಣಯ:<br>**ದಿನಾಂಕ 10-08-2020 ರಂದು ಜರುಗಿದ ಇಲಾಖಾ ಮುಂಬಡ್ತಿ ಸಮಿತಿ ಸಭೆಯ ಶಿಫಾರಸ್ಸನ್ನು ಪರಿಗಣಿಸಿ, ಶ್ರೀಮತಿ ಟಿ. ಪದ್ಮಮ್ಮ, ಸಹಾಯಕಿ, ಸಿಬ್ಬಂದಿ ವಿಭಾಗ ಇವರಿಗೆ ರೋಸ್ಟರ ಸಂಖ್ಯೆ 5 – ಸಾಮಾನ್ಯ ವರ್ಗಕ್ಕೆ ಖಾಲಿ ಇರುವ ಅಧೀಕ್ಷಕರ ಹುದ್ದೆಗೆ ಬಡ್ತಿ ನೀಡಲು ಮತ್ತು ಶ್ರೀ ವೆಂಕಟಾಚಲಪತಿ, ಕಿರಿಯ ಸಹಾಯಕರು, ಹಣಕಾಸು ವಿಭಾಗ ಇವರಿಗೆ ರೋಸ್ಟರ ಸಂಖ್ಯೆ 7 – ಪರಿಶಿಷ್ಟ ಜಾತಿ ಸಹಾಯಕ ಹುದ್ದೆಗೆ ಬಡ್ತಿ ನೀಡಲು ಸಿಂಡಿಕೇಟ್ ಸಭೆ ಸರ್ವಾನುಮತದಿಂದ ಅನುಮೋದನೆ ನೀಡಿತು.** |
| ವಿಷಯ ಸಂಖ್ಯೆ–21 | ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಕಟ್ಟಡಗಳ ನಿರ್ವಹಣೆ ಹಾಗೂ ಹೊಸ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ವಿಶ್ವವಿದ್ಯಾಲಯಕ್ಕೆ ಪ್ರತ್ಯೇಕ ಅಭಿಯಂತರರ ವಿಭಾಗ ಸೃಜಿಸಲು ಮತ್ತು ಸಂಬಂಧಪಟ್ಟ ಹುದ್ದೆಗಳನ್ನು ಮಂಜೂರು ಮಾಡುವ ಕುರಿತು.<br><br>ಕುಲಸಚಿವರು ಸಧ್ಯ ವಿಶ್ವವಿದ್ಯಾಲಯದಲ್ಲಿ ಇಂಜಿನಿಯರಿಂಗ್ ವಿಭಾಗ ಇಲ್ಲದಿರುವ ಕುರಿತು ಸಭೆಗೆ ವಿವರಿಸಿದರು. ಪ್ರಸ್ತುತ ಕಟ್ಟಡ ನಿರ್ವಹಣೆ ಕೆಲಸವನ್ನು ಬೆಂಗಳೂರು ವಿಶ್ವವಿದ್ಯಾನಿಲಯದ ಒಬ್ಬ ನಿವೃತ್ತ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮತ್ತು ಒಬ್ಬರು ಹೊರಗುತ್ತಿಗೆಯ ಕಿರಿಯ ಇಂಜಿನಿಯರ್ ಇವರಿಂದ ನಿರ್ವಹಿಸಲಾಗುತ್ತಿದೆ. ಕಾರಣ |

| | |
|---|---|
| | ವಿಶ್ವವಿದ್ಯಾನಿಲಯಕ್ಕೆ ಇಂಜಿನಿಯರಿಂಗ್ ವಿಭಾಗ ಅಗತ್ಯವಾಗಿದ್ದು, ಅದಕ್ಕೆ ಬೇಕಾದ ಹುದ್ದೆಗಳ ಸೃಜನೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಮಾಲೋಚಕ ಮತ್ತು ಹೊರ ಗುತ್ತಿಗೆ ಸಿಬ್ಬಂದಿಗಳಿಗೆ ವಿಶ್ವವಿದ್ಯಾನಿಲಯದ ಸಂಪನ್ಮೂಲದಿಂದ ವೇತನ ಪಾವತಿ ಮಾಡುವ ವಿಷಯ ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮಂಡಿಸಲಾಗಿದೆ ಎಂದು ಹೇಳಿದರು.<br><br>ಸಿಂಡಿಕೇಟ್ ನಿರ್ಣಯ:<br><br>ಪ್ರಸ್ತಾವನೆಯಲ್ಲಿ ಸೂಚಿಸಿದಂತೆ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ, ಸಹಾಯಕ ಅಭಿಯಂತರರ, ಕಿರಿಯ ಅಭಿಯಂತರರ ತಲಾ ಒಂದು ಹುದ್ದೆಯನ್ನು ಮತ್ತು ಎಲೆಕ್ಟ್ರಿಶಿಯನ್, ಪ್ಲಂಬರ್ ಮತ್ತು ಕಾರ್ಪೆಂಟರ್ 3 ಹುದ್ದೆಗಳನ್ನು, ಹೆಲ್ಪರ/ಗ್ರೂಪ್-ಡಿ -2 ಹುದ್ದೆಗಳ ಮಂಜೂರಾತಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸಮಾಲೋಚಕರ ಹಾಗೂ ಹೊರಗುತ್ತಿಗೆ ಸಿಬ್ಬಂದಿಗಳ ವೇತನವನ್ನು ವಿಶ್ವವಿದ್ಯಾನಿಲಯದ ಸಂಪನ್ಮೂಲದಿಂದ ಭರಿಸಲು ಸರ್ವಾನುಮತದ ಅನುಮೋದನೆ ನೀಡಲಾಯಿತು.<br><br>ಮಾನ್ಯ ಸದಸ್ಯರಾದ ಶ್ರೀ ಕರಣ್‌ಕುಮಾರ್ ಮತ್ತು ಶ್ರೀ ಹೆಚ್. ಆರ್. ಸತೀಶ್ ಅವರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಇರುವ ವಿವಿಧ ಕಟ್ಟಡಗಳ ವಸ್ತುಸ್ಥಿತಿಯನ್ನು ಅಧ್ಯಯನ ಮಾಡಲು ಮತ್ತು ಹೊಸ ಯೋಜನೆಯ ಕಟ್ಟಡ ಹಾಗೂ ಹಾಲಿ ಕಟ್ಟಡಗಳ ನಿರ್ವಹಣೆ ಕುರಿತು ಪರಿಶೀಲಿಸಲು ಇಂಜಿನಿಯರಿಂಗ್ ವಿಭಾಗ ಈ ಕುರಿತು ಅಗತ್ಯ ಕ್ರಮಕೈಗೊಳ್ಳಬೇಕೆಂದು ಸೂಚಿಸಿದರು. |
| ವಿಷಯ ಸಂಖ್ಯೆ-23 | ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ವಿವಿಧ ಕೇಂದ್ರ/ಸಮಿತಿಗಳನ್ನು ಯು.ಜಿ.ಸಿ ನಿಯಮಗಳ/ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ಪ್ರಕರಣಗಳಡಿಯಲ್ಲಿ ಸ್ಥಾಪನೆ ಮಾಡುವ ಬಗ್ಗೆ.<br><br>ಸಿಂಡಿಕೇಟ್ ನಿರ್ಣಯ:<br><br>ಬೆಂಗಳೂರು ನಗರ ವಿಶ್ವವಿದ್ಯಾಲಯದ ವಿವಿಧ ಶೈಕ್ಷಣಿಕ/ಆಡಳಿತಾತ್ಮಕ ಕೆಲಸಕಾರ್ಯಗಳನ್ನು ನಿರ್ವಹಿಸಲು ಕೆಳಗೆ ನಮೂದಿಸಿದ ವಿವಿಧ ಬೋರ್ಡ/ಮಂಡಳಿ/ಕೇಂದ್ರ/ಕೋಶಗಳನ್ನು ರಚಿಸಲು ಮತ್ತು ಅವುಗಳಿಗೆ ವಿಶ್ವವಿದ್ಯಾನಿಲಯದ ಬೋಧಕ ವರ್ಗದವರನ್ನು ಮುಖ್ಯಸ್ಥರಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆ ಸರ್ವಾನುಮತದ ಅನುಮೋದನೆ ನೀಡಿತು.<br><br>1. ನಿರ್ದೇಶಕರು, ಡಾ: ಬಿ.ಆರ್. ಅಂಬೇಡ್ಕರ ಅಧ್ಯಯನ ಕೇಂದ್ರ — ಡಾ: ಎಂ. ಮುನಿರಾಜು, ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ<br>2. ನಿದೇಶಕರು, ಮಹಾತ್ಮಾ ಗಾಂಧಿ ಅಧ್ಯಯನ ಕೇಂದ್ರ — ಡಾ: ಎನ್. ನರಸಿಂಹಮೂರ್ತಿ, ಪ್ರಾಧ್ಯಾಪಕರು, ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ<br>3. ನಿದೇಶಕರು, ಪಿ.ಎಂ.ಇ.ಬಿ. — ಡಾ: ಎಂ. ಪಾಂಡುರಂಗಪ್ಪ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ |

| | |
|---|---|
| | 4. ನಿದೇಶಕರು, ಐ.ಕ್ಯೂ.ಎ.ಸಿ. — ಡಾ ವಿ.ಆರ್. ದೇವರಾಜ್, ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ವಿಭಾಗ |
| | 5. ನಿದೇಶಕರು, ದೈಹಿಕ ಶಿಕ್ಷಣ ಮತ್ತು ಕ್ರೀಡಾ ಇಲಾಖೆ — ಡಾ: ಎಂ. ಮುನಿನಾರಾಯಣಪ್ಪ, ಪ್ರಾಧ್ಯಾಪಕರು, ವಾಣಿಜ್ಯ ವಿಭಾಗ |
| | 6. ನಿದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ — ಡಾ: ಹರಿಪ್ರಸಾದ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ |
| | 7. ಸಂಚಾಲಕರು, ರ್‍ಯಾಗಿಂಗ್ ವಿರೋಧಿ ಸಮಿತಿ — ಡಾ: ಆರ್. ಸುಧಾಕರ, ಫ್ಯಾಶನ್ ಮತ್ತು ಉಡುಪ ತಂತ್ರಜ್ಞಾನ |
| | 8. ಸಂಚಾಲಕರು, ಯೋಗಾ ಕೇಂದ್ರ — ಡಾ: ವಿ. ಗಾಯತ್ರಿ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ |
| | 9. ಅಧ್ಯಕ್ಷರು, ಇಂಟರ್ನಲ್ ಕಂಪ್ಲೇಂಟ್ ಕಮಿಟಿ. ಸೆಕ್ಸುವಲ್ ಹರಾಸ್ಸಮೆಂಟ್ ಆಫ್ ವಿಮೆನ್ ಅಟ್ ವರ್ಕ್‌ಪ್ಲೇಸ್ ಅಂಡ್ ಸ್ಟುಡೆಂಟ್ಸ — ಡಾ: ಪಿ.ಆರ್. ಚೇತನ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ |
| | 10. ಸಂಚಾಲಕರು. ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ — ಡಾ: ಕೆ. ಶಿವಶಂಕರ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ |
| | 11. ವಿಶೇಷಾಧಿಕಾರಿಗಳು ಹಿಂದುಳಿದ ವರ್ಗಗಳು ಮತ್ತು ಅಲ್ಪಸಂಖ್ಯಾತರ ಕೋಶ — ಡಾ: ಎಂ. ನಿರ್ಮಲ, ಸಹಪ್ರಧ್ಯಾಪಕರು ಸಿ.ಬಿ.ಎಸ್.ಎಂ.ಎಸ್. |
| | 12. ವಿಶೇಷಾಧಿಕಾರಿಗಳು ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕೋಶ — ಡಾ: ಕೆ.ಆರ. ಜಲಜಾ, ಸಹಪ್ರಧ್ಯಾಪರು ವಾಣಿಜ್ಯ ಶಾಸ್ತ್ರ ವಿಭಾಗ |
| | 13. ನಿರ್ದೇಶಕರು, ವಿದ್ಯಾರ್ಥಿ ಕಲ್ಯಾಣ — ಡಾ: ರಮೇಶ ಬಿ ಕುಡೇನಟ್ಟಿ, ಸಹಪ್ರಧ್ಯಾಪರು ಗಣಿತಶಾಸ್ತ್ರ ವಿಭಾಗ |
| | 14. ಸಂಚಾಲಕರು. ಅಂತರ್‌ರಾಷ್ಟ್ರೀಯ ವಿದ್ಯಾರ್ಥಿಗಳ ಕೇಂದ್ರ — ಡಾ: ಜ್ಯೋತಿ ವೆಂಕಟೇಶ, ಜಾಗತಿಕ ಭಾಷೆಗಳ ಕೇಂದ್ರ |
| | 15. ನಿರ್ದೇಶಕರು, ಕೌಶಲ್ಯಾಭಿವೃದ್ಧಿ ಕೇಂದ್ರ — ಡಾ: ರಿತಿಕಾ ಸಿನ್ಹಾ, ಸಹಪ್ರಧ್ಯಾಪಕರು ಸಿ.ಬಿ.ಎಸ್.ಎಂ.ಎಸ್. |
| | 16. ನಿರ್ದೇಶಕರು, ಮಹಿಳಾ ಅಧ್ಯಯನ ಕೇಂದ್ರ — ಡಾ: ಮೇಧಾ ಇಟಗಿ ಹುಯಿಲಗೋಳ, ಸಹಪ್ರಧ್ಯಾಪರು ಗಣಿತಶಾಸ್ತ್ರ ವಿಭಾಗ |
| | 17. ಸಂಚಾಲಕರು ಸಾಂಸ್ಕೃತಿಕ ಸಮಿತಿ — ಡಾ: ಜಯಶ್ರೀ ವೆಂಕಟೇಶ, ಫ್ಯಾಶನ್ ಮತ್ತು ಉಡುಪ ತಂತ್ರಜ್ಞಾನ |

| | |
|---|---|
| ವಿಷಯ ಸಂಖ್ಯೆ-24 | 2020-21 ನೇ ಸಾಲಿನ ಕಾಲೇಜುಗಳ ಸಂಯೋಜನಾ ಪ್ರಕ್ರಿಯೆ – ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸುವ ಬಗ್ಗೆ.<br><br>ಕುಲಸಚಿವರು ಸಂಯೋಜನೆ ನವೀಕರಣ, ಹೊಸ ಕೋರ್ಸ್, ಹೊಸ ಕಾಲೇಜು, ಹೆಚ್ಚುವರಿ ಪ್ರವೇಶ ಇತ್ಯಾದಿಗಳ ಕುರಿತು ಸ್ವೀಕರಿಸಲಾದ ಒಟ್ಟು ಅರ್ಜಿಗಳ ವಿವರಗಳನ್ನು ಸಭೆಗೆ ಒದಗಿಸಿದರು. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000 ಪ್ರಕಾರ ಅರ್ಜಿ ಸಲ್ಲಿಸಿದ ಮಹಾವಿದ್ಯಾಲಯಗಳ ತನಿಖೆ ಮಾಡಿ ವರದಿ ನೀಡಲು ಸ್ಥಳೀಯ ವಿಚಾರಣಾ ಸಮಿತಿಗಳನ್ನು ಸಿಂಡಿಕೇಟ್ ಸಭೆ ರಚಿಸಬೇಕಾಗಿದೆ ಎಂದು ಹೇಳಿ, ಕಳೆದ ವರ್ಷ ಸರ್ಕಾರದಿಂದ ಹೊರಡಿಸಿದ ಆದೇಶ/ಪತ್ರಗಳಲ್ಲಿ ಸಿಂಡಿಕೇಟ್ ಸದಸ್ಯರು ಸಮಿತಿಯ ರಚನೆಗೆ ಪರಿಗಣಿಸಬಾರದೆಂದು ಹೊರಡಿಸಿದ ಆದೇಶಕ್ಕೆ ಮಾನ್ಯ ಉಚ್ಚ ನ್ಯಾಯಾಲಯದ ತಡೆ ಆಜ್ಞೆ ಇರುವುದನ್ನು ಸಭೆಗೆ ತಿಳಿಸಿದರು.<br><br>ಮಾನ್ಯ ಸದಸ್ಯರಾದ ಡಾ: ಇ. ಬಿ. ರಾಜೇಶ್, ಪ್ರೊ: ಶ್ರೀನಿವಾಸಮೂರ್ತಿ, ಶ್ರೀ ಶ್ರೀನಿವಾಸಯ್ಯ, ಶ್ರೀ ಕರಣ್‌ಕುಮಾರ್, ಶ್ರೀ; ಹರಿಪ್ರಸಾದ, ಡಾ. ಬಿ.ಎ. ಅನುರಾಧಾ, ಶ್ರೀಮತಿ ಜ್ಯೋತಿ ವಿಜಯ್ ಮುಂತಾದವರು ಚರ್ಚೆಯಲ್ಲಿ ಪಾಲ್ಗೊಂಡು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ ಮಾಹಿತಿ ಪಡೆದರು<br><br>ಮಾನ್ಯ ಸದಸ್ಯರಾದ ಡಾ: ಹೆಚ್. ಟಿ. ಅರವಿಂದ್‌ರವರು ವಿವರಣೆ ನೀಡಿ, ತಾವು ಮತ್ತು ಶ್ರೀ ಸತೀಶರವರು ರಿಟ್ ಅರ್ಜಿ ಸಲ್ಲಿಸಿದ್ದು ಅದರಲ್ಲಿ ವಿಶ್ವವಿದ್ಯಾಲಯ ಕೂಡ ಐ.ಎ. ಸಲ್ಲಿಸಿದೆ ಹಾಗೂ ಮಾನ್ಯ ಉಚ್ಚ ನ್ಯಾಯಾಲಯ ನೀಡಿದ ತಡೆ ಆಜ್ಞೆ ಮುಂದುವರೆದಿದೆ ಎಂದು ಹೇಳಿದರು. ಸರ್ಕಾರದ ಪತ್ರ, ಆದೇಶ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದ ತಡೆ ಆಜ್ಞೆಗಳನ್ನು ಸದಸ್ಯರಾದ ಶ್ರೀ ಕರಣಕುಮಾರ್‌ರವರಿಗೆ ನೀಡಿ ಅವರಿಗೆ ಓದಲು ಕೋರಿದರು. ಅದರಂತೆ ಸದಸ್ಯರಾದ ಶ್ರೀ ಕರಣಕುಮಾರ್‌ರವರು ನ್ಯಾಯಾಲಯದ ತಡೆ ಆಜ್ಞೆಯನ್ನು ಸಭೆಯ ಮಾಹಿತಿಗೆ ಓದಿ ಹೇಳಿದರು. ತಡೆ ಆಜ್ಞೆ ಜಾರಿಯಲ್ಲಿ ಇರುವುದರಿಂದ ಸಿಂಡಿಕೇಟ್ ಸದಸ್ಯರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಬಹುದು ಎಂದು ಹೇಳಿದರು.<br><br>ಕುಲಪತಿಗಳು ವಿವರ ನೀಡಿ, ಕಳೆದ ವರ್ಷ ಸಿಂಡಿಕೇಟ್ ಸದಸ್ಯರನ್ನು ಸ್ಥಳೀಯ ವಿಚಾರಣಾ ಸಮಿತಿಯ ಅಧ್ಯಕ್ಷರಾಗಿ ನೇಮಕ ಮಾಡಲಿಲ್ಲ. ಸದಸ್ಯರಾಗಿ ನೇಮಕ ಮಾಡಲಾಗಿತ್ತು ಎಂದು ತಿಳಿಸಿದರು. ಡಾ. ಅರವಿಂದ್ ಮತ್ತು ಶ್ರೀ ಸತೀಶ ರವರು ಇದಕ್ಕೆ ಒಪ್ಪಿಗೆ ಸೂಚಿಸಲಿಲ್ಲ ಹಾಗೂ ಉಚ್ಚ ನ್ಯಾಯದಲ್ಲಿ ರಿಟ್ ಅರ್ಜಿಸಲ್ಲಿಸಲಾಗಿದೆ ಎಂದು ಹೇಳಿದರು. ಸಿಂಡಿಕೇಟ್ ಸದಸ್ಯರಿಗೆ ಸ್ಥಳೀಯ ವಿಚಾರಣಾ ಸಮಿತಿಗಳ ವರದಿಗಳನ್ನು ಪರಿಶೀಲಿಸಿ ಅಂತಿಮ ಶಿಫಾರಸ್ಸು ಮಾಡುವುದು/ತೀರ್ಮಾನ ತೆಗೆದುಕೊಳ್ಳುವ ಅಧಿಕಾರ ಇರುವುದರಿಂದ ಅವರು ಸಮಿತಿಯ ಭಾಗವಾಗಬಾರದು ಎಂಬುದು ಇದರ ಉದ್ದೇಶ. ಈಗ ತಡೆ ಆಜ್ಞೆ ಜಾರಿಯಲ್ಲಿ ಇರುವುದರಿಂದ ಸಿಂಡಿಕೇಟ್ ಸಭೆ ತೀರ್ಮಾನಿಸುವುದಾದಲ್ಲಿ, ಸಿಂಡಿಕೇಟ್ ಸದಸ್ಯರನ್ನು ಅಧ್ಯಕ್ಷರಾಗಿ ನೇಮಕ ಮಾಡಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.<br><br>ಮಾನ್ಯ ಸದಸ್ಯರಾದ ಡಾ. ಪಾಂಡುರಂಗಪ್ಪನವರು ಮಾತನಾಡಿ, ಸಿಂಡಿಕೇಟ್ ಸದಸ್ಯರು ಸ್ಥಳೀಯ ವಿಚಾರಣಾ ಸಮಿತಿಯಲ್ಲಿ ಪಾಲ್ಗೊಳ್ಳುವುದು ಸರಿಯಲ್ಲವೆಂದು ತಿಳಿಸಿ, ತಮ್ಮನ್ನು ಯಾವುದೇ ಸ್ಥಳೀಯ ವಿಚಾರಣಾ ಸಮಿತಿಗೆ ಪರಿಗಣಸಬಾರದೆಂದು ಹೇಳಿದರು. ಡಾ. ದೇವರಾಜ್ ರವರು ಸಹ ಡಾ: ಪಾಂಡುರಂಗಪ್ಪನವರ ಅಭಿಪ್ರಾಯಕ್ಕೆ ಸಹಮತಿ ವ್ಯಕ್ತಪಡಿಸಿ ತಮ್ಮನ್ನು ಯಾವುದೇ ಸ್ಥಳೀಯ ವಿಚಾರಣಾ ಸಮಿತಿಗೆ ಪರಿಗಾಣಿಸಬಾರದೆಂದು ಹೇಳಿದರು. ಶ್ರೀ ಕರಣ್‌ಕುಮಾರ್‌ರವರು ತಮಗೆ ನೈಸರ್ಗಿಕ ನ್ಯಾಯದ ತತ್ವದಲ್ಲಿ ನಂಬಿಕೆ ಇರುವುದರಿಂದ ತಮ್ಮನ್ನು ಯಾವುದೇ ಸ್ಥಳೀಯ |

| | |
|---|---|
| | ವಿಚಾರಣಾ ಸಮಿತಿಗೆ ಪರಿಗಣಿಸಬಾರದೆಂದು ಹೇಳಿ, ಇದು ತಮ್ಮ ವೈಯುಕ್ತಿಕ ಅಭಿಪ್ರಾಯವೆಂದು ತಿಳಿಸಿದರು.<br>ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್‌ರವರು ಸಹ ಶ್ರೀ ಕರಣಕುಮಾರ್ ರವರ ಅಭಿಪ್ರಾಯಕ್ಕೆ ಸಹಮತ ವ್ಯಕ್ತಪಡಿಸಿ ಸ್ಥಳೀಯ ವಿಚಾರಣಾ ಸಮಿತಿಗಳು ನೀಡುವ ವರದಿಗಳನ್ನು ಸಿಂಡಿಕೇಟ್ ಸಭೆಯಲ್ಲಿ ಪರಿಶೀಲಿಸಿ ವಿಮರ್ಶಿಸಲು ಅವಕಾಶ ಮುಕ್ತವಾಗಿಟ್ಟುಕೊಳ್ಳಲು, ತಮ್ಮನ್ನು ಕೂಡ ತಮ್ಮನ್ನು ಯಾವುದೇ ಸ್ಥಳೀಯ ವಿಚಾರಣಾ ಸಮಿತಿಗೆ ಪರಿಗಣಿಸಬಾರದೆಂದು ಹೇಳಿದರು.<br>**ಸಿಂಡಿಕೇಟ್ ನಿರ್ಣಯ:**<br>**ಚರ್ಚೆಯ ನಂತರ, ಶ್ರೀ ಕರಣಕುಮಾರ್, ಶ್ರೀಮತಿ ಜ್ಯೋತಿ ವಿಜಯ್ ಹಾಗೂ ಡಾ. ವಿ.ಆರ್. ದೇವರಾಜ್ ಅವರನ್ನು ಹೊರತುಪಡಿಸಿ, ಸಿಂಡಿಕೇಟ್ ಸದಸ್ಯರನ್ನು ಸ್ಥಳೀಯ ವಿಚಾರಣಾ ಸಮಿತಿಗಳಿಗೆ ಅಧ್ಯಕ್ಷರಾಗಿ ನೇಮಕ ಮಾಡಲು ಸಿಂಡಿಕೇಟ್ ಸಭೆ ಬಹುಮತದಿಂದ ತೀರ್ಮಾನಿಸಿತು. ಅದರಂತೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000 ರಲ್ಲಿ ಒದಗಿಸಲಾಗಿರುವ ಅವಕಾಶಗಳ ಪ್ರಕಾರ ಹಾಗೂ ಈ ಕುರಿತ ಬೆಂಗಳೂರು ವಿಶ್ವವಿದ್ಯಾನಿಲಯದ ಪರಿನಿಯಮಗಳ ಅನ್ವಯ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲು ಕುಲಪತಿಗಳಿಗೆ ಅಧಿಕಾರ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.** |
| ವಿಷಯ ಸಂಖ್ಯೆ–25 | **Nomnee of the Syndicate to the proposed Search Committee under Sectio 14(2) of K.S.U. Act 2000 for appointment of Vice-Chancellor to Bengaluru City University.**<br>The Registrar explained the provisions of Section 14(2) of the Act for nominating a Member on the Search Committee.<br>Dr. K.R. Chandranath proposed the name of Prof. N.R. Shetty, former Vice-Chancellor of Bangalore University and Chancellor of Central University of Karnataka, Kalaburagi to be the nominee of the Syndicate of Bengaluru City University for the proposed Search Committee for appointment of Vice-Chancellor of Bengaluru City University. Dr. Srinivasaiah, seconded the proposal.<br>**DECISION OF THE SYNDICATE**<br>**The Syndicate unanimously resolved to nominate Prof. N.R. Shetty, former Vice-Chancellor of Bangalore University and Chancellor of Central University of Karnataka, Kalaburagi to be the nominee of the Syndicate of Bengaluru City University for the proposed Search Committee for appointment of Vice-Chancellor of Bengaluru City University under Section 14(2) of the K.S.U. Act, 2000.** |

| | |
|---|---|
| ವಿಷಯ ಸಂಖ್ಯೆ–26 | ಸರ್ಕಾರದ ಆದೇಶ ದಿನಾಂಕ 10–07–2020ರಲ್ಲಿ ಸೂಚಿಸಿರುವ ಮಾನದಂಡಗಳನ್ನು ಅಳವಡಿಸಿಕೊಂಡು ಮಧ್ಯಂತರ ಸೆಮಿಸ್ಟರುಗಳ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗಳಿಗೆ ತೇರ್ಗಡೆ ಮಾಡುವ ಸಂಬಂಧ ನಿಯಮಾವಳಿಗಳನ್ನು ಸಿದ್ಧಪಡಿಸಲು ರಚಿಸಲಾದ ಸಮಿತಿ ನೀಡಿರುವ ವರದಿಯನ್ನು ಸಿಂಡಿಕೇಟ್ ಮುಂದೆ ಮಂಡಿಸುವ ಬಗ್ಗೆ<br><br>ಕುಲಸಚಿವರು (ಮೌಲ್ಯಮಾಪನ) ರವರು ವರದಿಯಲ್ಲಿರುವ ವಿವರಗಳನ್ನು ಮತ್ತು ವಿವಿಧ ಆಯಾಮಗಳನ್ನು ಸಮಿತಿ ಪರಿಗಣಿಸಿದ ಹಲವಾರು ದೃಷ್ಯಾಂತಗಳನ್ನು ವಿವರಿಸಿ ಎಲ್ಲಾ ಸಾಧ್ಯಾಸಾಧ್ಯತೆಗಳನ್ನು ಹಾಗೂ ಪ್ರಸ್ತುತ ಸಂದರ್ಭಕ್ಕೆ ಅಗತ್ಯವಾದ ಮಾನದಂಡಗಳನ್ನು ಸಮಿತಿ ಪರಿಗಣಿಸಿ ವರದಿ ನೀಡಿದೆ ಎಂದು ಹೇಳಿದರು.<br>ಸಿಂಡಿಕೇಟ್ ನಿರ್ಣಯ:<br>ಮಧ್ಯಂತರ ಸೆಮಿಸ್ಟರುಗಳ ವಿದ್ಯಾರ್ಥಿಗಳನ್ನು ಮುಂದಿನ ತರಗತಿಗಳಿಗೆ ತೇರ್ಗಡೆ ಮಾಡಲು ಅನುಸರಿಸಬೇಕಾದ ಮಾನದಂಡಗಳನ್ನು ಸಿದ್ಧಪಡಿಸಲು ರಚಿಸಿದ ಸಮಿತಿಯ ವರದಿಯನ್ನು ಸಭೆ ಪರಿಶೀಲಿಸಿ ಸದರಿ ಮಾನದಂಡಗಳನ್ನು ಪ್ರಸ್ತುತ ವರ್ಷಗಳ ಸೆಮಿಸ್ಟರ್ ಪರೀಕ್ಷೆಗಳಿಗೆ ಸೀಮಿತಗೊಳಿಸಿ ಅನುಮೋದನೆ ನೀಡಲು ನಿರ್ಣಯಿಸಿತು ಹಾಗೂ ಯಾವುದೇ ವಿದ್ಯಾರ್ಥಿಗೆ ಸದರಿ ಮಾನದಂಡದ ಫಲಿತಾಂಶಗಳು ಒಪ್ಪಿಗೆ ಇಲ್ಲವಾದಲ್ಲಿ ಈ ಪ್ರಕ್ರಿಯೆಯಿಂದ ಹೊರಗುಳಿದು ನಂತರ ಪರೀಕ್ಷೆ ಬರೆಯಲು ಅವಕಾಶ ನೀಡಲು ಸಭೆ ಸರ್ವಾನುಮತದ ಒಪ್ಪಿಗೆ ನೀಡಿತು. |
| ವಿಷಯ ಸಂಖ್ಯೆ–27 | ಕೋವಿಡ್–19 ಸಾಂಕ್ರಾಮಿಕ ರೋಗದ ಹಿನ್ನಲೆಯಲ್ಲಿ ಅಂತಿಮ ವರ್ಷದ ಪರೀಕ್ಷೆಗಳನ್ನು (ಬ್ಯಾಕ್ ಲಾಗ್ ಸೇರಿದಂತೆ) ಹೊರತುಪಡಿಸಿ ಪರೀಕ್ಷಾ ಶುಲ್ಕದಲ್ಲಿ ಶೇ. 50 ರಷ್ಟು ರಿಯಾಯಿತಿ ನೀಡುವ ಬಗ್ಗೆ.<br><br>ಸಿಂಡಿಕೇಟ್ ನಿರ್ಣಯ:<br>ಸರ್ಕಾರದ ಆದೇಶ ಸಂ ಇಡಿ 197 ಯುಎಎನ್ 2020 ದಿನಾಂಕ 14.08.2020 ಪ್ರಕಾರ ಇಂಟರ್ ಮಿಡಿಯೇಟ್ ಸೆಮಿಸ್ಟರ್/ವಾರ್ಷಿಕ ಸ್ನಾತಕ ಮತ್ತು ಸ್ನಾತಕೋತ್ತರ ಪರೀಕ್ಷೆಗಳಿಗಾಗಿ ವಿದ್ಯಾರ್ಥಿಗಳು ಈಗಾಗಲೇ ಪಾವತಿಸಿರುವ ಪರೀಕ್ಷಾ ಶುಲ್ಕದ ಮೊತ್ತದಲ್ಲಿ ಶೇಕಡ 50 ವಿನಾಯತಿ ನೀಡಲು ಹಾಗೂ ಈ ರೀತಿ ವಿನಾಯಿತಿ ನೀಡಲಾದ ಮೊತ್ತವನ್ನು ಮುಂದಿನ ಶೈಕ್ಷಣಿಕ ವರ್ಷದಲ್ಲಿ ನಡೆಸುವ ಪರೀಕ್ಷಾ ಶುಲ್ಕಕ್ಕೆ ಹೊಂದಾಣಿಕೆ ಮಾಡಿಕೊಳ್ಳಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಲು ಸರ್ವಾನುಮತದಿಂದ ತೀರ್ಮಾನಿಸಿತು. |
| ವಿಷಯ ಸಂಖ್ಯೆ–28 | ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಜ್ಞಾನಜ್ಯೋತಿ ಸಭಾಂಗಣ ಮುಂದಿನ ಉದ್ಯಾನವನ, ನಿರ್ವಹಣೆ ಮತ್ತು ನೀರಾವರಿ ವ್ಯವಸ್ಥೆ, ಉದ್ಯಾನವನ ನಿರ್ಮಾಣ ಇತ್ಯಾದಿ ಕಾರ್ಯಕ್ಕೆ 4(ಜಿ) ಯಿಂದ ವಿನಾಯಿತಿ ಪಡೆದಿರುವ ಸಂಸ್ಥೆಯಿಂದ ಸೇವೆ ಪಡೆಯುವ ಬಗ್ಗೆ.<br><br>ಸಿಂಡಿಕೇಟ್ ನಿರ್ಣಯ:<br><br>ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿ ಆವರಣದ ಉದ್ಯಾನವನಗಳ ನಿರ್ಮಾಣ, ನಿರ್ವಹಣೆ ಹಾಗೂ ಸುತ್ತಮುತ್ತಲಿನ ಸ್ಥಳ ಸ್ವಚ್ಛಗೊಳಿಸುವ, ಅಲಂಕಾರಿಕ ಗಿಡ, ಹೂವಿನ ಗಿಡಗಳನ್ನು ನೆಡುವ ಹಾಗೂ ನೀರಿನ ವ್ಯವಸ್ಥೆ ಇತ್ಯಾದಿ ಕೆಲಸಗಳನ್ನ ನರ್ವಹಿಸಲು 4(ಜಿ) ವಿನಾಯಿತಿ ಪಡೆದಿರುವ ದಿ. ನರ್ಸರಿಮೆನ್ ಕೋ–ಆಪರೇಟಿವ್ ಸೋಸೈಟಿ ಲಿ. ಸಂಸ್ಥೆಯಿಂದ ಸೇವೆ ಪಡೆಯಲು ಸಿಂಡಿಕೇಟ್ ಸಭೆ ಸವಾನುಮತ ಅನುಮೋದನೆ ನೀಡಿತು. |

| | |
|---|---|
| ವಿಷಯ ಸಂಖ್ಯೆ–29 | ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಉಪಕುಲಸಚಿವರನ್ನು ವಿಶ್ವವಿದ್ಯಾಲಯದಲ್ಲಿ ಸಮಾಲೋಚಕರಾಗಿ ನೇಮಕಾತಿ ಮಾಡಿಕೊಳ್ಳುವ ಬಗ್ಗೆ.<br><br>ಸಿಂಡಿಕೇಟ್ ನಿರ್ಣಯ:<br><br>ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿ, ಶ್ರೀ ಎಸ್. ವಾಗೀಶ ಹಾಗೂ ಶ್ರೀ ಎನ್. ಶ್ರೀನಿವಾಸನ್, ನಿವೃತ್ತ ಉಪಕುಲಸಚಿವರು ಇವರನ್ನು ದಿನಾಂಕ 09-09-2020ರಿಂದ ಅನ್ವಯಿಸಿ ಒಂದು ವರ್ಷದ ಅವಧಿಗೆ ಖಾಲಿ ಇರುವ ಟೆಕ್ನಿಕಲ್ ಅಸಿಸ್ಟಂಟ್ ಹುದ್ದೆಯ ಎದುರಾಗಿ ಸಮಾಲೋಚಕರಾಗಿ ನೇಮಕ ಮಾಡಿಕೊಳ್ಳಲು ಅನುಮೋದನೆ ನೀಡಲಾಯಿತು.<br><br>ಗರಿಷ್ಠ ವಾರ್ಷಿಕ 5ಲಕ್ಷ ರೂಪಾಯಿಗಳ ಮಿತಿಗೆ ಒಳಪಟ್ಟು ಇವರಿಗೆ ಸಮಾಲೋಚಕರ ಶುಲ್ಕ ನಿಗದಿಪಡಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು. |
| ವಿಷಯ ಸಂಖ್ಯೆ–30 | ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಶ್ರೀ ವಿ. ತಿಪ್ಪೆಸ್ವಾಮಿ ಉಪನಿರ್ದೇಶಕರು ಅವರನ್ನು ವಿಶ್ವವಿದ್ಯಾಲಯದಲ್ಲಿ ಸಮಾಲೋಚಕರಾಗಿ ನೇಮಕಾತಿ ಮಾಡಿಕೊಳ್ಳುವ ಬಗ್ಗೆ.<br><br>ಸಿಂಡಿಕೇಟ್ ನಿರ್ಣಯ:<br><br>ಪ್ರಸ್ತಾವನೆಗೆ ಒಪ್ಪಿಗೆ ಸೂಚಿಸಿ, ಶ್ರೀ ವಿ. ತಿಪ್ಪೆಸ್ವಾಮಿ, ನಿವೃತ್ತ ಉಪ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ ಇವರನ್ನು ದಿನಾಂಕ 05-09-2020ರಿಂದ ಅನ್ವಯಿಸಿ ಆರು ತಿಂಗಳುಗಳ ಅವಧಿಗೆ ಅಥವಾ ಅವರಿಗೆ 70 ವರ್ಷ ವಯಸ್ಸು ಆಗುವವರೆಗೆ, ಇದರಲ್ಲಿ ಯಾವುದು ಮೊದಲೋ ಆ ಅವಧಿಗೆ, ಖಾಲಿ ಇರುವ ಟೆಕ್ನಿಕಲ್ ಅಸಿಸ್ಟಂಟ್ ಹುದ್ದೆಯ ಎದುರಾಗಿ ಸಮಾಲೋಚಕರಾಗಿ ನೇಮಕ ಮಾಡಿಕೊಳ್ಳಲು ಅನುಮೋದನೆ ನೀಡಲಾಯಿತು.<br><br>ಗರಿಷ್ಠ ವಾರ್ಷಿಕ 5ಲಕ್ಷ ರೂಪಾಯಿಗಳ ಮಿತಿಗೆ ಒಳಪಟ್ಟು ಇವರಿಗೆ ಸಮಾಲೋಚಕರ ಶುಲ್ಕ ನಿಗದಿಪಡಿಸಲು ಕುಲಪತಿಗಳಿಗೆ ಅಧಿಕಾರ ನೀಡಲಾಯಿತು. |
| ವಿಷಯ ಸಂಖ್ಯೆ–31 | ವಿಶ್ವವಿದ್ಯಾನಿಲಯದ ಎನ್.ಎಸ್.ಎಸ್. ಕೋಶಕ್ಕೆ ಸಿಬ್ಬಂದಿಯನ್ನು ವಿಶ್ವವಿದ್ಯಾನಿಲಯದ ವತಿಯಿಂದ ನೇಡುವ ಬಗ್ಗೆ<br><br>ಸಿಂಡಿಕೇಟ್ ನಿರ್ಣಯ:<br><br>ರಾಷ್ಟ್ರೀಯ ಸೇವಾ ಯೋಜನೆಯ ಕೋಶಕ್ಕೆ ಒಂದು ಕಿರಿಯ ಸಹಾಯಕ ಹಾಗೂ ಒಂದು ಗ್ರುಪ್–ಡಿ ಹುದ್ದೆಗಳಿಗೆ ಹೊರಗುತ್ತಿಗೆ ಮೂಲಕ ನೇಮಕ ಮಾಡಿಕೊಳ್ಳಲು ಅನುಮೋದನೆ ನೀಡಲಾಯಿತು. ಈ ಹುದ್ದೆಗಳನ್ನು ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದಿಸಲಾಗಿರುವ ಹುದ್ದೆಗಳ ಜೊತೆಗೆ ಸೇರಿಸಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಯಿತು. ಸದರಿ ಹುದ್ದೆಗಳಿಗೆ ತಗಲುವ ವೇತನದ ವೆಚ್ಚವನ್ನು ವಿಶ್ವವಿದ್ಯಾಲಯದ ಸಂಪನ್ಮೂಲದಿಂದ ಭರಿಸಲು ಅನುಮತಿ ನೀಡಲಾಯಿತು. |

| | |
|---|---|
| ವಿಷಯ ಸಂಖ್ಯೆ–32 | ಸಿ.ಬಿ.ಭಂಡಾರಿ ಜೈನ್ ಕಾಲೇಜಿನಲ್ಲಿ (ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಪತ್ರಿಕೋದ್ಯಮ) ಕೋರ್ಸನ್ನು ಹಾಗೂ ಸಿ.ಬಿ.ಭಂಡಾರಿ ಜೈನ್ ಸಂಜೆ ಕಾಲೇಜಿನಲ್ಲಿ ಬಿ.ಕಾಂ. ಕೋರ್ಸನ್ನು ಮುಚ್ಚುವ ಬಗ್ಗೆ.<br><br>**ಸಿಂಡಿಕೇಟ್ ನಿರ್ಣಯ:**<br><br>ಸಿ ಬಿ ಭಂಡಾರಿ ಜೈನ್ ಕಾಲೇಜಿನಲ್ಲಿ ಬಿ.ಎ (ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಪತ್ರಿಕೋದ್ಯಮ) ಕೋರ್ಸನ್ನು ಹಾಗೂ ಸಿ ಬಿ ಭಂಡಾರಿ ಜೈನ್ ಸಂಜೆ ಕಾಲೇಜಿನಲ್ಲಿ ಬಿ.ಕಾಂ. ಕೋರ್ಸನ್ನು ಮುಚ್ಚಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಿತು.<br><br>ಈಗಾಗಲೇ ಪ್ರವೇಶ ಪಡೆದು ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಇದ್ದರೆ ಅಂಥಹ ವಿದ್ಯಾರ್ಥಿಗಳ ಕೋರ್ಸಿನ ವ್ಯಾಸಂಗ ಮುಗಿಯುವವರೆಗೆ ಪಾಠಪ್ರವಚನಗಳಿಗೆ ವ್ಯವಸ್ಥೆ ಮಾಡಲು ಅಥವಾ ಬೇರೆ ಮಹಾವಿದ್ಯಾಲಯಕ್ಕೆ ವರ್ಗಾವಣೆ ಮಾಡಲು ಕ್ರಮಕೈಗೊಳ್ಳಲು ಸೂಚಿಸಲಾಯಿತು. |
| ವಿಷಯ ಸಂಖ್ಯೆ–33 | 2020–21ನೇ ಸಾಲಿನ ವಿದೇಶಿ ವಿದ್ಯಾರ್ಥಿಗಳಿಗೆ ಅರ್ಹತಾ ಪತ್ರವನ್ನು ನೀಡಲು ಸಿದ್ಧಪಡಿಸಿರುವ ಮಾರ್ಗಸೂಚಿಗಳ ಅನುಮೋದನೆ ಕುರಿತು.<br><br>**ಸಿಂಡಿಕೇಟ್ ನಿರ್ಣಯ:**<br><br>ಸ್ನಾತಕ ಮತ್ತು ಸ್ನಾತಕೋತ್ತರ ವ್ಯಾಸಂಗಗಳಿಗೆ ಪ್ರವೇಶ ಬಯಸುವ ವಿದೇಶಿ ವಿದ್ಯಾರ್ಥಿಗಳು ಅರ್ಹತಾ ಪತ್ರ ಪಡೆಯಲು ಸಿದ್ಧಪಡಿಸಿದ ಮಾರ್ಗಸೂಚಿಗಳಿಗೆ ಅನುಮೋದನೆ ನೀಡಲಾಯಿತು. |
| ವಿಷಯ ಸಂಖ್ಯೆ–34 | ದೈಹಿಕ ಶಿಕ್ಷಣ ವಿಭಾಗದಲ್ಲಿ ಕಛೇರಿ ಕೆಲಸ ನಿರ್ವಹಣೆಗಾಗಿ ಶ್ರೀ ದೇವರಾಜ್, ವಿದ್ಯಾರ್ಹತೆ ಎಂ.ಕಾಂ., ಅವರ ಸೇವೆಯನ್ನು ದಿನಾಂಕ 1–10–2019 ರಿಂದ ಪಡೆದಿರುವುದಕ್ಕೆ ಅನುಮೋದನೆ ಹಾಗೂ ವೇತನ ಪಾವತಿಸುವ ಬಗ್ಗೆ.<br><br>ದೈಹಿಕ ಶಿಕ್ಷಣ ವಿಭಾಗದಲ್ಲಿ ಕಛೇರಿ ಕೆಲಸ ನಿರ್ವಹಿಸುತ್ತಿರುವ ಶ್ರೀ ದೇವರಾಜ್ ಇವರ ಸೇವೆಯನ್ನು 08–02–2019 ರಿಂದ 30–09–2019ರ ವರೆಗೆ ಪಡೆದು ವೇತನ ಪಾವತಿ ಮಾಡಲಾಗಿದ್ದು ನಂತರ 01–10–2019 ರಿಂದ ಇವರ ಸೇವೆಯನ್ನು ಉಪಯೋಗಿಕೊಳ್ಳಲಾಗುತ್ತಿದ್ದು ಅವರಿಗೆ ವೇತನ ಪಾವತಿ ಮಾಡದಿರುವುದನ್ನು ಪರಿಗಣಿಸಿ, ಅವರ ಸೇವೆ ದೈಹಿಕ ಶಿಕ್ಷಣ ವಿಭಾಗಕ್ಕೆ ಅಗತ್ಯವಾಗಿರುವುದರಿಂದ ಅವರಿಗೆ ಬಾಕಿ ವೇತನ ಪಾವತಿಸಲು ಹಾಗೂ ಅವರ ಸೇವೆಯನ್ನು ಬೇರೆ ಸಿಬ್ಬಂದಿಗಳ ಜೊತೆಗೆ ಹೊರಗುತ್ತಿಗೆ ಮುಖಾಂತರ ಪಡೆಯಲು ಮತ್ತು ಇದಕ್ಕೆ ತಗಲುವ ವೇತನ ಸಂಬಂಧಿಸಿದ ವೆಚ್ಚಗಳನ್ನು ವಿಶ್ವವಿದ್ಯಾಲಯದ ಸಂಪನ್ಮೂಲದಿಂದ ಭರಿಸಲು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಕುಲಸಚಿವರು ಪ್ರಸ್ತಾಪಿಸಿದರು. |

ಮಾನ್ಯ ಸದಸ್ಯರಾದ ಶ್ರೀ ಹರಿಪ್ರಸಾದರವರು ಕೆಲಸ ಪಡೆದಮೇಲೆ ಅವರಿಗೆ ವೇತನ ಪಾವತಿಸಬೇಕಾಗುತ್ತದೆ ಎಂದು ಹೇಳಿದರು. ಅದರಂತೆ, ಮಾನ್ಯ ಸದಸ್ಯರುಗಳಾದ ಶ್ರೀ ಶ್ರೀನಿವಾಸಯ್ಯ ಮತ್ತು ಶ್ರೀ ಹೆಚ್. ಆರ್. ಸತೀಶ ರವರು ಶ್ರೀ ದೇವರಾಜ ಅವರಲ್ಲದೆ ಇನ್ನು ಇಬ್ಬರು ಮಾರ್ಕರ್‌ಗಳು ಸೇವೆ ಸಲ್ಲಿಸುತ್ತಿದ್ದು ಅವರಿಗೂ ವೇತನ ಪಾವತಿಯಾಗಿರುವುದಿಲ್ಲವೆಂದು ತಿಳಿಸಿದ್ದಾರೆ. ಇವರ ವಿಷಯವನ್ನೂ ಪರಿಗಣಿಸಬೇಕು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಡಾ. ಹೆಚ್. ಟಿ ಅರವಿಂದ ಹಾಗೂ ಶ್ರೀಮತಿ ಜ್ಯೋತಿ ವಿಜಯ್ ರವರು ಈ ರೀತಿಯಾಗಿ ವಿಧಿ ವಿಧಾನಗಳನ್ನು ಅನುಸರಿಸದೆ ಅನುಮೋದನೆ ಪಡೆಯುವುದು ಸರಿಯಲ್ಲವೆಂದು ತಿಳಿಸಿದರು.

ಕುಲಪತಿಗಳು ದೈಹಿಕ ಶಿಕ್ಷಣ ವಿಭಾಗದಲ್ಲಿ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿರುವ ಈ ಸಿಬ್ಬಂದಿಯ ವೇತನ ಪಾವತಿಯ ವಿಷಯ ಸುಮಾರು ದಿವಸಗಳಿಂದ ಬಗೆಹರಿಯದೇ ಮುಂದುವರೆಯುತ್ತಿದೆ. ಇನ್ನು ಇಬ್ಬರು ಮಾರ್ಕರ್‌ಗಳಿಗೆ ಸದಸ್ಯರು ಹೇಳಿದಂತೆ ಕೆಲವು ತಿಂಗಳುಗಳ ವೇತನ ಪಾವತಿ ಬಾಕಿ ಇದೆ. ಈ ಸಿಬ್ಬಂದಿಗಳು ಆಟದ ಮೈದಾನ ನಿರ್ವಹಣೆಯಲ್ಲಿ ಅನುಭವ ಹೊಂದಿದ್ದು, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದವರನ್ನು ಇಲ್ಲಿ ಉಳಿಸಿಕೊಳ್ಳಲಾಗಿದೆ. ಈ ಕುರಿತು ಸಿಂಡಿಕೇಟ್ ಸಭೆ ಸಹಾನುಭೂತಿಯಿಂದ ಪರಿಶೀಲಿಸಿ ತೀರ್ಮಾನಿಸಬೇಕೆಂದು ಹೇಳಿದರು.

ಸಿಂಡಿಕೇಟ್ ನಿರ್ಣಯ:

**ಪ್ರಸ್ತಾವನೆಯ ಕುರಿತು ವಿವರವಾಗಿ ಚರ್ಚಿಸಿ, ಸದರಿ ಸಿಬ್ಬಂದಿಗಳಿಗೆ ಬಾಕಿ ವೇತನ ಪಾವತಿ ಹಾಗು ಮುಂದುವರಿಕೆ ಕುರಿತು ಸಹಮತ ವ್ಯಕ್ತಪಡಿಸಿ ಬಾಕಿ ವೇತನ ಮಂಜೂರಾತಿ ಆದೇಶ ನೀಡುವ ಪೂರ್ವದಲ್ಲಿ ಸನ್ಮಾನ್ಯ ಸದಸ್ಯರುಗಳಾದ ಶ್ರೀ ಹರಿಪ್ರಸಾದ, ಶ್ರೀ ಶ್ರೀನಿವಾಸಯ್ಯ ಹಾಗೂ ಶ್ರೀ ಹೆಚ್. ಆರ್. ಸತೀಶ ರವರು ವಿವರಗಳನ್ನು ಪರಿಶೀಲಿಸಿ ವರದಿ ಪಡೆಯಬೇಕೆಂದು ತೀರ್ಮಾನಿಸಲಾಯಿತು. ಇವರ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಅನುಮತಿ ನೀಡಲಾಯಿತು.**

ಸನ್ಮಾನ್ಯ ಸದಸ್ಯರುಗಳಾದ ಶ್ರೀಮತಿ ಜ್ಯೋತಿ ವಿಜಯ ಮತ್ತು ಡಾ. ಹೆಚ್.ಟಿ. ಅರವಿಂದ ರವರು ಮೇಲಿನ ತೀರ್ಮಾನಕ್ಕೆ ತಮ್ಮ ಅಸಮ್ಮತಿ ಸೂಚಿಸಿದರು

| | |
|---|---|
| ವಿಷಯ ಸಂಖ್ಯೆ–35 | ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ಪ್ರಾಜೆಕ್ಟ್ ಮಾನಿಟರಿಂಗ್ ಯುನಿಟ್ (ಪಿ.ಎಂ.ಯು.) ನ್ನು ಸ್ಥಾಪಿಸಿ ಅದಕ್ಕೆ ಬೇಕಾಗಿರುವ ತಾಂತ್ರಿಕ ಸಿಬ್ಬಂದಿ ನೇಮಕಾತಿ ಬಗ್ಗೆ.<br><br>**ಸಿಂಡಿಕೇಟ್ ನಿರ್ಣಯ:**<br>**ಈ ವಿಷಯವನ್ನು Infrastructure and E-governance ಕುರಿತಂತೆ ರಚಿಸಲಾದ ಸಿಂಡಿಕೇಟ್ ಸ್ಥಾಯಿ ಸಮಿತಿಯ ಪರಿಶೀಲನೆಗೆ ಕಳುಹಿಸಲು ತೀರ್ಮಾನಿಸಲಾಯಿತು.** |

ಕುಲಸಚಿವರು ಸಭಾಧ್ಯಕ್ಷರಿಗೆ ಮತ್ತು ಎಲ್ಲಾ ಸದಸ್ಯರಿಗೆ ವಂದನೆಗಳನ್ನು ಅರ್ಪಿಸಿದನಂತರ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

**ಸಹಿ/–**
**ಕುಲಪತಿಗಳು**
**ಸಭಾಧ್ಯಕ್ಷರು**

–/ ಪ್ರತಿ /–

14/10/2020
**ಕುಲಸಚಿವರು**
ಬೆಂಗಳೂರು ನಗರ ವಿಶ್ವವಿದ್ಯಾನಿಲಯ

Enclosure of items No.....18.....

**Proposed payment of professional fees to the panel advocates appearing on behalf of Bengaluru Central University,**

| Sl. No. | Nature of case | Fee structure | REMARKS |
|---|---|---|---|
| 1. | **Before Hon'ble High Court:-**<br><br>Writ Appeal, Contempt petition, other Civil and Criminal Appeals and other petition/s before the Division Bench,<br>Both for appellant and Respondent side- | Rs.25,000/- for disposal, in case of batch matters Rs.25,000/- for first case and Rs.5000/- for each case, subject to maximum of Rs. 40,000/-<br><br>(Initial Professional Fee of Rs.10,000 to be paid in Advance after filing of case and filing of objections) | Miscellaneous fee including actual Court Fee, Process Fees, Typing Charges and other incidental expenses if any, will be paid at the time of filing |
| 2. | Writ Petition/s, Civil Revision Petition, Criminal Petition/s, Civil and Criminal Appeals and other petition/s before single bench<br>Both for Petitioner and Respondent side | Rs.20,000/- for disposal, in case of batch matters Rs.20,000/- for first case and Rs.3000/- for each case, subject to maximum of Rs. 40,000/-.<br><br>(Initial Professional Fee of Rs.10,000 to be paid in Advance after filing of case and filing of objections) | same |

| | | | |
|---|---|---|---|
| 3. | In case the Hon'ble High Court directed to take notice to the panel advocates, making single appearance before the court without conducting anything in the case where cases are disposed off the, at the Preliminary stage without filing objections. | Rs.2,000/- per single appearance on a particular day,<br><br>Rs.3,000/- for 2 cases in a single day,<br><br>Maximum of Rs.5,000/- for more than 2 cases in a single day. | |
| 4. | **Civil Court Cases**<br>Original Suits/Arbitration case/Appeals and other petitions.<br>Both for filing, prosecuting and defending. | Rs.25,000/- for disposal, in case of batch matter for Rs.25,000/- for first case and Rs.5000/- for each case, subject to maximum of Rs. 40,000/-<br><br>(Initial Professional Fee of Rs.10,000 to be paid in Advancc after filing of case and filing of objections) | Miscellaneous fee including actual Court Fee, Process Fees, Typing Charges and other incidental expenses if any will be paid at the time of filing |
| 5. | **Criminal Courts (Magistrate and Session Courts)**<br>Criminal Appeal/s, Petition/s, Revision petition/s, Private Complaint Register/s and etc., | Rs.20,000/- for disposal, in case of batch matter for Rs.20,000/- for first case and Rs.3000/- for each case, subject to maximum of Rs. 30,000/-<br><br>(Initial Professional Fee of Rs.10,000 to be paid in Advance after filing of case and filing of objections) | same |
| 6. | Before any other forum/s, Tribunal/s, Committees, courts, Authority/s, Appellate Authorities etc., | Rs.15,000/- for disposal, in case of batch matter for Rs.15,000/- for first case and Rs.3000/- for | |

| | | | |
|---|---|---|---|
| | | each case, subject to maximum of Rs. 25,000/-<br><br>(Initial Professional Fee Rs.5,000/- to be paid in Advance after filing of case and filing of objections) | same |
| 7. | For Filing caveat petition. | Rs.3,000/- | Actual miscellaneous fee (including typing and process fee) to be paid. |
| 8. | For issuing Legal Notice and Reply to legal notice. | Rs,5000/- | Actual miscellaneous fee (including typing and process fee) to be paid |
| 9. | For Giving Legal Opinion, scrutiny of documents, drafting of agreements, memorandum of Understanding and other title deeds. | Rs.10,000/- | |
| 10. | Supreme Court Matters | The vice chancellor is authorized to engage Advocate/s, senior counsel and to fix the fees having regard to the nature and importance of such cases in consultation with the law officer and Registrar. | |

| | | | |
|---|---|---|---|
| 11 | Engaging of Senior Counsel to the matters before High Court, subordinate courts and Tribunals, Authorities etc., and taking legal opinion | The vice chancellor is authorized to engage Advocate/s, senior counsel and to fix the fees having regard to the nature and importance of such cases in consultation with the Law officer and Registrar. | |

/ copy /

22/9/2020

Registrar
Bengaluru City University
Central College Campus,
Bengaluru - 560001.